ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 1 ಶುಕ್ರವಾರ 2022

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523,
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 342 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

₹4

ಮಾನಸಗಂಗೋತ್ರಿಗೆ ವರ್ಷದೊಳಗೆ ಕಾವೇರಿ ನೀರು

ಶಿಕ್ಷಣ ಮಂಡಳಿ ಸಾಮಾನ್ಯ ಸಭೆಯಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಮಾಹಿತಿ



ಮೈಸೂರಿನ ಮಾನಸಗಂಗೋತ್ರಿ ವಿಜ್ಞಾನ ಭವನದಲ್ಲಿ ಗುರುವಾರ ಮೈಸೂರು ವಿವಿಯ ಶಿಕ್ಷಣ ಮಂಡಳಿ 4ನೇ ಸಾಮಾನ್ಯ ಸಭೆಯಲ್ಲಿ ಕುಲಪತಿ ಪ್ರೊ.ಜಿ.ಹೇಮಂತಕುಮಾರ್ ಮಾತನಾಡಿದರು. ಕುಲಸಚಿವರಾದ ಪ್ರೊ.ಶಿವಪ್ಪ, ಪ್ರೊ.ಜ್ಞಾನಪ್ರಕಾಶ್ ಇತರರಿದ್ದರು.

ಮೈಸೂರು, ಮಾ.31(ಆರ್‌ಕೆಬಿ)– ಮೈಸೂರು ವಿವಿಯ ಮಾನಸಗಂಗೋತ್ರಿ ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿಗಳ ಬಹುದಿನಗಳ ಬೇಡಿಕೆಯಾಗಿದ್ದ ಕಾವೇರಿ ಕುಡಿಯುವ ನೀರನ್ನು ವರ್ಷದೊಳಗೆ ದೊರಕಿಸಿಕೊಡಲು ಪ್ರಯತ್ನಿಸಲಾಗುತ್ತಿದೆ ಎಂದು ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತಕುಮಾರ್ ತಿಳಿಸಿದರು.

ಮೈಸೂರಿನ ಮಾನಸಗಂಗೋತ್ರಿ ವಿಜ್ಞಾನ ಭವನದಲ್ಲಿ ಗುರುವಾರ ಮೈಸೂರು ವಿವಿಯ ಶಿಕ್ಷಣ ಮಂಡಳಿ 4ನೇ ಸಾಮಾನ್ಯ ಸಭೆಯಲ್ಲಿ ಅವರು ಈ ವಿಷಯ ತಿಳಿಸಿದರು.

ಮಾನಸಗಂಗೋತ್ರಿಯಲ್ಲಿ ಶುದ್ಧ ಕುಡಿಯುವ ನೀರು ಸಿಗದಿರುವ ಬಗ್ಗೆ ಪ್ರೊ.ಮುಜಾಫರ್ ಅಸಾದಿ ಎತ್ತಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ತುಂಬಾ ವರ್ಷದಿಂದ ಗಂಗೋತ್ರಿ ವಿದ್ಯಾರ್ಥಿಗಳಿಗೆ ಕಾವೇರಿ ನೀರು ಸಿಗಬೇಕೆಂಬ ಬೇಡಿಕೆ ಇದೆ. ಆದರೆ, ಇದಕ್ಕೆ ಇದೀಗ ಕಾಲ ಕೂಡಿ ಬಂದಿದೆ. 3 ಕೋಟಿ ವೆಚ್ಚದಲ್ಲಿ ಯೋಜನೆ ಸಿದ್ಧವಾಗಿದೆ. ಈಗಾಗಲೇ 1 ಕೋಟಿ ಮೊತ್ತವನ್ನು ಕಾವೇರಿ ನೀರಾವರಿ ಮಂಡಳಿಗೆ ನೀಡಲಾಗಿದೆ. ಎರಡು ಮೂರು ಬಾರಿ ಸಭೆಯನ್ನು ಮಾಡಲಾಗಿದೆ. ಕಾವೇರಿ ಹಿನ್ನೀರಿನ ಪ್ರದೇಶದಿಂದ ಗಂಗೋತ್ರಿಗೆ ಸಂಪರ್ಕ ಸಾಧಿಸಲಾಗುತ್ತಿದೆ ಎಂದರು.

ಸದ್ಯ ಗಂಗೋತ್ರಿಗೆ ಬೋರ್‌ವೆಲ್ ನೀರು ಲಭ್ಯವಿದೆ. ಕೆಲವೊಮ್ಮೆ ಈ ನೀರು ಕಲುಷಿತಗೊಳ್ಳುತ್ತಿದೆ. ಇದರಿಂದ ವಿಜ್ಞಾನ ಲ್ಯಾಬ್‌ನಲ್ಲಿ ಈ ನೀರನ್ನು ಬಳಸಿ ಪರೀಕ್ಷೆ ಮಾಡಲು ಕಷ್ಟವಾಗುತ್ತಿದೆ. ಅಲ್ಲದೆ, ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಗಂಗೋತ್ರಿಯಲ್ಲಿ ಈಗ 4 ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಇದನ್ನೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಕಾವೇರಿ ನೀರನ್ನು ಮಾನಸ ಗಂಗೋತ್ರಿಗೆ ಹರಿಸಲು ಎಲ್ಲಾ ಪ್ರಯತ್ನಗಳನ್ನು ನಡೆಸಲಾಗುತ್ತಿದೆ ಎಂದರು.

ಸರ್ಕಾರಿ ನಾಮನಿರ್ದೇಶನ ಸದಸ್ಯ ಶಶಿಕುಮಾರ್ ಮಾತನಾಡಿ, ಪ್ರತಿವರ್ಷ ವಿಶ್ವವಿದ್ಯಾನಿಲಯದ ಬಜೆಟ್‌ನಲ್ಲಿ ವಿದ್ಯುತ್ ಬಿಲ್‌ಗೆಂದು 4 ಕೋಟಿ ಖರ್ಚಾಗುತ್ತಿದೆ. ಅದರ ಬದಲು ಮಾನಸಗಂಗೋತ್ರಿಯ ಎಲ್ಲಾ ವಿಭಾಗಕ್ಕೂ ಸೋಲಾರ್ ಸಂಪರ್ಕ ಕಲ್ಪಿಸಿದರೆ ಖರ್ಚು ಕಡಿಮೆ ಮಾಡಬಹುದು ಎಂದು ಸಲಹೆ ನೀಡಿದರು.

ಇದಕ್ಕೆ ಉತ್ತರಿಸಿದ ಕುಲಪತಿ, ಈಗಾಗಲೇ ಎರಡು ವಿಭಾಗಕ್ಕೆ ಸೋಲಾರ್ ಸೌಲಭ್ಯ ಕಲ್ಪಿಸಲಾಗಿದ್ದು, 15 ವಿಭಾಗಗಳಿಗೆ ನೀಡಿದರೆ 1.5 ಕೋಟಿ ವಿದ್ಯುತ್ ಬಿಲ್ ಉಳಿಸಬಹುದು ಎಂದು ಹೇಳಿದರು.

ಮಂಡ್ಯ ಕ್ಷೇತ್ರದ ಶಾಸಕ, ಶೈಕ್ಷಣಿಕ ಮಂಡಳಿ ಸದಸ್ಯ ಎಂ.ಶ್ರೀನಿವಾಸ್, ವಿಧಾನ ಪರಿಷತ್ ಸದಸ್ಯೆ ವೀಣಾ ಅಚ್ಚಯ್ಯ, ಕುಲಸಚಿವರಾದ ಪ್ರೊ.ಆರ್.ಶಿವಪ್ಪ, ಪ್ರೊ.ಎ.ಪಿ.ಜ್ಞಾನಪ್ರಕಾಶ್ (ಪರೀಕ್ಷಾಂಗ), ಹಣಕಾಸು ಅಧಿಕಾರಿ ಡಾ.ಸಂಗೀತಾ ಗಜಾನನ್ ಭಟ್, ಯೋಜನಾ ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿ ನಿರ್ದೇಶಕ (ಇಎಂಇಬಿ) ಪ್ರೊ.ಎನ್.ಕೆ.ಲೋಕನಾಥ್, ಡೀನ್‌ಗಳಾದ ಡಾ.ಬಸವರಾಜಪ್ಪ, ಪ್ರೊ.ಮುಜಾಫರ್ ಅಸಾದಿ ಇನ್ನಿತರರು ಉಪಸ್ಥಿತರಿದ್ದರು.

ಬೌದ್ಧ ಅಧ್ಯಯನ ಕೇಂದ್ರ ಸ್ಥಾಪಿಸಲು ಸರ್ಕಾರಕ್ಕೆ ಪ್ರಸ್ತಾವನೆ: ಬೌದ್ಧ ಅಧ್ಯಯನ ಕೇಂದ್ರ ಸ್ಥಾಪಿಸಲು ಸರ್ಕಾರಕ್ಕೆ ಶೀಘ್ರವೇ ಪ್ರಸ್ತಾವನೆ ಕಳುಹಿಸಲಾಗುವುದು ಎಂದು ಕುಲಪತಿ ಪ್ರೊ.ಹೇಮಂತ್‌ಕುಮಾರ್ ತಿಳಿಸಿದರು.

ಸದ್ಯ ಅಂಬೇಡ್ಕರ್ ಸ್ಟಡಿ ಸೆಂಟರ್‌ನಲ್ಲಿ ಬೌದ್ಧ ಅಧ್ಯಯನ ಕೇಂದ್ರ ನಡೆಯುತ್ತಿದೆ. ಹಾಗಾಗಿ ಶೀಘ್ರವೇ ಸರ್ಕಾರಕ್ಕೆ ಅನುಮೋದನೆ ಕೋರಲಾಗುವುದು. ಇದಕ್ಕಾಗಿ ಪ್ರಸ್ತಾವನೆಯೊಂದನ್ನು ತಯಾರಿಸಿ ಕಳುಹಿಸಿಕೊಡಲಾಗುವುದು ಎಂದು ಹೇಳಿದರು.

ಇದೇ ವೇಳೆ ದೂರ ಶಿಕ್ಷಣದ 250 ವಿದ್ಯಾರ್ಥಿಗಳ ವ್ಯಾಸಂಗ ದೃಷ್ಟಿಯಿಂದ ಮುಕ್ತ ಐಚ್ಛಿಕ ಪತ್ರಿಕೆಯನ್ನು ಪ್ರಾಜೆಕ್ಟ್ ವರ್ಕ್ ಪತ್ರಿಕೆಯೆಂದು ಪರಿಗಣಿಸುವ ಬಗ್ಗೆ ಸಭೆಯಲ್ಲಿ ಅನುಮೋದನೆ ದೊರೆಯಿತು.

ವಿಶ್ವವಿದ್ಯಾಲಯದಲ್ಲಿ ಚಿನ್ನದ ಪದಕ ದತ್ತಿ, ಸುಮಂಗಲಮ್ಮ ರಂಗಸ್ವಾಮಿ ನಗದು ಬಹುಮಾನ ದತ್ತಿ ಸ್ಥಾಪನೆ ಹಾಗೂ ತತ್ತ್ವಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ ಪಡೆಯಲು ತಾತ್ಕಾಲಿಕ ನೋಂದಣಿ ನೀಡುವ ಬಗ್ಗೆ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ, ಅನುಮೋದನೆ ದೊರೆಯಿತು.

ಮೀಟಿಂಗ್ ಬೇಡ.. ಸಹಿ ಹಾಕಿಕೊಟ್ಟು ಹೋಗುತ್ತೇವೆ... ನೀವೇ ಮಾಡಿಕೊಳ್ಳಿ...!

ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಸಾಮಾನ್ಯ ಸಭೆಯನ್ನು ಆರಂಭಿಸುತ್ತಿದ್ದಂತೆ ನಾಮನಿರ್ದೇಶಿತ ಸದಸ್ಯ ಶಶಿಕುಮಾರ್ ಕ್ರಿಯಾಲೋಪ ಎತ್ತಿದರು. ಸಾಮಾನ್ಯ ಸಭೆಗೆ ಬಂದ ಬಳಿಕ ಬಜೆಟ್ ಮಾಹಿತಿ ಪುಸ್ತಕ ನೀಡಲಾಗಿದೆ. ಹೀಗಾದರೆ ನಾವು ಮಾಹಿತಿ ಓದುತ್ತಾ ಕೂರಬೇಕೇ? ಮೀಟಿಂಗ್ ನಡೆಸುವುದು ಬೇಡ, ಸಹಿ ಹಾಕಿಕೊಟ್ಟು ಬಿಡುತ್ತೇವೆ. ನೀವೇ ಮಾಡಿಕೊಳ್ಳಿ. ಪೋಸ್ಟ್ ಆಫೀಸ್ ರಜೆ ಇದ್ದರೆ, ಸದಸ್ಯರಿಗೆ ಮಾಹಿತಿ ಪುಸ್ತಕ ತಲುಪಿಸಲು ವಿಶ್ವವಿದ್ಯಾನಿಲಯದಲ್ಲಿ ವಾಹನ ಇಲ್ಲವೇ? ಎಂದು ಸಭೆಯ ಆರಂಭದಲ್ಲಿಯೇ ಕ್ರಿಯಾಲೋಪ ಎತ್ತಿದರು.

ಮಂಡ್ಯ ಶಾಸಕ ಶ್ರೀನಿವಾಸ್ ಅವರೂ ಇದಕ್ಕೆ ದನಿಗೂಡಿಸಿದರು. ಬಹಳ ಬೇಜಾರಾಗುತ್ತದೆ. ಯಾಕೆ ಏನೂ ಗೊತ್ತಿಲ್ಲವೇ ಎಂದು ಬೇಸರ ವ್ಯಕ್ತಪಡಿಸಿದರು. ಇದಕ್ಕೆ ಸಮಜಾಯಿಷಿ ನೀಡಿದ ಕುಲಪತಿಗಳು, ತೊಂದರೆಗೆ ವಿಷಾದಿಸುತ್ತೇವೆ. ಮುಂದೆ ಹೀಗಾಗದಂತೆ ನೋಡಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡುವ ಮೂಲಕ ತೆರೆ ಎಳೆದರು.

ಮೈಸೂರು ವಿವಿಗೆ ರೂ.8.47 ಕೋಟಿ ಉಳಿತಾಯ ಬಜೆಟ್

- ನಿರೀಕ್ಷಿತ ಆದಾಯ ರೂ. 393.84 ಕೋಟಿ
- ನಿರೀಕ್ಷಿತ ವೆಚ್ಚ ರೂ. 385.57 ಕೋಟಿ

ಮೈಸೂರು,ಮಾ.31–ಮೈಸೂರು ವಿಶ್ವವಿದ್ಯಾನಿಲಯದಲ್ಲಿ 2022–23ನೇ ಆರ್ಥಿಕ ಸಾಲಿನ ಬಜೆಟ್‌ನಲ್ಲಿ ಒಟ್ಟಾರೆ ನಿರೀಕ್ಷಿತ ಆದಾಯ ರೂ.393.84 ಕೋಟಿ ರೂ. ಮತ್ತು ರೂ.385.57 ಕೋಟಿ ರೂ.ಗಳ ನಿರೀಕ್ಷಿತ ವೆಚ್ಚ ಸೇರಿದಂತೆ ಒಟ್ಟಾರೆ 8.47 ಕೋಟಿ ರೂ.ಗಳ ಉಳಿತಾಯ ಬಜೆಟ್ ಅನ್ನು ಗುರುವಾರ ಮೈಸೂರು ವಿವಿ ಶಿಕ್ಷಣ ಮಂಡಳಿಯ 4ನೇ ಸಾಮಾನ್ಯ ಸಭೆಯಲ್ಲಿ ಮಂಡಿಸಲಾಯಿತು.

ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯ ಬಳಿಕ ಮೈಸೂರು ವಿವಿ ಹಣಕಾಸು ಅಧಿಕಾರಿ ಡಾ.ಸಂಗೀತಾ ಗಜಾನನ್ ಭಟ್ ಅವರು ಬಜೆಟ್ ಮಂಡಿಸಿ, ಅನುಮೋದನೆ ಪಡೆದುಕೊಂಡರು.

ಬಜೆಟ್ ಅಂದಾಜಿನಲ್ಲಿ ಖಾಯಂ ಸಿಬ್ಬಂದಿ ವೇತನ ಮತ್ತು ಪಿಂಚಣಿಗಳ ಅನುದಾನದ ಕುರಿತಾಗಿ ರಾಜ್ಯ ಸರ್ಕಾರದಿಂದ ಒಟ್ಟಾರೆ 171.75 ಕೋಟಿ (ವೇತನಾನುದಾನ ರೂ.121.75 ಕೋಟಿ ಮತ್ತು ರೂ.50 ಕೋಟಿ ರೂ. ಮಂಜೂರಾಗಿದೆ. ಪಿಂಚಣಿ ಭತ್ಯೆಗಳ ಪಾವತಿ ಕುರಿತು ಸರ್ಕಾರದಿಂದ ಅನುದಾನ ರೂ. 50 ಕೋಟಿಗಳನ್ನು ಹೆಚ್ಚುವರಿಯಾಗಿ ನಿರೀಕ್ಷಿಸಿ, ಒಟ್ಟಾರೆ 221.75 ಕೋಟಿ ಆದಾಯ ಪರಿಗಣಿಸಲಾಗಿದೆ. ಆಂತರಿಕ ಸಂಪನ್ಮೂಲಗಳಿಂದ ಪ್ರವೇಶ, ನೋಂದಣಿ, ಸಂಯೋಜನೆ ಹಾಗೂ ಇನ್ನಿತರೆ ಶುಲ್ಕಗಳಿಂದ ರೂ. 40 ಕೋಟಿ, ಸ್ಕೀಂ 'ಬಿ' ಕೋರ್ಸ್‌ಗಳಿಂದ ರೂ.4 ಕೋಟಿ, ಪರೀಕ್ಷಾ ಚಟುವಟಿಕೆಗಳಿಂದ ರೂ.52 ಕೋಟಿ, ವಿಶ್ವವಿದ್ಯಾನಿಲಯದ ವಿವಿಧ ಆಸ್ತಿಗಳಿಂದ 4 ಕೋಟಿ ಹಾಗೂ ಇತರೆ ಮೂಲಗಳಿಂದ ರೂ.4 ಕೋಟಿಗಳನ್ನು ನಿರೀಕ್ಷಿಸಲಾಗಿದೆ. ಒಟ್ಟಾರೆ ರೂ. 104 ಕೋಟಿ ನಿರೀಕ್ಷಿತ ಆಂತರಿಕ ಆದಾಯ ಎಂದರು.

2021–22ನೇ ಸಾಲಿನ ಬಜೆಟ್ ಅಂದಾಜುಗಳನ್ವಯ ರೂ.4,29,22,062 ಉಳಿದಿದ್ದು, ಇದನ್ನು ಆರಂಭಿಕ ಶಿಲ್ಕು ಎಂದು ಪರಿಗಣಿಸಲಾಗಿದೆ. ವಿವಿಯ ಒಟ್ಟು 21 ಖಾತೆಗಳ ಸ್ವೀಕೃತಿ ಹಾಗೂ ಬಡ್ಡಿ ಮೊತ್ತ ಸೇರಿ ಒಟ್ಟು ಆದಾಯ ರೂ.68.09 ಕೋಟಿ ಆಗಿದೆ. 2022–23ನೇ ಸಾಲಿನಲ್ಲಿ ಒಟ್ಟಾರೆಯಾಗಿ ರೂ.393.84 ಕೋಟಿ ಆದಾಯ ನಿರೀಕ್ಷಿಸಲಾಗಿದೆ ಎಂದು ಹೇಳಿದರು.

2022–23ನೇ ಸಾಲಿನಲ್ಲಿ ಪಿಂಚಣಿ ಖಾತೆಯ ಮೇಲಿನ ಬಡ್ಡಿ ರೂ.10 ಕೋಟಿ ಹಾಗೂ ಇನ್ನುಳಿದ ಖಾತೆಗಳ ನಿಶ್ಚಿತ ಠೇವಣಿ ಮತ್ತು ಉಳಿತಾಯ ಖಾತೆಗಳ ಮೇಲಿನ ಬಡ್ಡಿ 10.87 ಸೇರಿ ಒಟ್ಟು ರೂ.20,87,60,000 ರೂ.ಗಳು 2022–23ನೇ ಸಾಲಿನ ಒಟ್ಟಾರೆ ಆದಾಯ 393.84 ಕೋಟಿಗಳಲ್ಲಿ ಒಳಗೊಂಡಿರುತ್ತದೆ ಎಂದರು.

ಸುತ್ತೂರು ಕ್ಷೇತ್ರದಲ್ಲಿ ನಾಳೆ ಯುಗಾದಿ, ಅಲ್ಲಮಪ್ರಭು ಜಯಂತಿ, ಪಂಚಾಂಗ ಶ್ರವಣ

ಮೈಸೂರು, ಮಾ.31–ಸುತ್ತೂರು ಶ್ರೀಕ್ಷೇತ್ರದಲ್ಲಿ ಏ.2ರಂದು ಯುಗಾದಿ, ಅಲ್ಲಮಪ್ರಭು ಜಯಂತಿ ಹಾಗೂ ಪಂಚಾಂಗ ಶ್ರವಣ ಕಾರ್ಯಕ್ರಮಗಳನ್ನು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿದೆ.

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆಯಲ್ಲಿ ಅಂದು ಪ್ರಾತಃಕಾಲ ಮಹಾರುದ್ರಾಭಿಷೇಕ ನೆರವೇರುತ್ತದೆ. ಶ್ರೀ ಸೋಮೇಶ್ವರ, ಶ್ರೀ ಮಹದೇಶ್ವರ, ಶ್ರೀ ವೀರಭದ್ರೇಶ್ವರ, ಶ್ರೀ ನಂಜುಂಡೇಶ್ವರ ಮತ್ತು ಶ್ರೀ ನಾರಾಯಣ ಸ್ವಾಮಿ ದೇವಸ್ಥಾನಗಳಲ್ಲಿಯೂ ವಿಶೇಷ ಪೂಜೆ ನಡೆಯಲಿದೆ. ಶ್ರೀಮಠದ ಹಾಗೂ ಗ್ರಾಮದ ಹೊನ್ನೇರು ಬಂಡಿಗಳು ಮಂಗಳವಾದ್ಯ ಹಾಗೂ ಕಲಾತಂಡಗಳೊಂದಿಗೆ ಶ್ರೀಮಠದಿಂದ ಹೊರಟು, ಭೂಮಿತಾಯಿಗೆ ಪೂಜೆ ಸಲ್ಲಿಸಿ, ಹೊಸ ವರ್ಷದ ಕೃಷಿ ಕಾಯಕಕ್ಕೆ ಚಾಲನೆ ನೀಡಿ, ಕರ್ತೃ ಗದ್ದುಗೆಯನ್ನು ಸಂದರ್ಶಿಸಿ ಶ್ರೀಮಠಕ್ಕೆ ಹಿಂದಿರುಗಲಿವೆ.

9.30ಕ್ಕೆ ಜೆಎಸ್‌ಎಸ್ ವಸತಿ ಶಾಲೆಯ ಸಂಗೀತ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ವಚನ ಗಾಯನ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. 10.30ಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯವಿದ್ಯಾ ಸಂಶೋಧನಾಲಯದ ನಿವೃತ್ತ ನಿರ್ದೇಶಕ ಡಾ.ಎಸ್.ಶಿವರಾಜಪ್ಪ 'ಅಲ್ಲಮಪ್ರಭು ದೇವರ ಚಿಂತನೆಗಳ ಪ್ರಸ್ತುತತೆ' ವಿಷಯದ ಕುರಿತು ಉಪನ್ಯಾಸ ನೀಡಲಿದ್ದಾರೆ. ಮೈಸೂರಿನ ಭಾರತೀಯ ಜ್ಯೋತಿರ್ವಿಜ್ಞಾನ ಸಂಶೋಧನಾ ಕೇಂದ್ರದಿಂದ ಪ್ರಕಟವಾಗಿರುವ ಶ್ರೀ ಶುಭಕೃತನಾಮ ಸಂವತ್ಸರದ 'ಸುತ್ತೂರು ಶ್ರೀ ಶಿವರಾತ್ರೀಶ್ವರ ಪಂಚಾಂಗ'ವನ್ನು ಪಂಚಾಂಗಕರ್ತ ಸಿದ್ಧಾಂತಿ ಡಾ.ಕೆ.ಜಿ.ಪುಟ್ಟಹೊನ್ನಯ್ಯ ಪಠಣ ಮಾಡಿ, ಸಂವಾದ ನಡೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಶಿವಮೊಗ್ಗದ ಹರ್ಷ ಕುಟುಂಬಕ್ಕೆ ಮೈಸೂರು ಭಾವಸಾರ ಸಮುದಾಯದ ಆರ್ಥಿಕ ನೆರವು



ಮೈಸೂರು, ಮಾ.31 (ಆರ್‌ಕೆಬಿ)– ಶಿವಮೊಗ್ಗದಲ್ಲಿ ದುಷ್ಕರ್ಮಿಗಳಿಂದ ಹತ್ಯೆಯಾದ ಹರ್ಷ ಜಿಂಗಾಡೆ ಕುಟುಂಬಕ್ಕೆ ಮೈಸೂರು ಭಾವಸಾರ ಕ್ಷತ್ರಿಯ ಮಂಡಳಿ ವತಿಯಿಂದ 1.5 ಲಕ್ಷ ರೂಗಳ ಚೆಕ್ ಅನ್ನು ಮಂಡಳಿಯ ಕಾರ್ಯದರ್ಶಿ ರಾಕೇಶ್ ನಾಯಕ್ ಮತ್ತು ಇತರೆ ಪದಾಧಿಕಾರಿಗಳು ವಿತರಿಸಿದರು.

ಶಿವಮೊಗ್ಗ ಭಾವಸಾರ ಕ್ಷತ್ರಿಯ ಸಮಾಜದ ಅಧ್ಯಕ್ಷ ಓಂಪ್ರಕಾಶ್ ತೇಲ್ಕರ್, ಮುಖಂಡ ಸಂತೋಷ್ ಸಾಕ್ರೆ, ನಗರಪಾಲಿಕೆ ಸದಸ್ಯ ಶ್ರೀಕ ಇನ್ನಿತರರ ಸಮ್ಮುಖದಲ್ಲಿ ಮೃತ ಯುವಕ ಹರ್ಷ ಜಿಂಗಾಡೆ ತಂದೆ, ತಾಯಿಗೆ ಚೆಕ್ ಹಸ್ತಾಂತರಿಸಿದರು.

ಹರ್ಷ ಜಿಂಗಾಡೆ ಮೃತ ದೇಹದ ಮೆರವಣಿಗೆ ವೇಳೆ ಗಾಯಗೊಂಡಿದ್ದ ಹಾನಗಲ್‌ನ ಅಮಿತ್ ತಿಂಗಳೆ ಅವರಿಗೂ 1 ಲಕ್ಷ ರೂ. ಚೆಕ್ ವಿತರಿಸಿದರು. ಈ ಸಂದರ್ಭದಲ್ಲಿ ಮೈಸೂರು ಭಾವಸಾರ ಕ್ಷತ್ರಿಯ ಮಂಡಳಿಯ ಉಪಾಧ್ಯಕ್ಷ ಸುಭಾಷ್ ಪತಂಗೆ, ಬಾಲಾಜಿ ತೇಲ್ಕರ್, ಎನ್.ಕೆ.ರಾಕೇಶ್ (ಬಾಲ), ಹಿರಿಯ ಮುಖಂಡ ರಮೇಶ್ ನಾಜರೆ, ಮೃತ ಹರ್ಷ ಜಿಂಗಾಡೆಯ ಸಹೋದರಿಯರು ಉಪಸ್ಥಿತರಿದ್ದರು.

40ನೇ ಅಖಿಲ ಭಾರತ ಪೊಲೀಸ್ ಕುದುರೆ ಸವಾರಿ ಚಾಂಪಿಯನ್ ಶಿಪ್‌ಗೆ ಚಾಲನೆ



ಚಂಡೀಗಢ, ಮಾ.31– ಚಂಡೀಗಢ ಬಳಿಯ ಭಾನುವಿನ ಇಂಡೋ–ಟಿಬೆಟಿಯನ್ ಬಾರ್ಡರ್ ಪೊಲೀಸ್ (ಐಟಿಬಿಪಿ) ಬೇಸಿಕ್ ಟ್ರೈನಿಂಗ್ ಸೆಂಟರ್‌ನಲ್ಲಿ 12 ದಿನಗಳ 40ನೇ ಅಖಿಲ ಭಾರತ ಪೊಲೀಸ್ ಕುದುರೆ ಸವಾರಿ ಚಾಂಪಿಯನ್ ಶಿಪ್ ಮತ್ತು ಪೊಲೀಸ್ ಮೌಂಟೆಡ್ ಮೀಟ್‌ಗೆ ಹರಿಯಾಣ ರಾಜ್ಯಪಾಲ ಬಂಡಾರು ದತ್ತಾತ್ರೇಯ ಗುರುವಾರ ಚಾಲನೆ ನೀಡಿದರು. ಕುದುರೆ ಸವಾರಿ ಚಾಂಪಿಯನ್ ಶಿಪ್‌ನಲ್ಲಿ ವಿವಿಧ ರಾಜ್ಯದ 18 ತಂಡ ಹಾಗೂ 277 ಕುದುರೆಗಳು ಹಾಗೂ ಮಹಿಳೆಯರು ಸೇರಿ ಸುಮಾರು 507 ಮಂದಿ ರೈಡರ್‌ಗಳು ಭಾಗವಹಿಸಿದ್ದರು. ಮೈಸೂರಿನ ಕೆಎಸ್‌ಆರ್‌ಪಿ ಮೌಂಟೆಡ್ ಪೊಲೀಸ್ ಘಟಕದಿಂದ ಭಾಗವಹಿಸಿರುವ 12 ಕುದುರೆಗಳು 25 ಮಂದಿ ರೈಡರ್‌ಗಳು ಮೊದಲ ದಿನ ಗಮನ ಸೆಳೆದರು.

ಕೊಲೆ ಆರೋಪಿಗಳ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ



ಮೈಸೂರು,ಮಾ.31(ಆರ್‌ಕೆಬಿ)–ನಾಗರ್ಲೆ ಗ್ರಾಮದಲ್ಲಿ ಎಂ.ಮಹದೇವಸ್ವಾಮಿ ಎಂಬುವರ ಕೊಲೆಗೆ ಸಂಬಂಧಿಸಿದಂತೆ ತಲೆಮರೆಸಿಕೊಂಡಿರುವ ಆರೋಪಿಗಳನ್ನು ಬಂಧಿಸುವಂತೆ ಆಗ್ರಹಿಸಿ, ಕರ್ನಾಟಕ ವಾಲ್ಮೀಕಿ ಪ್ರಜಾಸೇನೆ ಮಹಿಳಾ ಘಟಕದ ಕಾರ್ಯಕರ್ತರು ಗುರುವಾರ ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಕೊಲೆಗೆ ಸಂಬಂಧಿಸಿದಂತೆ ಮೂವರನ್ನು ಬಂಧಿಸಿರುವ ಪೊಲೀಸರು ಮುಖ್ಯ ಆರೋಪಿಗಳನ್ನು ಬಂಧಿಸಿಲ್ಲ. ಕೂಡಲೇ ಮುಖ್ಯ ಆರೋಪಿಗಳನ್ನು ಬಂಧಿಸಿ, ಕೊಲೆ ಪ್ರಕರಣವನ್ನು ಸಿಐಡಿ ತನಿಖೆಗೆ ಒಪ್ಪಿಸಬೇಕು. ಬಡ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು. ಸಂಘದ ರಾಜ್ಯಾಧ್ಯಕ್ಷೆ ಆರ್.ಪ್ರಮೀಳಾ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಗೌರವ ಅಧ್ಯಕ್ಷೆ ಚೌಡಮ್ಮ, ಪದಾಧಿಕಾರಿಗಳಾದ ಎನ್.ಎಂ.ರಾಧಿಕಾ, ಕವಿತಾ, ಜ್ಯೋತಿ, ಭಾಗ್ಯ, ರತ್ನಮ್ಮ, ಗೀತಾ, ಸುಧಾ, ಗೌರಮ್ಮ, ಸಿದ್ದರಾಜು ಇನ್ನಿತರರು ಉಪಸ್ಥಿತರಿದ್ದರು.

ನಂಜನಗೂಡಿನಿಂದ ವ್ಯಕ್ತಿ ನಾಪತ್ತೆ

ಮೈಸೂರು, ಮಾ.31– ನಂಜನಗೂಡು ಟೌನ್ ಆನಂದಪುರ ಬಡಾವಣೆಯಲ್ಲಿ ವಾಸವಾಗಿದ್ದ ಮುಕೇಶ್‌ಕುಮಾರ್ ಶರ್ಮಾ ಎಂಬುವವರು ಜನವರಿ ಮೂರರಂದು ಮನೆಯಿಂದ ಹೊರಹೋದವರು ಇದುವರೆಗೂ ಹಿಂದಿರುಗಿರುವುದಿಲ್ಲ ಎಂದು ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಮಾಹಿತಿ ದೊರೆತಲ್ಲಿ ಎಸ್.ಪಿ. ಮೈಸೂರು ದೂ.ಸಂ:0821-2520040, ಜಿಲ್ಲಾ ನಿಸ್ತಂತು ಕೊಠಡಿ ದೂ.ಸಂ: 0821-2444800, ಪಟ್ಟಣ ಪೊಲೀಸ್ ಠಾಣೆ ದೂ.ಸಂ: 08221-228383, nanjangudtownmys@ksp.gov.in ಸಂಪರ್ಕಿಸಬಹುದು.

ನಿಧನ

ಶ್ರೀಮತಿ ರಜಿನಿ



ಮೈಸೂರು,ಮಾ.31–ಮೈಸೂರಿನ ಗಂಗೋತ್ರಿ ಬಡಾವಣೆ ನಿವಾಸಿ ಕುಮರಬೀಡು ಪ್ರಾಥಮಿಕ ಶಾಲಾ ಶಿಕ್ಷಕಿ ಶ್ರೀಮತಿ ರಜಿನಿ (40) ನಿಧನರಾದರು. ಮೃತರು ಶಿಕ್ಷಕ ಪತಿ ನಂದೀಶ್ವರ ಪ್ರಸಾದ್, ಪುತ್ರಿ ಮೇಘನಾ, ಅತ್ತೆ ಮಹಾಲಕ್ಷ್ಮಮ್ಮ ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಮೈಸೂರಿನ ಹರಿಶ್ಚಂದ್ರ ಘಾಟ್‌ನಲ್ಲಿ ಗುರುವಾರ ನೆರವೇರಿತು ಎಂದು ಮೂಲಗಳು ತಿಳಿಸಿವೆ.

ಬೆಲೆ ಏರಿಕೆ ವಿರುದ್ಧ ಕಾಂಗ್ರೆಸ್ ಕಾರ್ಮಿಕ ವಿಭಾಗದಿಂದ ಪ್ರತಿಭಟನೆ



ಮೈಸೂರು,ಮಾ.31(ಆರ್‌ಕೆಬಿ)– ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ದುರಾಡಳಿತದಿಂದ ಬೆಲೆ ಏರಿಕೆ ಉಂಟಾಗಿದ್ದು, ಸಾಮಾನ್ಯ ಜನರು ಸಂಕಷ್ಟಕ್ಕೆ ಸಿಲುಕುವಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿ, ಮೈಸೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಅಸಂಘಟಿತ ಕಾರ್ಮಿಕರ ವಿಭಾಗದ ಆಶ್ರಯದಲ್ಲಿ ಗುರುವಾರ ಮೈಸೂರಿನಲ್ಲಿ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಕೋಟೆ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ಇರುವ ಡಾ.ರಾಜ್‌ಕುಮಾರ್ ಉದ್ಯಾನವನದ ಮುಂಭಾಗ ಗ್ಯಾಸ್ ಸಿಲಿಂಡರ್ ಹಾಗೂ ದ್ವಿಚಕ್ರ ವಾಹನಗಳಿಗೆ ಹಾರ ಹಾಕಿ, ಜಾಗಟೆ ಬಾರಿಸಿ, ಮಂಗಳಾರತಿ ಎತ್ತಿದರು. ಬಿಜೆಪಿ ಪ್ರಧಾನಿ ಅಚ್ಛೇ ದಿನ್ ಬಗ್ಗೆ ವ್ಯಂಗ್ಯವಾಗಿ ಪ್ರತಿಭಟನೆ ಮಾಡಿದರು. ಕೇಂದ್ರ ಮತ್ತು ರಾಜ್ಯ ಸರ್ಕಾರದ ಜನ ವಿರೋಧಿ ಧೋರಣೆ ವಿರುದ್ಧ ಘೋಷಣೆ ಕೂಗಿದರು. ಈ ವೇಳೆ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ದೇಶದಲ್ಲಿ ಸಾಮಾನ್ಯರ ಬದುಕು ದುಸ್ಥಿತಿಗೆ ತಲುಪಿದೆ. ದಿನದಿಂದ ದಿನಕ್ಕೆ ದಿನಬಳಕೆ ವಸ್ತುಗಳು ಹಾಗೂ ಆಹಾರ ಪದಾರ್ಥಗಳು ಗಗನಕ್ಕೇರಿ ಸಾಮಾನ್ಯ ವರ್ಗದ ಜನಜೀವನ ಅಸ್ತವ್ಯಸ್ತವಾಗುವ ಅಪಾಯದ ಮುನ್ಸೂಚನೆಗಳು ಗೋಚರವಾಗುತ್ತಿವೆ ಎಂದರು.

ಪ್ರಸ್ತುತ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಅಸಮರ್ಪಕ ಆಡಳಿತ ವ್ಯವಸ್ಥೆಯಿಂದ ಬೆಲೆ ಏರಿಕೆಯಂತಹ ಘಟನೆಗಳು ಜರುಗುತ್ತಿವೆ. ಇದರಿಂದ ಜನಸಾಮಾನ್ಯರು ತತ್ತರಿಸುತ್ತಿದ್ದಾರೆ. ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಗಗನಕ್ಕೇರಿರುವುದರಿಂದ ಜನಸಾಮಾನ್ಯರು ದಿನ ನಿತ್ಯವೂ ಪರದಾಡುವಂತಹ ಸ್ಥಿತಿ ನಿರ್ಮಾಣವಾಗಿದೆ. ಅಡುಗೆ ಅನಿಲದ ಬೆಲೆ 50ರಿಂದ 100 ರೂ. ಹೆಚ್ಚಳವಾಗಿದ್ದು, ಸಾಮಾನ್ಯ ಜನರಿಗೆ ನುಂಗಲಾರದ ತುಪ್ಪವಾಗಿ ಪರಿಣಮಿಸಿದೆ. ಆದಷ್ಟು ಬೇಗ ಸರ್ಕಾರಗಳು ಎಚ್ಚೆತ್ತು ಬೆಲೆ ಏರಿಕೆ ನಿಯಂತ್ರಣ ಮಾಡದಿದ್ದರೆ ಜನರು ತಕ್ಕ ಪಾಠ ಕಲಿಸುತ್ತಾರೆ ಎಂದು ಎಚ್ಚರಿಕೆ ನೀಡಿದರು.

ಮೈಸೂರು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಅಸಂಘಟಿತ ಕಾರ್ಮಿಕ ವಿಭಾಗದ ನಗರಾಧ್ಯಕ್ಷ ವಿನಯ್ ಕುಮಾರ್, ಗ್ರಾಮಾಂತರ ಅಧ್ಯಕ್ಷ ನಾಗರಾಜ್, ರಾಜ್ಯ ಪದಾಧಿಕಾರಿಗಳಾದ ಸುನಿಲ್ ನಾರಾಯಣ್, ರವಿ, ಫ್ರಾನ್ಸಿಸ್, ಜಿಲ್ಲಾ ಕಾಂಗ್ರೆಸ್ ಪದಾಧಿಕಾರಿಗಳಾದ ಎಡತಲೆ ಮಂಜುನಾಥ್, ಡೈರಿ ವೆಂಕಟೇಶ್, ಶ್ರೀನಾಥ್ ಬಾಬು, ರಾಜಾರಾಮ್, ಮಂಜು, ಬಸವರಾಜು, ಕೋಟೆ ಮಲ್ಲೇಶ್, ಹೇಮಂತ್, ಶ್ರೀಧರ್, ಪ್ರವೀಣ್ ತೇಜ, ಪ್ರತಿಧ್ವನಿ ಪ್ರಸಾದ್, ಮೈಸೂರು ಬಸವಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೋಮಣ್ಣ, ಕುರುಬಾರಳ್ಳಿ ಪ್ರಕಾಶ್, ಯುವ ಕಾಂಗ್ರೆಸ್ ಅಧ್ಯಕ್ಷ ಡೊನಾಲ್ಡ್, ಪ್ರಧಾನ ಕಾರ್ಯದರ್ಶಿ ದೀಪಕ್ ಶಿವಣ್ಣ, ಚಾಮರಾಜ ಕ್ಷೇತ್ರದ ಹರೀಶ್ ಇನ್ನಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಬಿಜೆಪಿ ವಿರುದ್ಧ ಕೆ.ಆರ್.ಕ್ಷೇತ್ರ ಕಾಂಗ್ರೆಸ್‌ನಿಂದ ಪ್ರತಿಭಟನೆ



ಮೈಸೂರು, ಮಾ.31(ಆರ್‌ಕೆಬಿ)– ಬೆಲೆ ಏರಿಕೆ ನಿಯಂತ್ರಿಸುವಲ್ಲಿ ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳು ಸಂಪೂರ್ಣ ವಿಫಲವಾಗಿವೆ ಎಂದು ಕೆ.ಆರ್.ಕ್ಷೇತ್ರ ಕಾಂಗ್ರೆಸ್ ಕಾರ್ಯಕರ್ತರು ಗುರುವಾರ ಕ್ಷೇತ್ರದ ವಿವಿಧೆಡೆ ಪ್ರತಿಭಟನೆ ನಡೆಸಿದರು.

ಬೆಲೆ ಏರಿಕೆಯ ರೂಪದಲ್ಲಿ ಬಡವರ ಜೇಬಿಗೆ ಕೈ ಹಾಕುತ್ತಿರುವ ಬಿಜೆಪಿ ಸರ್ಕಾರದ ದುರಾಡಳಿತದಿಂದಾಗಿ ಗೃಹ ಬಳಕೆ ವಸ್ತುಗಳು, ಪೆಟ್ರೋಲ್, ಡೀಸೆಲ್ ಬೆಲೆ ಗಗನಕ್ಕೇರುತ್ತಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಕೆ.ಆರ್.ಕ್ಷೇತ್ರದ 52ನೇ ವಾರ್ಡ್ ಇಟ್ಟಿಗೆಗೂಡಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವ ವಹಿಸಿದ್ದರು. ಮನೆಗಳ ಮುಂದೆ ಗ್ಯಾಸ್ ಸಿಲಿಂಡರ್ ಹಾಗೂ ದ್ವಿಚಕ್ರ ವಾಹನಗಳನ್ನು ನಿಲ್ಲಿಸಿ, ಹೂವಿನ ಹಾರ ಹಾಕಿ ಜಾಗಟೆ ಬಾರಿಸುವ ಮೂಲಕ ಬಿಜೆಪಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಕೆ.ಆರ್.ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಜಿಲ್ಲಾ ಕಾಂಗ್ರೆಸ್ ಸಮಿತಿ ಉಸ್ತುವಾರಿ ಕಾರ್ಯದರ್ಶಿ ಮಹೇಶ್, ಸಿದ್ದಲಿಂಗಣ್ಣ, ಮುರುಳಿ, ಶ್ರೀನಿವಾಸ್, ಪುಟ್ಬಾಲ್ ಮಂಜು, ಆರ್.ಎಚ್.ಕುಮಾರ್, ಧರ್ಮಕುಮಾರ್, ಕುರುಬಾರಳ್ಳಿ ಪ್ರಕಾಶ್, ದೀಪು, ನರೇಂದ್ರ, ಗುಣಶೇಖರ್, ಯುವ ಕಾಂಗ್ರೆಸ್ ಮುಖಂಡ ರವೀಶ್ ಇನ್ನಿತರರು ಉಪಸ್ಥಿತರಿದ್ದರು.

ವೆಂಕಟೇಶ್‌ಗೆ ಪಿಹೆಚ್.ಡಿ



ಮೈಸೂರು, ಮಾ.31– ಡಾ.ಹೆಚ್.ನಂಜೇಗೌಡ ಅವರ ಮಾರ್ಗದರ್ಶನದಲ್ಲಿ ಆರ್.ವೆಂಕಟೇಶ್ ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.


ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

01.04.2022 ಶುಕ್ರವಾರ, ಮಳೆ ನಕ್ಷತ್ರ: ರೇವತಿ 31.03.2022 ರಿಂದ 13.04.2022
ಶ್ರೀ ಪ್ಲವನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ
ತಿಥಿ: ಅಮಾವಾಸ್ಯೆ, ನಕ್ಷತ್ರ: ಉಭಾ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಅಮೃತ ಸ್ವಾತಂತ್ರ್ಯ ಮಾಲಿಕೆ 'ಆಧಾರ ಶಿಲೆ'–ಮೈಸೂರು ಸುತ್ತಲಿನ ಪ್ರಾಗೈತಿಹಾಸ ತಾಣಗಳ ಪರಿಚಯ–ಡಾ.ಎಸ್.ಜಿ.ರಾಮದಾಸ ರೆಡ್ಡಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ–ಕೆ.ಶ್ರೇಯಾ, ಎ.ಎಸ್.ನಾಗಲಕ್ಷ್ಮಿ, ಟಿ.ಎಸ್.ಸ್ನೇಹಾ, ವ್ಯಾಖ್ಯಾನ– ಡಾ.ಬಿ.ವಿ.ವಸಂತ ಕುಮಾರ್, 7.15 ದುಡಿಮೆಯ ಹಿರಿಮೆ–ಪ್ರಾಯೋಜಿತ ಕಾರ್ಯಕ್ರಮ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳವಳಿಯ ಪಯಣ–ಆಕಾಶವಾಣಿಯೊಂದಿಗೆ', 10.00 ಡಾ.ಈಮನಿ ಶಂಕರ ಶಾಸ್ತ್ರಿ–ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ –ಡಾ.ಎಸ್.ಎಲ್.ಭೈರಪ್ಪನವರ 'ದೂರ ಸರಿದರು' ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ–ಉಮೇಶ್ ಎಸ್.ಎಸ್., 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ.ರವೀಂದ್ರಕುಮಾರ್, 3.00 ಕೆ.ಸುಧಾ–ಹಾಡುಗಾರಿಕೆ, 4.00ಮಹಿಳಾರಂಗ, 'ಜೀವನ್ಮುಖಿ' ಪ್ರಸ್ತುತಿ–ಕೆ.ಬಿ.ಮೀನಾ, 6.50 ಕೃಷಿರಂಗ–ಕಿಸಾನ್‌ವಾಣಿ, ರೂಪಕ–ಯುಗಾದಿ ಕೃಷಿ ಸಮೃದ್ಧಿಗೆ ಹಾದಿ, ರಚನೆ–ಡಾ.ಕೆ.ಆರ್. ರವಿಂದ್ರ, ನಿರ್ಮಾಣ– ಎಸ್. ಸುಬ್ರಮಣ್ಯ, 9.00 ವಿಜ್ಞಾನ ಭಾರತಿ–ಮಕ್ಕಳಲ್ಲಿ ವಿಜ್ಞಾನದಲ್ಲಿ ಆಸಕ್ತಿ ಹಾಗೂ ಪರಿಸರ ಜಾಗೃತಿಯನ್ನು ಹೆಚ್ಚಿಸುವುದು ಹೇಗೆ ಈ ಕುರಿತು ಮನು ಕೆ ಅವರೊಂದಿಗೆ ಸಂವಾದ, 10.30 ಸವಿನೆನಪು

- **ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ :** ಸಂಸ್ಕೃತಿ–2022, ವಿಶೇಷ ಕೈಮಗ್ಗ ವಸ್ತುಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ರಿಂದ.
- **ಶ್ರೀ ಉತ್ತರಾದಿ ಮಠ :** ಶ್ರೀ ಸತ್ಯ ಸಂತುಷ್ಟ ತೀರ್ಥರ ಆರಾಧನೆ, ಮೂಲ ವೃಂದಾವನಕ್ಕೆ ಪಂಚಾಮೃತ ಅಭಿಷೇಕ, ವಿಶೇಷ ಪೂಜೆ, ಬೆಳಗ್ಗೆ 9ಕ್ಕೆ ಭಕ್ತರಿಗೆ ಮುದ್ರಾ ಧಾರಣೆ, ಬೆಳಗ್ಗೆ 10ಕ್ಕೆ ಶ್ರೀ ಸತ್ಯಾತ್ಮ ತೀರ್ಥರಿಂದ ಸಂಸ್ಥಾನ ಪೂಜೆ, ಸಂಜೆ 6ಕ್ಕೆ ಪಂಡಿತರಿಂದ ಉಪನ್ಯಾಸ, ಸಂಜೆ 6.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 7ಕ್ಕೆ ಶ್ರೀ ಸತ್ಯಾತ್ಮತೀರ್ಥರಿಂದ ವಿಶೇಷ ಪ್ರವಚನ, ಸ್ಥಳ: ಶ್ರೀ ಉತ್ತರಾದಿ ಮಠ, ಅಗ್ರಹಾರ.
- **ಪಂಚಾಯತ್ ಗ್ರಾಮಾಭಿವೃದ್ಧಿ ಮತ್ತು ರೈತರ ಸೇವಾ ಸಮಿತಿ :** ತ್ರಿವಿಧ ದಾಸೋಹಿ, ಪರಮಪೂಜ್ಯ ಶತಾಯುಷಿ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳವರ ಜನ್ಮ ದಿನೋತ್ಸವ ಪ್ರಯುಕ್ತ ಉಚಿತ ಕಣ್ಣಿನ ತಪಾಸಣಾ ಶಿಬಿರ, ಸ್ಥಳ: 17, ಹೆಚ್‌ಐಜಿ, ಕೆಹೆಚ್‌ಬಿ ಕಾಲೋನಿ, ರೋಟರಿ ಸ್ಕೂಲ್ ಹತ್ತಿರ, ಹೂಟಗಳ್ಳಿ, ಬೆಳಗ್ಗೆ 9 ರಿಂದ.
- **ಕನ್ನಡಾಂಬೆ ರಕ್ಷಣಾ ವೇದಿಕೆ:** ಶ್ರೀ ಶಿವಕುಮಾರ ಸ್ವಾಮಿಗಳ ಜನ್ಮ ದಿನೋತ್ಸವದ ಪ್ರಯುಕ್ತ ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಗಣಪತಿ ದೇವಸ್ಥಾನ, ಕೆಹೆಚ್‌ಬಿ ಕಾಲೋನಿ, ಹೂಟಗಳ್ಳಿ, ಬೆಳಗ್ಗೆ 9.30ರಿಂದ.
- **ಶ್ರೀ ಹೊಸಮಠ :** ಅಲ್ಲಮಪ್ರಭು ಜಯಂತಿ ಮತ್ತು ಆಸ್ಥಾನ ವಿದ್ವಾನ್ ಶ್ರೀ ಬಸವಲಿಂಗಸ್ವಾಮಿಗಳವರ 71ನೇ ಪುಣ್ಯಾರಾಧನೆ, ಸಾನ್ನಿಧ್ಯ: ಶ್ರೀ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಅಧ್ಯಕ್ಷತೆ : ಚಿದರವಳ್ಳಿ ಗವಿಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ಉದ್ಘಾಟನೆ : ಕಾರ್ಮಿಕ ಇಲಾಖೆ ಸಹಾಯಕ ಆಯುಕ್ತೆ ನಾಜೀಯಾ ಸುಲ್ತಾನ್, ಅನುಭಾವ : ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಓ.ಎಲ್. ನಾಗಭೂಷಣ, ಶ್ರೀ ನಟರಾಜ ಕಲಾ ತಂಡದಿಂದ ವಚನ ಗಾಯನ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 10ಕ್ಕೆ.
- **ಚಾಮುಂಡಿಪುರಂ ವೀರಶೈವ ಬಳಗ :** ಡಾ. ಶಿವಕುಮಾರ ಸ್ವಾಮಿಯವರ 115ನೇ ಜಯಂತಿ ಪ್ರಯುಕ್ತ ಉಚಿತ ಆರೋಗ್ಯ ತಪಾಸಣೆ, ನೇತ್ರ ತಪಾಸಣೆ, ಗಿಡ ನೆಡುವ ಕಾರ್ಯಕ್ರಮ, ಉಪಸ್ಥಿತರು: ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಪಾಲಿಕೆ ಸದಸ್ಯ ಮಾ.ವಿ. ರಾಮಪ್ರಸಾದ್, ಮೈಸೂರು ಟಾರ್ಪಾಲಿನ್ ಮಾಲೀಕ ವೀರಭದ್ರಪ್ಪ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ರೈತ ಸಂಘದ ಮುಖಂಡ ಸರಗೂರು ನಟರಾಜ್, ಮಾಜಿ ಪಾಲಿಕೆ ಸದಸ್ಯ ಸುನೀಲ್, ಸ್ಥಳ: ಚಾಮುಂಡಿಪುರಂ ವೃತ್ತ, ಬೆಳಗ್ಗೆ 10ರಿಂದ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 1 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 342 | ಪುಟಗಳು: 12


ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಅವಧಿಗೂ ಮುನ್ನ ವಿಧಾನಸಭೆ ಚುನಾವಣೆ ಪ್ರಸ್ತಾಪ: ಮಾಹಿತಿ ಸಂಗ್ರಹಕ್ಕೆ ರಾಜ್ಯಕ್ಕೆ ಬರುತ್ತಿದ್ದಾರೆ ಬಿಜೆಪಿ ವೀಕ್ಷಕರು

● ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಇಲ್ಲವೇ ದೇವೇಂದ್ರ ಫಡ್ನವೀಸ್ ನಿಯೋಜನೆ ● ವಿಪಕ್ಷಗಳು, ಸಾರ್ವಜನಿಕ ವಲಯದಲ್ಲಿ ವ್ಯಾಪಕವಾಗಿ ಕೇಳಿ ಬರುತ್ತಿರುವ ಶೇ.40ರಷ್ಟು ಕಮಿಷನ್ ಆರೋಪದ ಬಗ್ಗೆಯೂ ಮಾಹಿತಿ ಸಂಗ್ರಹ ● ಭ್ರಷ್ಟಾಚಾರ ಸಾಬೀತಾದರೆ ಆಡಳಿತದಲ್ಲಿ ಮಹತ್ತರ ಬದಲಾವಣೆಗೆ ಚಿಂತನೆ



ಬೆಂಗಳೂರು,ಮಾ.31(ಕೆಎಂಶಿ)–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರದ ವಿರುದ್ಧ ಕೇಳಿ ಬರುತ್ತಿರುವ ಭ್ರಷ್ಟಾಚಾರ ಆರೋಪ ಹಾಗೂ ಅವಧಿಗೂ ಮುನ್ನ ಚುನಾವಣೆ ನಡೆಸುವ ಸಂಬಂಧ ಮಾಹಿತಿ ಸಂಗ್ರಹಿಸಲು ಕೇಂದ್ರ ಬಿಜೆಪಿ, ವೀಕ್ಷಕರನ್ನು ಕಳುಹಿಸುತ್ತಿದೆ.

ಕೇಂದ್ರ ಪೆಟ್ರೋಲಿಯಂ ಖಾತೆ ಸಚಿವ ಧರ್ಮೇಂದ್ರ ಪ್ರಧಾನ್, ಇಲ್ಲವೇ ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ವೀಕ್ಷಕರಾಗಿ ಬರುವ ಸಾಧ್ಯತೆ ಇದೆ ಎಂದು ಪಕ್ಷದ ಉನ್ನತ ಮೂಲಗಳು ಹೇಳಿವೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ ರಾಜ್ಯ ಪ್ರವಾಸದಲ್ಲಿದ್ದು, ಅವರು ದೆಹಲಿಗೆ ಹಿಂತಿರುಗಿದ ನಂತರ ಈ ಬಗ್ಗೆ ಅಂತಿಮ ತೀರ್ಮಾನವಾಗಲಿದೆ. ಬೊಮ್ಮಾಯಿ ಅಧಿಕಾರ ವಹಿಸಿಕೊಂಡ ನಂತರ ಪ್ರತಿಪಕ್ಷಗಳು, ಸಾರ್ವಜನಿಕರು ಹಾಗೂ ಗುತ್ತಿಗೆದಾರರು, ಸಚಿವರು ಹಾಗೂ ಅಧಿಕಾರಿಗಳ ವಿರುದ್ಧ ಕಮಿಷನ್ ಆರೋಪ ಮಾಡುತ್ತಲೇ ಬಂದಿದ್ದಾರೆ. ಅಷ್ಟೇ ಅಲ್ಲ, ರಾಜ್ಯ ಗುತ್ತಿಗೆದಾರರ ಸಂಘ ಶೇ.40ರಷ್ಟು ಕಮಿಷನ್ ನೀಡದೇ ಬಿಲ್‌ಗಳನ್ನು ಪಾವತಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಅವರಿಗೇ ದೂರಿದ್ದಾರೆ.

ಶೇ.40ರಷ್ಟು ಕಮಿಷನ್ ನೀಡಿ, ನಾವು ಗುಣಮಟ್ಟದ ಕಾಮಗಾರಿ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಇದು ಕೇವಲ ಲೋಕೋಪಯೋಗಿ, ನೀರಾವರಿ ಇಲಾಖೆಗೆ ಸೀಮಿತವಾಗಿಲ್ಲ. ಎಲ್ಲ ಇಲಾಖೆಯಲ್ಲೂ ಇದೇ ಪದ್ಧತಿ ನಡೆದು ಬಂದಿದೆ. ಈ ಮೊದಲು ಶೇ.10ರಿಂದ 15ರಷ್ಟಿದ್ದ ಕಮಿಷನ್ ಏಕಾಏಕಿ ಈ ಮಟ್ಟಕ್ಕೆ ಬಂದು ನಿಂತಿದೆ. ದಂಧೆಯನ್ನು ನಿಲ್ಲಿಸದಿದ್ದರೆ, ಗುತ್ತಿಗೆದಾರರು ಮುಂದೆ ಕೆಲಸ ತೆಗೆದುಕೊಳ್ಳುವುದೇ ಕಷ್ಟವಾಗುತ್ತದೆ ಎಂದು ತಮ್ಮ ದೂರಿನಲ್ಲಿ ತಿಳಿಸಿದ್ದರು.

ಇದಾದ ನಂತರ ಪ್ರತಿಪಕ್ಷಗಳು, ಸರ್ಕಾರದ ವಿರುದ್ಧ ಭ್ರಷ್ಟಾಚಾರದ ಆರೋಪಗಳನ್ನು ಮಾಡಿದ್ದಲ್ಲದೆ, ಮಾಧ್ಯಮಗಳಲ್ಲಿ ದಿನನಿತ್ಯ ವರದಿಗಳು ಪ್ರಕಟಗೊಳ್ಳುತ್ತಿವೆ. ರಾಜ್ಯ ವಿಧಾನಸಭಾ ಚುನಾವಣೆಗೆ ಒಂದು ವರ್ಷ ಇರುವ ಬೆನ್ನಲ್ಲೇ ಸರ್ಕಾರದ ವಿರುದ್ಧ ಇಂತಹ ಆರೋಪಗಳು ಕೇಳಿ ಬರುತ್ತಿರುವ ಬಗ್ಗೆ ಸಂಘ ಮತ್ತು ರಾಜ್ಯ ಬಿಜೆಪಿ ಘಟಕ ಕೇಂದ್ರಕ್ಕೆ ಮಾಹಿತಿ ನೀಡಿತ್ತು.

ಇದರ ಆಧಾರದ ಮೇಲೆ ವರಿಷ್ಠರು ವೀಕ್ಷಕರನ್ನು ಕಳುಹಿಸಿ, ವಾಸ್ತವಾಂಶ ತಿಳಿದುಕೊಳ್ಳಲು ಮುಂದಾಗಿದ್ದಾರೆ ಎನ್ನಲಾಗಿದೆ. ಒಂದು ವೇಳೆ ಈ ವಿಚಾರದಲ್ಲಿ ಸತ್ಯವಿದ್ದರೆ, ಆಡಳಿತದಲ್ಲಿ ಮಹತ್ತರ ಬದಲಾವಣೆಯಾಗುವುದನ್ನು ತಳ್ಳಿ ಹಾಕುವಂತಿಲ್ಲ. ಪ್ರಧಾನ್ ಮತ್ತು ಫಡ್ನವೀಸ್ ನೆರೆಯ ರಾಜ್ಯದ ಮಹಾರಾಷ್ಟ್ರದವರಾಗಿದ್ದಾರೆ. ಅವರಿಗೆ ರಾಜ್ಯದ ಪೂರ್ಣ ಚಿತ್ರಣ ತಿಳಿದಿದೆ. ಪ್ರಧಾನ್ ಈ ಹಿಂದೆ ರಾಜ್ಯ ಉಸ್ತುವಾರಿ ಹೊಣೆಗಾರಿಕೆ ವಹಿಸಿಕೊಂಡಿದ್ದರು. ಯಡಿಯೂರಪ್ಪ ಬದಲಾವಣೆಯಾದ ನಂತರ ಹೊಸ ನಾಯಕನ ಆಯ್ಕೆಯ ಸಂದರ್ಭದಲ್ಲೂ ವೀಕ್ಷಕರಾಗಿ ಬಂದಿದ್ದನ್ನು ಸ್ಮರಿಸಬಹುದು. ಇನ್ನು ಫಡ್ನವೀಸ್ ಕುಮಾರಸ್ವಾಮಿ ನೇತೃತ್ವದ ಸರ್ಕಾರವನ್ನು ಪತನಗೊಳಿಸಿ, ಬಿ.ಎಸ್.ಯಡಿಯೂರಪ್ಪ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬರಲು ಕಾರಣಕರ್ತರಾಗಿದ್ದರು. ಇದನ್ನು ಗಮನದಲ್ಲಿಟ್ಟುಕೊಂಡು ಇವರಲ್ಲಿ ಒಬ್ಬರನ್ನು ವೀಕ್ಷಕರಾಗಿ ಕಳುಹಿಸುವ ಬಗ್ಗೆ ವರಿಷ್ಠರು ತೀರ್ಮಾನ ಕೈಗೊಳ್ಳಲಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ ರಾಜ್ಯಕ್ಕೆ ಎರಡು ದಿನಗಳ ಪ್ರವಾಸ ಕೈಗೊಂಡಿದ್ದು, ಅವರು, ದೆಹಲಿಗೆ ಹಿಂತಿರುಗಿದ ನಂತರ ತೆಗೆದುಕೊಳ್ಳುವ ನಿಲುವಿನ ಮೇಲೆ ಕರ್ನಾಟಕದ ರಾಜಕೀಯ ಚಿತ್ರಣವೇ ಬದಲಾವಣೆಯಾಗಲಿದೆ. ಆಡಳಿತದಲ್ಲಿ ಬದಲಾವಣೆ ಮಾಡಬೇಕೇ ಇಲ್ಲವೇ ಅವಧಿಗೂ ಮುನ್ನ ಚುನಾವಣೆಗೆ ತೆರಳಬೇಕೆನ್ನುವ ಬಗ್ಗೆ ಅಮಿತ್ ಷಾ ದೆಹಲಿಗೆ ಹಿಂತಿರುಗಿದ ನಂತರವೇ ನಿರ್ಧಾರವಾಗಲಿದೆ.

ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಸಂಬಂಧ

ಆಯೋಗ ರಚನೆ

ಬೆಂಗಳೂರು, ಮಾ.31(ಕೆಎಂಶಿ)–ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸುವ ಸಂಬಂಧ ವರದಿ ಪಡೆಯಲು ಆಯೋಗವೊಂದನ್ನು ರಚಿಸಲಾಗುವುದು ಎಂದು ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ ತಿಳಿಸಿದ್ದಾರೆ.

ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ಕಲ್ಪಿಸುವ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಪ್ರತಿಪಕ್ಷದ ನಾಯಕರು ಹಾಗೂ ಕಾನೂನು ತಜ್ಞರೊಟ್ಟಿಗೆ ಸಮಾಲೋಚನೆ ನಡೆಸಿದ ನಂತರ ಸಚಿವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಕಾಲ ಮಿತಿಯೊಳಗೆ ವರದಿ ತರಿಸಿ, ವರದಿ ಬಂದ ನಂತರ ಸುಪ್ರೀಂಕೋರ್ಟ್‌ಗೆ ಮಾಹಿತಿ ನೀಡಿ, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ಅನುಷ್ಠಾನಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳಲಿದೆ. ಹಿಂದುಳಿದ ವರ್ಗದವರಿಗೆ ಮೀಸಲಾತಿ ಕಲ್ಪಿಸದೇ ಜಿಲ್ಲಾ ಮತ್ತು ತಾಲೂಕು ಪಂಚಾಯಿತಿ ಚುನಾವಣೆಗಳನ್ನು ನಡೆಸುವುದಿಲ್ಲ ಎಂದು ಮಾಧುಸ್ವಾಮಿ ಇದೇ ಸಂದರ್ಭದಲ್ಲಿ ಸ್ಪಷ್ಟಪಡಿಸಿದರು.

ಹಾಲಿ ಇರುವ ಮೀಸಲಾತಿ ಮುಂದಿಟ್ಟುಕೊಂಡು ಈ ಸಂಸ್ಥೆಗಳಿಗೆ ಚುನಾವಣೆ ನಡೆಸಲು ಸಾಧ್ಯವಿಲ್ಲ. ಇದೇ ರೀತಿ ನೆರೆಯ ಮಹಾರಾಷ್ಟ್ರ ಚುನಾವಣೆ ನಡೆಸಿದ್ದನ್ನು ಸುಪ್ರೀಂಕೋರ್ಟ್ ಸ್ಥಗಿತಗೊಳಿಸಿತ್ತು. ಮಾನದಂಡವಿಲ್ಲದೆ, ಮೀಸಲಾತಿ ಕಲ್ಪಿಸಬೇಡಿ ಎಂದು ಸ್ಪಷ್ಟವಾಗಿ ನ್ಯಾಯಾಲಯ ಹೇಳಿದೆ. ಈ ಹಿನ್ನೆಲೆಯಲ್ಲಿ ಆಯೋಗವನ್ನು ರಚಿಸಿ, ಅವರಿಂದ ವರದಿ ತರಿಸಿಕೊಂಡು ಮೀಸಲಾತಿ ಕಲ್ಪಿಸುವ ಸಂಬಂಧ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಮೀಸಲು ಸೌಲಭ್ಯ ಕಲ್ಪಿಸದೆ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಿದರೆ ಹಿಂದುಳಿದ ವರ್ಗಗಳಿಗೆ ಅನ್ಯಾಯವಾಗುತ್ತದೆ ಎಂದರು.



ಸುಪ್ರೀಂಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಈಗ ಹಿಂದುಳಿದ ವರ್ಗಗಳಿಗೆ ಮೀಸಲು ಸೌಲಭ್ಯ ಕಗ್ಗಂಟಾಗಿ ಪರಿಣಮಿಸಿದೆ. ಹೀಗಾಗಿ ಮೀಸಲು ಸೌಲಭ್ಯ ಒದಗಿಸುವ ಕುರಿತು ಸರ್ಕಾರ ಗಂಭೀರ ಚಿಂತನೆ ನಡೆಸಬೇಕು. ಕಾನೂನಾತ್ಮಕವಾಗಿ ಪರಿಶೀಲಿಸಬೇಕು ಎಂದರು.

ಮೀಸಲು ಸೌಲಭ್ಯ ಒದಗಿಸುವ ಮುನ್ನ ಸಮೀಕ್ಷೆ ನಡೆಸಬೇಕು ಎಂದು ನ್ಯಾಯಾಲಯ ಹೇಳಿದೆ. ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ಈಗಾಗಲೇ ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿ ಕುರಿತು ಸಮೀಕ್ಷೆ ನಡೆಸಿ ವರದಿ ಸಲ್ಲಿಸಿದೆ. ಆ ವರದಿಯನ್ನು ಪರಿಗಣಿಸುವ ಸಾಧ್ಯತೆ ಕುರಿತಾಗಿಯೂ ಪರಿಶೀಲನೆ ನಡೆಸಬೇಕು ಎಂದು ಮನವಿ ಮಾಡಿದರು. ಒಂದು ವೇಳೆ ಇದು ಸಾಧ್ಯವಾಗದಿದ್ದರೆ ಮತ್ತೊಂದು ಆಯೋಗವನ್ನು ರಚನೆ ಮಾಡಿ ಸಮೀಕ್ಷೆ ನಡೆಸುವುದು ಸೂಕ್ತ. ಅಲ್ಲಿಯವರೆಗೆ ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಬಾರದು. ಇಲ್ಲದಿದ್ದರೆ ಹಿಂದುಳಿದ ವರ್ಗಗಳಿಗೆ ರಾಜಕೀಯ ಪ್ರಾತಿನಿಧ್ಯ ಸಿಗದಂತೆ ಆಗುತ್ತದೆ. ಆ ವರ್ಗಗಳಿಗೆ ಭಾರೀ ಅನ್ಯಾಯವಾಗುತ್ತದೆ. ಹಿಂದುಳಿದ ವರ್ಗದವರನ್ನು ಸಾಮಾನ್ಯ ವರ್ಗದಲ್ಲಿ ಸೇರಿಸಿ ಚುನಾವಣೆ ನಡೆಸಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಸಮಾಜದಲ್ಲಿ ಶಾಂತಿ ಕೆಡಿಸುತ್ತಿರುವ ವಿಹೆಚ್‌ಪಿ, ಬಜರಂಗದಳದವರು ಸಮಾಜಘಾತುಕರು....

ಸಿಎಂಗೆ ಗಂಡಸ್ತನವಿದ್ದರೆ ಇದನ್ನೆಲ್ಲಾ ನೋಡಿಕೊಂಡು ಸುಮ್ಮನಿರಬಾರದು... ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಗುಡುಗು; ಬಳಿಕ ವಿಷಾದ

ಬೆಂಗಳೂರು, ಮಾ.31(ಕೆಎಂಶಿ)– ಸಮಾಜದ ಶಾಂತಿ ಕದಡುತ್ತಿರುವ ವಿಶ್ವ ಹಿಂದೂ ಪರಿಷತ್, ಬಜರಂಗದಳದ ಕೆಲ ಕಿಡಿಗೇಡಿಗಳು ನಿಜಕ್ಕೂ ಸಮಾಜಘಾತುಕರು. ದಿನ ಬೆಳಗಾದರೆ ಕರಪತ್ರಗಳನ್ನು ಹಂಚುತ್ತಾ ಜನರ ಮನಸ್ಸನ್ನು ಕೆಡಿಸುತ್ತಿರುವ ಇವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ.ಕುಮಾರಸ್ವಾಮಿ ರಾಜ್ಯ ಸರಕಾರವನ್ನು ಒತ್ತಾಯಿಸಿದ್ದಾರೆ.

ಈ ಸರಕಾರಕ್ಕೆ ಮಾನಮರ್ಯಾದೆ ಇದ್ದರೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ಗಂಡಸ್ತನ ಎನ್ನುವುದು ಇದ್ದರೆ, ಏನೂ ಗೊತ್ತಿಲ್ಲದಂತೆ ಮೌನವಾಗಿರಬಾರದು. ನನಗೆ ಈ ಪದ ಬಳಕೆ ಇಷ್ಟವಿಲ್ಲ. ಆದರೂ ಇಂದಿನ ಪರಿ ಸ್ಥಿತಿ ತಡೆಯಲಾಗದೇ ಈ ಮಾತನ್ನು ಹೇಳುತ್ತಿದ್ದೇನೆ ಎಂದು ಮಾಜಿ ಸಿಎಂ ಕುಮಾರಸ್ವಾಮಿ ಸಿಟ್ಟಿನಿಂದ ಹೇಳಿದರು.

ದಿನ ಬೆಳಗಾದರೆ ತಹಸೀಲ್ದಾರ್ ಬಳಿ ಹೋಗಿ ಅರ್ಜಿ ಕೊಡೋದು, ಅಂಗಡಿಗಳಿಗೆ ಹೋಗಿ ಕರಪತ್ರ ಕೊಡೋದನ್ನು ಇವರು ಮಾಡುತ್ತಿದ್ದಾರೆ. ಇವರಿಗೆ ರೈತರ ಬದುಕು ಗೊತ್ತಿದೆಯಾ? ನಮ್ಮ ರೈತರು ಕತ್ತರಿಸುವ ಮಾಂಸ ಸ್ವಚ್ಛ ಮಾಡಲು ಅದೇ ಸಮಾಜ ದವರೇ ಬರಬೇಕು. ಈಗ ಇವರು ಬಂದು ಹಲಾಲ್ ಕಟ್ – ಜಟ್ಕಾ ಕಟ್ ಅಂತಿದ್ದಾರೆ. ರೈತರಿಂದ ಮಾವು, ದ್ರಾಕ್ಷಿ, ರೇಷ್ಮೆ ಖರೀದಿ ಮಾಡಲಿಕ್ಕೆ ಈ ಪೋಲಿಗಳು ಬರುತ್ತಾರಾ? ಎಂದು ಮಾಜಿ ಮುಖ್ಯಮಂತ್ರಿಗಳು ಆಕ್ರೋಶ ವ್ಯಕ್ತಪಡಿಸಿದರು.



ಅಕಾಲಿಕ ಮಳೆಯಿಂದಾಗಿ ಮಾವು ನಷ್ಟವಾಗಿದೆ. ರೈತರ ಕಷ್ಟ ಕಾಲಕ್ಕೆ ಇವರು ನೆರವಿಗೆ ವಿಶ್ವ ಹಿಂದೂ ಪರಿಷತ್ ಮತ್ತು ಭಜರಂಗದಳದವರು ಬರುತ್ತಾರಾ?

> ಇಲ್ಲಿ ಗಂಡಸ್ತನದ ಪ್ರಶ್ನೆಯೇ ಇಲ್ಲ. ಸರ್ಕಾರ ಯಾವುದೇ ವಿಚಾರದಲ್ಲೂ ದಕ್ಷತೆಯಿಂದ ಕೆಲಸ ಮಾಡುತ್ತದೆ. ಸಮವಸ್ತ್ರ ವಿಚಾರ ಬಂದಾಗಲೂ ನಮ್ಮ ಸರ್ಕಾರವು ಸಮರ್ಥವಾಗಿ ಕೆಲಸ ಮಾಡಿದೆ. ಸಮಾಜದಲ್ಲಿ ಶಾಂತಿ–ಸುವ್ಯವಸ್ಥೆ ಕಾಪಾಡುವುದು ನನ್ನ ಕರ್ತವ್ಯ. ಅದನ್ನು ಮಾಡುತ್ತಿದ್ದೇನೆ.
> – **ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ**

ಇವರ ಹೊಟ್ಟೆಪಾಡಿಗೆ, ದೇಶ ಹಾಳು ಮಾಡಲು ಇಂತಹ ವಿಚಾರ ಇಟ್ಟುಕೊಂಡು ಬಂದಿದ್ದಾರೆ. ಇದಕ್ಕೆಲ್ಲ ನಾನು ಕೇರ್ ಮಾಡುವುದಿಲ್ಲ ಎಂದು ತಿಳಿಸಿದರು.

ಇಷ್ಟು ವರ್ಷ ಹಲಾಲ್ ತಿಂದಿದ್ದೇವೆ, ಏನಾಗಿದೆ? ಚೆನ್ನಾಗಿದ್ದೀವಲ್ಲ. ಈಗ ಹಲಾಲ್ ತಿಂದರೆ ತೊಂದರೆ ಆಗುತ್ತದಾ? ನಮ್ಮ ದೇವರು ಮೆಚ್ಚಲ್ವ. ಹಲವಾರು ವರ್ಷಗಳಿಂದ ಹಲಾಲ್ ನಡೆಯುತ್ತಿದೆ, ● 9ನೇ ಪುಟಕ್ಕೆ

ಇಂದಿನಿಂದ ಹಾಲು ಖರೀದಿ ದರ 2 ರೂ. ಹೆಚ್ಚಳ



ಮೈಸೂರು,ಮಾ.31–ಹಾಲಿನ ಖರೀದಿ ದರವನ್ನು ಪ್ರತಿ ಲೀಟರ್‌ಗೆ 2 ರೂ. ಏರಿಕೆ ಮಾಡಲು ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ತೀರ್ಮಾನಿಸಿದೆ ಎಂದು ಅಧ್ಯಕ್ಷ ಪಿ.ಎಂ. ಪ್ರಸನ್ನ ತಿಳಿಸಿದ್ದಾರೆ. ● 9ನೇ ಪುಟಕ್ಕೆ

ಪ್ರಸಕ್ತ ಸಾಲಿಗೆ ಮುಡಾದಿಂದ 129.76 ಕೋಟಿ ಉಳಿತಾಯ ಬಜೆಟ್ ಮಂಡನೆ



ಮುಡಾ ಕಚೇರಿ ಸಭಾಂಗಣದಲ್ಲಿ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ.ರಾಜೀವ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಆಯುಕ್ತ ಡಾ.ಡಿ.ಬಿ.ನಟೇಶ್ 56 ಪುಟಗಳ 2022–23ನೇ ಸಾಲಿನ ಆಯ–ವ್ಯಯವನ್ನು ಮಂಡಿಸಿದರು.

ಮೈಸೂರು, ಮಾ.31 (ಆರ್‌ಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ವು ಪ್ರಸಕ್ತ ಸಾಲಿನಲ್ಲಿ 129.76 ಕೋಟಿ ರೂ. ಉಳಿತಾಯ ಬಜೆಟ್ ಮಂಡಿಸಿದೆ. ಮುಡಾ ಕಚೇರಿ ಸಭಾಂಗಣದಲ್ಲಿ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ.ರಾಜೀವ್ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಭೆಯಲ್ಲಿ ಆಯುಕ್ತ ಡಾ.ಡಿ.ಬಿ. ನಟೇಶ್ ಇಂದು 56 ಪುಟಗಳ 2022–23ನೇ ಸಾಲಿನ ಆಯ–ವ್ಯಯವನ್ನು ಮಂಡಿಸಿದರು.

ಪ್ರಸಕ್ತ ಸಾಲಿನಲ್ಲಿ ವಿವಿಧ ಮೂಲಗಳಿಂದ 1,821.42 ಕೋಟಿ ರೂ. ಸಂಪನ್ಮೂಲ ಕ್ರೋಢೀಕರಿಸಲುದ್ದೇಶಿಸಿ, ಪ್ರಾಧಿಕಾರದಿಂದ ಮೈಸೂರಿನ ಅಭಿವೃದ್ಧಿಗಾಗಿ 1,691.67 ಕೋಟಿ ರೂ. ವೆಚ್ಚ ಮಾಡಲು ಉದ್ದೇಶಿಸಲಾಗಿದ್ದು, ಪ್ರಸಕ್ತ ಸಾಲಿನಲ್ಲಿ 129.76 ಕೋಟಿ ರೂ. ಉಳಿತಾಯ ಪ್ರಸ್ತಾಪಿಸಲಾಗಿದೆ.

ಆದಾಯದ ಮೂಲಗಳು: ಬಡಾವಣೆ ನಕ್ಷೆ ಶುಲ್ಕ, ಮನೆ ಮತ್ತು ನಿವೇಶನ ಕಂದಾಯ, ಖಾತಾ ನೋಂದಣಿ ಹಾಗೂ ವರ್ಗಾವಣೆ ಶುಲ್ಕಗಳಿಂದ 7,205 ಲಕ್ಷ ರೂ., ಕೆರೆ ಪುನಶ್ಚೇತನ ಶುಲ್ಕದಿಂದ 1,040 ಲಕ್ಷ ರೂ., ಕೊಳಚೆ ಪ್ರದೇಶ ಅಭಿವೃದ್ಧಿ ಶುಲ್ಕದಿಂದ 80 ಲಕ್ಷ ರೂ. ನಿವೇಶನ, ಸಿಎ ನಿವೇಶನ ಹಂಚಿಕೆ ಹರಾಜು, ನಿಯಮ ಉಲ್ಲಂಘನೆ ದಂಡ ಶುಲ್ಕದಿಂದ 1,24,627.50 ಲಕ್ಷ ರೂ, ವಾಣಿಜ್ಯ ಸಂಕೀರ್ಣ ಬಾಡಿಗೆಯಿಂದ ● 6ನೇ ಪುಟಕ್ಕೆ

ಪೆರಿಫೆರಲ್ ರಿಂಗ್ ರಸ್ತೆಗೆ ಡಿಪಿಆರ್

ಮೈಸೂರು: ಬೆಳೆಯುತ್ತಿರುವ ಮೈಸೂರು ನಗರದಲ್ಲಿ ಜನ ಮತ್ತು ವಾಹನ ಸಂಖ್ಯೆಗನುಗುಣವಾಗಿ ಪ್ರಸ್ತುತ ಇರುವ 42 ಕಿ.ಮೀ. ರಿಂಗ್ ರಸ್ತೆ ಜೊತೆಗೆ ಮುಂದಿನ ದಶಕಗಳಲ್ಲಿ ಹೊರ ವರ್ತುಲ ರಸ್ತೆ (ಪೆರಿಫೆರಲ್ ರಿಂಗ್ ರೋಡ್) ನಿರ್ಮಿಸಲು ಮುಡಾ ಚಿಂತನೆ ನಡೆಸಿದೆ. ಬಜೆಟ್ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಆಯುಕ್ತ ಡಾ.ಡಿ.ಬಿ.ನಟೇಶ್, ಮುಂದಿನ ಮೂರು ದಶಕಗಳಲ್ಲಿ ಮೈಸೂರು ನಗರದ ಅಭಿವೃದ್ಧಿಯನ್ನು ಗಮನದಲ್ಲಿರಿಸಿಕೊಂಡು ಅಂತಾರಾಜ್ಯ ಸಂಪರ್ಕ, ಪ್ರವಾಸೋದ್ಯಮ ಹಾಗೂ ಕೈಗಾರಿಕೋದ್ಯಮದ ಲಾಭ ಪಡೆಯಲು ಈ ಯೋಜನೆ ರೂಪಿಸಲಾಗಿದೆ ಎಂದರು. ಉದ್ದೇಶಿತ ಪೆರಿಫೆರಲ್ ರಿಂಗ್ ರಸ್ತೆಯ ಎರಡೂ ಬದಿಯಲ್ಲಿ 750 ಮೀ. ವರೆಗೆ ಭೂಮಿ ಸ್ವಾಧೀನಪಡಿಸುವ ಮೂಲಕ ಒಟ್ಟು 73.25 ಕಿ.ಮೀ. ಉದ್ದದ ರಸ್ತೆ ● 6ನೇ ಪುಟಕ್ಕೆ



ಮೈಸೂರು–ನಂ.ಗೂಡು ಸ್ಥಳೀಯ ಯೋಜನಾ ಪ್ರದೇಶ ವಿಸ್ತರಣೆಗೆ ಚಿಂತನೆ

ಮೈಸೂರು, ಶ್ರೀರಂಗಪಟ್ಟಣ, ನಂಜನಗೂಡು, ಪಾಂಡವಪುರ, ತಿ.ನರಸೀಪುರ ತಾಲೂಕುಗಳ ಗ್ರಾಮಗಳು ಮಹಾ ಯೋಜನೆ ವ್ಯಾಪ್ತಿಗೆ

ಮೈಸೂರು: ರಾಜ್ಯದ ಎರಡನೇ ಅತೀ ದೊಡ್ಡ ಹಾಗೂ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲೊಂದಾದ ಮೈಸೂರಲ್ಲಿ ಜಾರಿಯಲ್ಲಿರುವ ಮಹಾ ಯೋಜನೆ–2031ರ ಪ್ರದೇಶವನ್ನು ವಿಸ್ತರಿಸಲು ಮುಡಾ ಚಿಂತನೆ ನಡೆಸಿದೆ. ಪ್ರಾಧಿಕಾರದ ಸಭೆಯಲ್ಲಿ ಮಂಡನೆಯಾದ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಈ ಕುರಿತು ಪ್ರಸ್ತಾಪಿಸಲಾಗಿದ್ದು, 2016ರಲ್ಲಿ ಅನುಮೋದನೆಯಾಗಿರುವ ಸ್ಥಳೀಯ ಯೋಜನಾ ಪ್ರದೇಶವು 509.03 ಚದರ ಕಿ.ಮೀ.ವರೆಗಿದ್ದು, ಮೈಸೂರು ತಾಲೂಕಿನ 84 ಗ್ರಾಮಗಳು, ನಂಜನಗೂಡು ತಾಲೂಕಿನ 19 ಗ್ರಾಮಗಳು ಹಾಗೂ ಶ್ರೀರಂಗಪಟ್ಟಣ ತಾಲೂಕಿನ 14 ಗ್ರಾಮಗಳನ್ನೊಳಗೊಂಡಿದೆ. ಈ ಯೋಜನಾ ಪ್ರದೇಶದ ವ್ಯಾಪ್ತಿಗೆ ಹೊಂದಿಕೊಂಡಂತೆ ಕೆಲ ● 6ನೇ ಪುಟಕ್ಕೆ

ಮೈಸೂರು ಸಂಪರ್ಕಿಸುವ 7 ಮುಖ್ಯ ರಸ್ತೆಗಳಲ್ಲಿ ಮಹಾದ್ವಾರ ನಿರ್ಮಾಣ

ಮೈಸೂರು: ಪ್ರವಾಸೋದ್ಯಮಕ್ಕೆ ಪೂರಕವಾದ ಪಾರಂಪರಿಕ ನಗರಿ ಮೈಸೂರಿಗೆ ಸಂಪರ್ಕ ಕಲ್ಪಿಸುವ 7 ಪ್ರಮುಖ ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಮಹಾದ್ವಾರ ನಿರ್ಮಿಸಲು ಮುಡಾ ತೀರ್ಮಾನಿಸಿದೆ. ಎಲ್ಲಾ ದಿಕ್ಕುಗಳ ಪ್ರಮುಖ ರಸ್ತೆಗಳಲ್ಲಿ ರಾಜಮನೆತನದವರು ನೀಡಿದ ಕೊಡುಗೆಯ ಸ್ಮರಣಾರ್ಥ ಜೈಪುರ ಮಾದರಿಯಲ್ಲಿ ಮಹಾದ್ವಾರಗಳನ್ನು ಪಾರಂಪರಿಕ ಶೈಲಿಯಲ್ಲಿ ನಿರ್ಮಿಸಲುದ್ದೇಶಿಸಲಾಗಿದ್ದು, ಯೋಜನೆಗೆ ಡಿಪಿಆರ್ ತಯಾರಿಸಲು 2 ಕೋಟಿ ರೂ.ಗಳನ್ನು ಕಾಯ್ದಿರಿಸಲಾಗಿದೆ. ಮೈಸೂರು–ಬೆಂಗಳೂರು ಹೆದ್ದಾರಿ, ಹುಣಸೂರು ರಸ್ತೆ, ● 6ನೇ ಪುಟಕ್ಕೆ



ಮೂರು ಗ್ರಾಮಗಳ ವ್ಯಾಪ್ತಿ ಜಂಟಿ ಅಭಿವೃದ್ಧಿಯಡಿ ಬಡಾವಣೆ ನಿರ್ಮಾಣ

437 ಎಕರೆಯಲ್ಲಿ 26,200ಲಕ್ಷ ರೂ. ವೆಚ್ಚದಲ್ಲಿ 7,676 ನಿವೇಶನ ರಚನೆ

ಮೈಸೂರು: ಅರ್ಜಿ ಸಲ್ಲಿಸಿ ಚಾತಕಪಕ್ಷಿಯಂತೆ ಕಾಯುತ್ತಿರುವ ಸುಮಾರು 80,000 ಫಲಾನುಭವಿಗಳಿಗೆ ನಿವೇಶನ ಕಲ್ಪಿಸಲು ಮೈಸೂರು ಹೊರವಲಯದ 3 ಗ್ರಾಮಗಳ ವ್ಯಾಪ್ತಿಯಲ್ಲಿ ಜಂಟಿ ಅಭಿವೃದ್ಧಿಯಡಿ ಬಡಾವಣೆ ನಿರ್ಮಿಸಲು ಮುಡಾ ಮುಂದಾಗಿದೆ. ಭೂ ಮಾಲೀಕರ ಸಹಭಾಗಿತ್ವದೊಂದಿಗೆ 50:50ರ ಅನುಪಾತದಲ್ಲಿ ಜಂಟಿ ಅಭಿವೃದ್ಧಿ ಯೋಜನೆಗೆ ಚಿಂತನೆ ನಡೆಸಲಾಗಿದ್ದು, ಕಾರ್ಯ ಸಾಧ್ಯತಾ ವರದಿ, ಡಿಪಿಆರ್ ಹಾಗೂ ಮೂಲ ಸೌಲಭ್ಯ ● 6ನೇ ಪುಟಕ್ಕೆ



ನಕ್ಕರೆ ಅದೇ ಸ್ವರ್ಗ

ಗೆಳೆಯ : "ಸೆಂಟ್ ಮೆಸೇಜ್ ಅಂದ್ರೆ ಏನು?"

ಆತ : "ಅಷ್ಟೂ ಗೊತ್ತಿಲ್ವೇನೋ, ಸುಗಂಧ ಇರೋ ಮೆಸೇಜ್ ಅಂತ!"

ಮೈಸೂರು ಮಿತ್ರ

ಶುಕ್ರವಾರ, 1 ಏಪ್ರಿಲ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಈ ಜಗತ್ತಿನಲ್ಲಿ ಒಳಿತನ್ನು ಸಾಧಿಸಲು ಸಾಧ್ಯ ಎನ್ನುವ ನಂಬಿಕೆಯಿದ್ದರೆ, ಅದಕ್ಕೆ ಬೇಕಾದ ಎಲ್ಲಾ ಶಕ್ತಿಗಳೂ ತನ್ನಷ್ಟಕ್ಕೆ ತಾನೇ ಒದಗುತ್ತದೆ.
–ಬೆಂಜಮಿನ್ ಫ್ರಾಂಕ್ಲಿನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಬುದ್ಧಿವಂತನೇ ಬಲವಂತ

ನಿಮ್ಮ ಪತ್ರಗಳು

ಪರೀಕ್ಷಾ ಭಯ ಎದುರಿಸಲು ಸಲಹೆಗಳು

ಮಾನ್ಯರೆ,

ಪರೀಕ್ಷೆ ಎಂಬುದು ಆತಂಕಪಡುವಂತಹ ವಿಷಯವಲ್ಲ ಎನ್ನುವುದು ಎಲ್ಲಾ ವಿದ್ಯಾರ್ಥಿಗಳಿಗೂ ಮನದಟ್ಟು ಮಾಡಿಸಬೇಕಾದ ಅಗತ್ಯತೆ ಈಗ ಹೆಚ್ಚಾಗಿದೆ. ಈಗ ನಡೆಯುತ್ತಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಟಿ.ನರಸೀಪುರದ ಪರೀಕ್ಷಾ ಕೇಂದ್ರವೊಂದರಲ್ಲಿ ಸಾವಿಗೀಡಾದ ವಿದ್ಯಾರ್ಥಿನಿ ಅನುಶ್ರೀ ಅವರ ಪ್ರಕರಣ ಅತ್ಯಂತ ವಿಷಾದಕರ ಸಂಗತಿಯಾಗಿದೆ. ರಾಜ್ಯದಲ್ಲಿ ಮತ್ತೆಲ್ಲೂ ಈ ರೀತಿಯ ಘಟನೆ ಮರುಕಳಿಸದಂತೆ ಕ್ರಮವಹಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಇದರಲ್ಲಿ ಶಿಕ್ಷಕರು ಮತ್ತು ಪೋಷಕರ ಪಾತ್ರ ಬಹು ಮುಖ್ಯವಾಗಿದೆ.

ಶಿಕ್ಷಕರು ಮತ್ತು ಪರೀಕ್ಷಾ ಕೇಂದ್ರದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳು ವಿದ್ಯಾರ್ಥಿಗಳ ಸಮಸ್ಯೆಗಳನ್ನು ಹಾಗೂ ಗೊಂದಲಗಳನ್ನು ಗುರುತಿಸಿ ತಕ್ಷಣದಲ್ಲಿ ಪರಿಹಾರ ಮತ್ತು ಸಲಹೆಗಳನ್ನು ನೀಡಬೇಕು.

ತಡವಾಗಿ ಬಂದಂತಹ ಅಥವಾ ಕೊಠಡಿ ಸಂಖ್ಯೆ, ನೋಂದಣಿ ಸಂಖ್ಯೆ, ಆಸನಗಳು, ಸಮವಸ್ತ್ರಗಳಿಗೆ ಸಂಬಂಧಿಸಿದಂತಹ ಅಥವಾ ಗುರುತಿನ ಚೀಟಿ, ಪ್ರವೇಶಪತ್ರ, ಬರವಣಿಗೆ ಸಾಮಗ್ರಿಗಳನ್ನು ಮರೆತು ಬಂದಂತಹ ಮಕ್ಕಳಿಗೆ ಯಾವುದೇ ಕಾರಣಕ್ಕೂ ಆತಂಕ ಸೃಷ್ಟಿಸುವಂತೆ ಜೋರಾಗಿ ಗದರಿಸುವಂತಹ ಕೆಲಸಗಳನ್ನು ಮಾಡಬಾರದು. ಮತ್ತೊಮ್ಮೆ ಈ ರೀತಿಯ ತಪ್ಪುಗಳನ್ನು ಮಾಡಬಾರದು ಎಂದು ತಿಳಿಹೇಳಿ ಅವರ ಸಮಸ್ಯೆಗೆ ಶೀಘ್ರ ಪರಿಹಾರವನ್ನು ನೀಡಿ ಅವರಲ್ಲಿ ಆತ್ಮಸ್ಥೈರ್ಯ ತುಂಬಬೇಕು.

ಪೋಷಕರು ಪರೀಕ್ಷಾ ಸಮಯದಲ್ಲಿ ಮಕ್ಕಳ ಮೇಲೆ ಹೆಚ್ಚು ಒತ್ತಡ ಹೇರುವುದನ್ನು ನಿಲ್ಲಿಸಬೇಕು. ಕೆಲವು ಪೋಷಕರು ಪರೀಕ್ಷಾ ಸಮಯದಲ್ಲಿ ಮಾತ್ರ ಮಕ್ಕಳ ಮೇಲೆ ಓದು ಓದು ಎಂದು ಒತ್ತಡ ಹೇರುತ್ತಾರೆ. ಈ ಪರೀಕ್ಷೆಯಲ್ಲಿ ಫೇಲ್ ಆದರೆ ನಿನಗೆ ಮನೆಯಲ್ಲಿ ಜಾಗವಿಲ್ಲ, ಯಾವುದಾದರೂ ಕೆಲಸಕ್ಕೆ ಕಳುಹಿಸುತ್ತೇನೆ. ಅಥವಾ ಮದುವೆ ಮಾಡುತ್ತೇನೆ ಎಂದು ಹೆದರಿಸುತ್ತಾರೆ. ಮತ್ತೆ ಕೆಲವರು ತಮ್ಮ ಮನೆಯ ಕಷ್ಟ ತಾವು ಅನುಭವಿಸಿದ ನೋವುಗಳನ್ನು ಮಕ್ಕಳ ಮುಂದೆ ಹೇಳಿ ಹೆಚ್ಚು ಭಾವನಾತ್ಮಕವಾಗಿ ಮಾತನಾಡಿ ಮಕ್ಕಳ ಮನಸ್ಸನ್ನು ದುರ್ಬಲಗೊಳಿಸುತ್ತಾರೆ. ಹೆಚ್ಚು ಅಂಕ ಗಳಿಸಲೇಬೇಕು ಎಂದು ಹೆದರಿಸುತ್ತಾರೆ. ಈ ರೀತಿ ಮಾಡಿದಾಗ ಮಕ್ಕಳಲ್ಲಿ ಓದುವ ಆಸಕ್ತಿ ಬರುವ ಬದಲು ಭಯ ಹುಟ್ಟಿಕೊಳ್ಳುತ್ತದೆ.

ಮಕ್ಕಳಲ್ಲಿ ಭಯ, ಆತಂಕ ಸೃಷ್ಟಿಯಾದಾಗ ನೆನಪಿನ ಶಕ್ತಿಯ ಮೇಲೆ ಪ್ರಭಾವ ಬೀರುತ್ತದೆ. ಇಂತಹ ಸಂದರ್ಭದಲ್ಲಿ ಮಕ್ಕಳಿಗೆ ತಲೆನೋವು, ಹೊಟ್ಟೆನೋವು, ತಲೆ ಸುತ್ತುವಿಕೆ, ಹಸಿವಾಗುವುದು ಅಥವಾ ಜೀರ್ಣ ಕ್ರಿಯೆಗೆ ಸಂಬಂಧಿಸಿದ ವಾಕರಿಕೆ, ಅನಿಯಂತ್ರಿತ ಮಲ, ಮೂತ್ರ ವಿಸರ್ಜನೆಗೆ ಕಾರಣವಾಗುತ್ತದೆ.

ಏಕಾಗ್ರತೆ ಕೊರತೆ ಹಾಗೂ ಪರೀಕ್ಷೆ ಮುಗಿಯುವವರೆಗೂ ನಿರ್ದಿಷ್ಟ ಸ್ಥಳದಲ್ಲಿ ಕುಳಿತುಕೊಳ್ಳಲು ಹಿಂಸೆಯಾಗುವುದನ್ನು ನಾವು ಕಾಣಬಹುದಾಗಿದೆ. ಈ ರೀತಿಯ ಸಮಸ್ಯೆಗಳು ಮಕ್ಕಳಲ್ಲಿ ಭಯವನ್ನು ಉಂಟುಮಾಡುತ್ತವೆ. ಈ ಭಯದಿಂದ ಮಾನಸಿಕ ಒತ್ತಡಕ್ಕೆ ಒಳಗಾಗಿ ಅಧಿಕ ಅಥವಾ ಕಡಿಮೆ ರಕ್ತದೊತ್ತಡದ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಇದರಿಂದ ಹೃದಯ ಹಾಗೂ ಮೆದುಳಿಗೆ ಹಾನಿಯಾಗುವ ಸಾಧ್ಯತೆ ಅಧಿಕವಾಗಿರುತ್ತದೆ.

ಇದೆಲ್ಲಕ್ಕೂ ಪರಿಹಾರವೆಂದರೆ ಮಕ್ಕಳಲ್ಲಿ ಆತ್ಮಸ್ಥೈರ್ಯ ತುಂಬುವುದು, ಸಮಸ್ಯೆಗಳನ್ನು ಧೈರ್ಯವಾಗಿ ಎದುರಿಸುವಂತೆ ಮಾಡುವುದು, ಸಕಾರಾತ್ಮಕ ಚೈತನ್ಯವನ್ನು ಉತ್ತೇಜಿಸುವುದು, ಮಕ್ಕಳಲ್ಲಿರುವ ಜ್ಞಾನವನ್ನು ಪರೀಕ್ಷೆಯಲ್ಲಿ ವಿವರಿಸುವ ಹಾಗೂ ವಿಶ್ಲೇಷಿಸುವ ರೀತಿಯನ್ನು ತಿಳಿಸಬೇಕು ಹಾಗೂ ಪರೀಕ್ಷೆ ಎಂದರೆ ಹಬ್ಬದ ವಾತಾವರಣ ಸೃಷ್ಟಿಯಾಗಬೇಕು.

–ಎನ್.ಪಿ.ಯೋಗೇಶ್, ಮನೋವಿಜ್ಞಾನ ವಿಭಾಗ, ಮಾನಸಗಂಗೋತ್ರಿ.

ಶಾಲಾ ಪಠ್ಯ ಕುರಿತು ಚರ್ಚೆ ಎಷ್ಟು ಸರಿ

ಮಾನ್ಯರೆ,

ರಾಜ್ಯದಲ್ಲಿ ನಡೆಯುತ್ತಿರುವ ಇತ್ತೀಚಿನ ಘಟನೆಗಳು ಸಮಾಜದ ಮೇಲೆ ಎನ್ನುವುದಕ್ಕಿಂತ ಮಕ್ಕಳ ಭಾವೈಕ್ಯತೆ ಮೇಲೆ ಪ್ರಭಾವ ಬೀರುತ್ತಿದೆ. ಮೊದಲು ಹಿಜಾಬ್, ವ್ಯಾಪಾರ ನಂತರ ಧರ್ಮ ಈಗ ಹಲಾಲ್ ಎಂಬ ಪ್ರಚೋಧನಕಾರಿ ವಿಷಯಗಳು ಪ್ರಸ್ತಾಪವಾಗುತ್ತಿದ್ದು, ರಾಜಕೀಯ ಹಿನ್ನೆಲೆಯಲ್ಲಿ ಸಂಘಗಳ ಮುಖಾಂತರ ಧರ್ಮಗಳನ್ನು ಗುರಿಯಾಗಿಸಿ ಸಮಾಜ ಒಡೆಯುವ ಕೆಲಸ ನಡೆಯುತ್ತಿದೆ ಎಂಬುದು ವಿಷಾದನೀಯ.

ಇದರ ಮಧ್ಯೆ ಶಾಲಾ ಪಠ್ಯ ಕುರಿತು ಚರ್ಚೆಗಳು ನಡೆಯುತ್ತಿರುವುದು ಎಷ್ಟು ಸರಿ. ಮಕ್ಕಳು ಯಾವುದನ್ನು ಓದಬೇಕು ಎಂಬುದನ್ನು ಜನ ಸಾಮಾನ್ಯರು ಹೇಗೆ ನಿರ್ಧರಿಸಬೇಕು. ಇದೊಂದು ಅನಾವಶ್ಯಕ ಚರ್ಚೆಯಾಗಿದೆ. ಮಕ್ಕಳು ದಿನ ಶಾಲೆಯಲ್ಲಿ ಎಲ್ಲಾ ಧರ್ಮದ ಮಕ್ಕಳ ಜೊತೆ ಸೇರಿ ಕಲಿಯುತ್ತಾರೆ. ಈ ರೀತಿಯ ಚರ್ಚೆಗಳು, ಹೇಳಿಕೆಗಳು, ಆರೋಪಗಳನ್ನು ಮಕ್ಕಳಿಗೆ ಕೇಳಿ ಕಲಿ ನೋಡಿ ಕಲಿ ಎಂಬಂತೆ ಮಾಡುತ್ತಿದ್ದಾರೆ. ಹಿಂದಿನ ಕಾಲದ ವಿದ್ಯಾಭ್ಯಾಸಗಳಲ್ಲಿ ಮೂಡದ ಪಠ್ಯ ಮತ್ತು ಹಿಜಾಬ್ ವಿವಾದಗಳು ಇತ್ತೀಚಿನ ದಿನಗಳಲ್ಲಿ ತಲೆ ಎತ್ತಿರುವುದು ಹೇಗೆ? ಯಾಕೆ? ಎಂಬ ಪ್ರಶ್ನೆ ಕಾಡುತ್ತದೆ. ಏನೇ ಇರಲಿ ಮಕ್ಕಳಿಗೆ ಸೌಹಾರ್ದತೆಯಿಂದ ಇರುವುದನ್ನು ಮನೆಯೇ ಮೊದಲ ಪಾಠ ಶಾಲೆ ಎಂಬಂತೆ ನಾವು ಮೊದಲು ಹೇಳಿಕೊಡಬೇಕು.

–ಅನುಷ ಬಿ.ಎನ್, ಮೈಸೂರು.

ಬೌದ್ಧಿಕ ಜ್ಞಾನ ವೃದ್ಧಿಗೆ ಭಗವದ್ಗೀತೆ ಅವಶ್ಯಕ

ಮಾನ್ಯರೆ,

ಜಗತ್ತಿನ ಪ್ರತಿಯೊಂದು ಧರ್ಮವೂ ಶಾಂತಿ, ಸಮಾನತೆ, ಸಹಬಾಳ್ವೆ, ಅಹಿಂಸೆ ಹೀಗೆ ಪ್ರಮುಖ ಮೌಲ್ಯಗಳನ್ನು ಒಳಗೊಂಡಿದೆ. ಪಠ್ಯದಲ್ಲಿ ಭಗವದ್ಗೀತೆಯನ್ನು ಅಳವಡಿಸುವ ಕುರಿತಾದ ಚರ್ಚೆ ಈಗ ಜೋರಾಗಿದ್ದು, ಪ್ರಸ್ತುತ ಸನ್ನಿವೇಶದಲ್ಲಿ ಭಗವದ್ಗೀತೆಯ ಬೋಧನೆಗಳ ಅವಶ್ಯಕತೆ ಸಮಾಜಕ್ಕಿದೆ. ಭಗವದ್ಗೀತೆ ಮತ್ತು ಮಹಾಭಾರತದಲ್ಲಿ 18ರ ಸಂಖ್ಯೆಗೆ ವಿಶೇಷ ಸ್ಥಾನವಿದೆ. ಕುರುಕ್ಷೇತ್ರ ಯುದ್ಧ 18 ದಿನಗಳ ಕಾಲ ನಡೆಯಿತು. ಭಗವದ್ಗೀತೆಯಲ್ಲಿ 18 ಅಧ್ಯಾಯಗಳಿವೆ ಮತ್ತು ಸಂಸ್ಕೃತದಲ್ಲಿ 18 ಸಂಖ್ಯೆಯನ್ನು ತ್ಯಾಗದ ಪ್ರತೀಕವೆಂದು ಪರಿಗಣಿಸಲಾಗುತ್ತದೆ.

ಭಗವದ್ಗೀತೆಯ ಮುಖ್ಯ ಬೋಧನೆಯೆಂದರೆ ನಿಷ್ಕಾಮ ಕರ್ಮ. ಅಂದರೆ ಯಾವುದೇ ಫಲಾಪೇಕ್ಷೆಯಿಲ್ಲದೆ ಕರ್ತವ್ಯ ನಿರ್ವಹಿಸುವುದು. ನಮ್ಮ ಕರ್ತವ್ಯವಾಗಬೇಕು. ಕೆಲಸಕ್ಕಿಂತ ಮೊದಲೇ ಫಲಿತಾಂಶದ ಅಪೇಕ್ಷೆ ಮಾಡಬಾರದು ಎಂಬ ಭಗವದ್ಗೀತೆಯ ಬೋಧನೆ ಸರ್ವಕಾಲಕ್ಕೂ ಪ್ರಸ್ತುತವಾಗಿರುತ್ತದೆ.

ಇಂದಿನ ಸಮಾಜ ಲಾಭವಿದ್ದರೆ ಮಾತ್ರ ಪರಸ್ಪರ ಸಂಪರ್ಕ ಬೆಳೆಸುತ್ತಾರೆ. ಇಲ್ಲವಾದರೆ ಯಾರನ್ನೂ ನೋಡುವುದಿಲ್ಲ. ಕೆಲವು ವಿದ್ಯಾರ್ಥಿಗಳು ಪರೀಕ್ಷೆಯಿಲ್ಲದೆ ಉತ್ತೀರ್ಣರಾದರೆ ಸಾಕು ಎನ್ನುವ ಮನಸ್ಥಿತಿಗೆ ತಲುಪಿರುವುದು ದುರದೃಷ್ಟಕರವಾಗಿದೆ.

ಇಂದಿನ ಸಮಾಜದಲ್ಲಿ ಕಷ್ಟ ಪಡದೆ ಯಶಸ್ಸುಗಳಿಸಬೇಕೆಂಬ ಹಂಬಲ ಎಲ್ಲರಲ್ಲೂ ಹೆಚ್ಚಾಗುತ್ತಿದೆ. ಕ್ಷಣ ಮಾತ್ರದಲ್ಲಿ ದೊರೆಯುವ ಯಶಸ್ಸು ಶಾಶ್ವತವಾಗಿರುವುದಿಲ್ಲ ಎನ್ನುವುದನ್ನು ಭಗವದ್ಗೀತೆ ಸೂಕ್ಷ್ಮವಾಗಿ ತಿಳಿಸುತ್ತದೆ. ಇಂದಿನ ಯುವ ಜನಾಂಗಕ್ಕೆ ಮತ್ತು ವಿದ್ಯಾರ್ಥಿಗಳಿಗೆ ಶ್ರದ್ಧೆ, ಸ್ಥಿತಪ್ರಜ್ಞೆ, ತಾಳ್ಮೆ, ಧೈರ್ಯ, ನಿಷ್ಕಾಮ ಕರ್ಮ ಮುಂತಾದ ಮೌಲ್ಯಗಳ ಬೆಳವಣಿಗೆಗೆ ಭಗವದ್ಗೀತೆಯ ಅಧ್ಯಯನ ಕಾರಣವಾಗುತ್ತದೆ.

ಎಲ್ಲಾ ಧರ್ಮಗಳ ಧರ್ಮ ಗ್ರಂಥಗಳಲ್ಲಿನ ಉತ್ತಮ ಅಂಶಗಳನ್ನು ಪಠ್ಯದಲ್ಲಿ ಅಳವಡಿಸಿದರೆ ವಿದ್ಯಾರ್ಥಿಗಳ ಬೌದ್ಧಿಕ ಜ್ಞಾನ ವೃದ್ಧಿಸುತ್ತದೆ. ಇದೇ ಹಾದಿಯಲ್ಲಿ ಭಗವದ್ಗೀತೆ ಸಮಾಜಕ್ಕೆ, ವಿದ್ಯಾರ್ಥಿಗಳಿಗೂ ಉತ್ತಮ ಸಂದೇಶ ನೀಡುವುದರ ಜೊತೆಗೆ ಉತ್ತಮ ಪ್ರಜೆಯಾಗಿ ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

–ರಾ. ಸುಮಾ ಭಟ್, ಚಿಕ್ಕಮಗಳೂರು.



ಇಂದು ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ.ವೀರೇಂದ್ರ ಹೆಗ್ಗಡೆ ಅವರಿಂದ ಲೋಕಾರ್ಪಣೆ

ಪಾಂಡವಪುರ ಶಾಸಕ ಸಿ.ಎಸ್.ಪುಟ್ಟರಾಜು ಅವರ ಪ್ರಯತ್ನದ ಫಲ

ಚಿನಕುರಳಿಯಲ್ಲಿ ಭವ್ಯ ಉದ್ಯಾನವನ

ಸಿ.ಎ.ಲೋಕೇಶ್, ಚಿನಕುರಳಿ
ಮೊ: 9945994500

ಸುತ್ತಲು ಕಂಗೊಳಿಸುತ್ತಿರುವ ಹಚ್ಚ ಹಸಿರು... ಉಲ್ಲಾಸ ನೀಡುವ ತಂಪನೆಯ ನೆರಳು. ಪುಟ್ಟ ಪುಟ್ಟ ಪಕ್ಷಿಗಳ ಚಿಲಿಪಿಲಿ... 150ಕ್ಕೂ ಹೆಚ್ಚು ಬಗೆಯ ಸಸ್ಯರಾಶಿ ಹಾಗೂ ಹುಲ್ಲುಹಾಸು...

ಇದು ಮಂಡ್ಯ ಜಿಲ್ಲೆ ಪಾಂಡವಪುರ ತಾಲೂಕಿನ ಚಿನಕುರಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಉದ್ಯಾನವನದ ಆಕರ್ಷಣೆಯ ವೈಭವ.

ದೊಡ್ಡ–ದೊಡ್ಡ ನಗರಗಳ ಉದ್ಯಾನವನಗಳಿಗೂ ಕಡಿಮೆ ಇಲ್ಲವೆಂಬಂತೆ ಹಸಿರಿನ ಸಿರಿಯನ್ನು ಹೊದ್ದು, ಈ ಉದ್ಯಾನವನ ನಳನಳಿಸುತ್ತಿದೆ. ಸುಮಾರು 6 ಎಕರೆ ಪ್ರದೇಶದಲ್ಲಿ ಅಂದಾಜು 3 ಕೋಟಿ ರೂ. ವೆಚ್ಚದಲ್ಲಿ 4 ಭಾಗಗಳಾಗಿ ನಿರ್ಮಾಣಗೊಂಡಿದೆ ಚಿನಕುರಳಿ ಮಾತ್ರವಲ್ಲದೇ ಸುತ್ತಮುತ್ತಲ ಗ್ರಾಮಗಳ ಜನರನ್ನು ಸೆಳೆಯುತ್ತಿದ್ದು, ಪಾಂಡವಪುರ ತಾಲೂಕಿಗೆ ಮಾದರಿ ಉದ್ಯಾನವನವಾಗಿದೆ.

ತಾಲೂಕು ಪಂಚಾಯಿತಿಯಿಂದ ಹೈಮಾಸ್ಟ್ ದೀಪದ ವ್ಯವಸ್ಥೆ ಮಾಡಲಾಗಿದ್ದು, ರಾತ್ರಿ ವೇಳೆಯಲ್ಲಿ ಉದ್ಯಾನವನ ಬೆಳದಿಂಗಳ ಬೆಳಕು ಚೆಲ್ಲುತ್ತದೆ. ಸಮ್ಮಿಶ್ರ ಸರ್ಕಾರದಲ್ಲಿ ಸಣ್ಣ ನೀರಾವರಿ ಸಚಿವರಾಗಿದ್ದ ಸಿ.ಎಸ್. ಪುಟ್ಟರಾಜು ಅವರು ಚಾಲನೆ ನೀಡಿದ್ದ ಉದ್ಯಾನವನ ಪ್ರಸ್ತುತ ಪೂರ್ಣಗೊಂಡಿದ್ದು, ಲೋಕಾರ್ಪಣೆಗೆ ಸಜ್ಜಾಗಿದೆ.

ಮಕ್ಕಳ ಅಚ್ಚುಮೆಚ್ಚಿನ ಉದ್ಯಾನ: ಈ ಉದ್ಯಾನವನದಲ್ಲಿ ಮಕ್ಕಳಿಗಾಗಿ 15ಕ್ಕೂ ಹೆಚ್ಚು ಬಗೆಯ ಆಟಿಕೆಗಳ ವ್ಯವಸ್ಥೆ ಮಾಡಲಾಗಿದೆ. ಚೆಂಡು, ರೈಲು, ರಾಷ್ಟ್ರಧ್ವಜವಿರುವ ಹಡಗು, ಕಲ್ಲಂಗಡಿ, ಸೌತೆಕಾಯಿ, ಚಿಟ್ಟೆ, ನವಿಲು, ಬಾತುಕೋಳಿ, ಮೀನು, ವೀರಸಿಂಹಾಸನ ಸೇರಿದಂತೆ ವಿವಿಧ ಆಕೃತಿಯ ಸುಮಾರು 50ಕ್ಕೂ ಹೆಚ್ಚಿನ ಆಸನಗಳ ನಿರ್ಮಾಣ ಮಾಡಲಾಗಿದೆ. ಇದರ ಜೊತೆಗೆ ಪೋಸ್ಟ್ ಬಾಕ್ಸ್, ಮರದ ಪೊಟರೆ ಸೇರಿದಂತೆ ಹಲವು ವಿನ್ಯಾಸದ ಕಸ ಸಂಗ್ರಹ ಬಾಕ್ಸ್‌ಗಳನ್ನು ನಿರ್ಮಿಸಲಾಗಿದ್ದು, ಆಕರ್ಷಣೀಯವಾಗಿದೆ.


ಯುವಜನರಿಗಾಗಿ ಜಿಮ್ ವ್ಯವಸ್ಥೆಯೂ ಇದ್ದು, ಸುಮಾರು 10ಕ್ಕೂ ಹೆಚ್ಚು ಉಪಕರಣಗಳ ಅಳವಡಿಕೆ ಮಾಡಲಾಗಿದೆ 4 ವಿಭಾಗಗಳ ಉದ್ಯಾನವನದಲ್ಲಿಯೂ ವಿಹಾರಕ್ಕೆ ಉತ್ತಮವಾದ ವಾಕಿಂಗ್ ಪಾತ್‌ಗಳನ್ನು ನಿರ್ಮಾಣ ಮಾಡಲಾಗಿದೆ ಹಾಗಾಗಿ, ಈ ಉದ್ಯಾನವನ ಪುಟ್ಟಮಕ್ಕಳಿಂದ ವೃದ್ಧರವರೆಗೂ ಅಚ್ಚುಮೆಚ್ಚಿನ ತಾಣವಾಗಿ ಪರಿಣಮಿಸಿದೆ.

ಪ್ರವೇಶ ದ್ವಾರ: ಸುತ್ತಲು ಹಸಿರು ಸಿರಿಯಿಂದ ಆವೃತ್ತವಾದ ಈ ಉದ್ಯಾನವನದ ಪ್ರವೇಶ ದ್ವಾರವು ಗುಹೆಯಂತಿದ್ದು, ನೋಡಗರ ಮನ ಸೆಳೆಯುತ್ತಿದೆ. ಈ ಗುಹೆಯಿಂದ ಉದ್ಯಾನವನ ಪ್ರವೇಶ ಮಾಡಿದ ಕೂಡಲೇ ಎದುರಿಗೆ ಸುಮಾರು 15 ಅಡಿ ಎತ್ತರದ ಛಾವಣಿಯ ಮೇಲೆ ಪುರಾತನ ಕಾಲದ ಬಸವನ ವಿಗ್ರಹ ಪ್ರತಿಷ್ಠಾಪಿಸಿದ್ದು, ಇದು ಉದ್ಯಾನವನಕ್ಕೆ ಬರುವವರನ್ನು ಸ್ವಾಗತಿಸುತ್ತದೆ. ಇನ್ನುಳಿದ 3 ಉದ್ಯಾನವನಗಳ ಪ್ರವೇಶದ್ವಾರಗಳು ಆಕರ್ಷಣೀಯವಾಗಿದ್ದು, ದ್ವಾರದಲ್ಲಿ ವಿವಿಧ ಜಾತಿಯ ಹೂವಿನ ಗಿಡಗಳು ನೋಡುಗರ ಮನಸ್ಸಿಗೆ ಮುದ ನೀಡುತ್ತದೆ. ಇಲ್ಲಿನ ಕಲಾಕೃತಿಗಳನ್ನು ಮೈಸೂರಿನ ನುರಿತ ಕಲಾವಿದರಾದ ಭೂ ವಿನ್ಯಾಸಗಾರ ಸಿ.ಕೃಷ್ಣ ಅವರ ನೇತೃತ್ವದಲ್ಲಿ ನಿರ್ಮಾಣ ಮಾಡಲಾಗಿದ್ದು, ಬೆಂಗಳೂರು, ರಾಜಮಂಡ್ರಿ ಸೇರಿದಂತೆ ಸುತ್ತಮುತ್ತಲ ನರ್ಸರಿಯಿಂದ ಹಲವಾರು ಸಸ್ಯಗಳನ್ನು ತಂದು ಬೆಳೆಸಲಾಗಿದೆ.

ಹಲವು ವಿಶೇಷತೆ: ಈ ಉದ್ಯಾನವನದ ಹಿಂಭಾಗ ಹೇಮಾವತಿ ನೀರಿನ ಸಂಪರ್ಕವಿರುವ ಮೊಸರಹಳ್ಳವಿದ್ದು, ಹಳ್ಳಕ್ಕೆ ತಡೆಗೋಡೆ ನಿರ್ಮಿಸಲಾಗಿದೆ. ಜೊತೆಗೆ ಪ್ರತಿ ಉದ್ಯಾನದಲ್ಲಿಯೂ ಬೋರ್‌ವೆಲ್ ಕೊರೆಸಲಾಗಿದೆ ಬಿದಿರು ಸೇರಿದಂತೆ ಅಂದಾಜು 50ಕ್ಕೂ ಹೆಚ್ಚು ಜಾತಿಯ ಮರಗಳು, ಹಲವು ಜಾತಿಯ ಹೂವಿನ ಗಿಡಗಳು, ತರಕಾರಿ ಹಾಗೂ ಹಣ್ಣಿನ ಗಿಡಗಳನ್ನು ನೆಡಲಾಗಿದ್ದು, ಆಹ್ಲಾದಕರ ವಾತಾವರಣ ಮನಮೋಹಕವಾಗಿದೆ.

ಪಾರ್ಕ್‌ಗೆ ಭೇಟಿ ನೀಡುವವರಿಗೆ ವಿಶ್ರಾಂತಿ ಪಡೆಯಲು ಗಜೀಬ್ ನಿರ್ಮಿಸಲಾಗಿದ್ದು, ಇದರ ಪಕ್ಕದಲ್ಲಿಯೇ ವಾಟರ್ ಫಾಲ್ಸ್ ಇದೆ. ಇದು ಕೂಡ ಪಾರ್ಕ್‌ನ ಸೌಂದರ್ಯವನ್ನು ಹೆಚ್ಚಿಸಿದೆ ಮತ್ತೊಂದು ಉದ್ಯಾನವನದಲ್ಲಿ ಗಾಳಿ ಆಂಜನೇಯ ಸ್ವಾಮಿ ದೇವಾಲಯ, ಅಂಗನವಾಡಿ ಕೇಂದ್ರವೂ ಕೂಡ ಇದ್ದು, ಚಿಣ್ಣರ ಕಲಿಕೆಗೆ ಉತ್ತಮ ವಾತಾವರಣ ಕಲ್ಪಿಸಲಾಗಿದೆ.























ಚಿತ್ರಗಳು: ಕಾಂತರಾಜು ಚಿನಕುರಳಿ





"ಹಸಿರೀಕರಣ ಮಾಡುವ ಉದ್ದೇಶದಿಂದ ಪಾಂಡವಪುರ ತಾಲೂಕಿನ ಕೆಲ ಖಾಲಿ ಪ್ರದೇಶಗಳಲ್ಲಿ ಉದ್ಯಾನಗಳ ನಿರ್ಮಾಣ ಮಾಡಲಾಗುತ್ತಿದೆ. ಈ ನಿಟ್ಟಿನಲ್ಲಿ ಪಾಂಡವಪುರದಲ್ಲಿ 3, ಹಿರೇಮರಳ್ಳಿ ಒಂದು ಉದ್ಯಾನವನ ಕಾಮಗಾರಿ ಪ್ರಾರಂಭಗೊಂಡಿದ್ದು, ಮೇಲುಕೋಟೆಯಲ್ಲಿ ನಿರ್ಮಾಣಕ್ಕೆ ಮಂಜೂರಾತಿ ದೊರೆತಿದೆ. ಮೊದಲ ಹಂತವಾಗಿ ಚಿನಕುರಳಿಯಲ್ಲಿ ಉದ್ಯಾನವನ ನಿರ್ಮಾಣವಾಗಿದ್ದು, ಉದ್ಘಾಟನೆಗೆ ಸಿದ್ಧವಾಗಿದೆ. ಗ್ರಾಮಸ್ಥರು ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಗ್ರಾಮದ ಸೌಂದರ್ಯ ಹೆಚ್ಚಿಸಲು ಕೈಗನ್ನಡಿಯಾಗಿರುವ ಈ ಪಾರ್ಕ್‌ಗಳ ರಕ್ಷಣೆ, ಪೋಷಣೆಗೆ ಎಲ್ಲರೂ ಸಹಕರಿಸಬೇಕು.

– **ಸಿ.ಎಸ್.ಪುಟ್ಟರಾಜು,** ಶಾಸಕರು, ಮೇಲುಕೋಟೆ ಕ್ಷೇತ್ರ.

"ಪ್ರಸ್ತುತ ನಿರ್ಮಾಣವಾಗಿರುವ ಉದ್ಯಾನವನದ ಸ್ಥಳದಲ್ಲಿ ಗಿಡಗಂಟಿಗಳು ಬೆಳೆದು ಕಲುಷಿತ ವಾತಾವರಣ ನಿರ್ಮಾಣವಾಗಿತ್ತು. ಇಲ್ಲಿ ಪುರಾತನ ಕಾಲದ ರಾಮೇಶ್ವರಸ್ವಾಮಿ ದೇವಾಲಯವಿದ್ದು, ಕಲುಷಿತ ವಾತಾವರಣದಿಂದ ಗ್ರಾಮದ ಅಂದ ಹದಗೆಟ್ಟಿತ್ತು. ಇದನ್ನು ಮನಗಂಡ ಶಾಸಕ ಸಿ.ಎಸ್.ಪುಟ್ಟರಾಜು ದೇವಾಲಯದ ಹಿಂಭಾಗದ 6 ಎಕರೆ ಜಾಗದಲ್ಲಿ ಸುಂದರವಾದ ಉದ್ಯಾನವನ ನಿರ್ಮಾಣಕ್ಕೆ ಚಾಲನೆ ನೀಡಿದರು. ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಉದ್ಯಾನವನ ನಿರ್ಮಿಸಲಾಗಿದ್ದು, ಗ್ರಾಮಸ್ಥರು ಹಾಗೂ ಇಲ್ಲಿಗೆ ಭೇಟಿ ನೀಡುವ ಪ್ರವಾಸಿಗರು ಉದ್ಯಾನವನದ ಸೌಂದರ್ಯಕ್ಕೆ ಧಕ್ಕೆಯುಂಟಾಗದಂತೆ ಸ್ವಚ್ಛತೆ ಕಾಪಾಡಬೇಕು.

– **ಅಶೋಕ್,** ಜಿಪಂ ಸದಸ್ಯ, ಚಿನಕುರಳಿ ಕ್ಷೇತ್ರ.

"ಶಾಸಕ ಪುಟ್ಟರಾಜು ಅವರ ಕನಸಿನ ಕೂಸು ಈ ಉದ್ಯಾನವನ ಮೈಸೂರಿನ ಯೋಗಾನರಸಿಂಹಸ್ವಾಮಿ ಪಾರ್ಕ್ ನಿರ್ಮಾಣ ನೋಡಿ ಚಿನಕುರಳಿಯಲ್ಲಿಯೂ ಅಷ್ಟೇ ಸೌಂದರ್ಯದ ಉದ್ಯಾನವನ ನಿರ್ಮಾಣ ಮಾಡುವಂತೆ ಅವರು ನನಗೆ ಈ ಜವಬ್ದಾರಿ ನೀಡಿದರು. ಅವರ ಅಭಿಲಾಷೆಯಂತೆ ಈ ಪಾರ್ಕ್ 4 ವರ್ಷದ ಮಕ್ಕಳಿಂದ ವಯೋವೃದ್ಧರವರೆಗೂ ಅಚ್ಚುಮೆಚ್ಚಿನ ತಾಣವಾಗಬೇಕೆಂಬ ಉದ್ದೇಶದಿಂದ ಹಲವು ವಿಶೇಷತೆಗಳಿಂದ ನಿರ್ಮಿಸಲಾಗಿದೆ. ಗ್ರಾಮೀಣ ಮಟ್ಟದಲ್ಲಿ ಅತ್ಯುತ್ತಮ ಪಾರ್ಕ್ ನಿರ್ಮಾಣ ಮಾಡಲಾಗಿದ್ದು, ಮಾದರಿಯಾಗಿದೆ.

– **ಸಿ.ಕೃಷ್ಣ,** ಭೂ ವಿನ್ಯಾಸಗಾರರು, ಬ್ಲೂ ರೋಜ್ ಗಾರ್ಡನ್.







Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಏ.4ರಿಂದ 'ಸಂಸ್ಕಾರ' ಬೇಸಿಗೆ ಶಿಬಿರ

ಮೈಸೂರು, ಮಾ.31(ಎಂಟಿವೈ)– ಮೈಸೂರಿನ ಸಿದ್ಧಾರ್ಥನಗರದ ಸಿಗ್ನೇಚರ್ ಡ್ಯಾನ್ಸ್ ಕಂಪನಿ ಹಾಗೂ ಇಂಟೆನ್ಸ್ ಫಿಟ್‌ನೆಸ್ ಸಂಸ್ಥೆ ಸಹಯೋಗದಲ್ಲಿ ಏ.4ರಿಂದ 17ರವರೆಗೆ ವಿಶೇಷ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಸಂಸ್ಥೆಯ ವಿನೋದ ಕರ್ಕೇರ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 6ರಿಂದ 16 ವರ್ಷದೊಳಗಿನ ಮಕ್ಕಳು ಕೈ ಬರಹ, ಯೋಗ, ನಿರೂಪನೆ, ಒಳಾಂಗಣ ಆಟಗಳು ವ್ಯಕ್ತಿತ್ವ ವಿಕಾಸನ ಮುಂತಾದ ಚಟುವಟಿಕೆಗಳನ್ನು ಒಳಗೊಂಡಿದ್ದು, ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ಖ್ಯಾತಿಯ ರಾಹುಲ್ ರಾವ್, ಮೋಹನ್, ದರ್ಶನ್, ದಕ್ಷಿತಾಗೌಡ, ಸರಿಗಮಪ ಖ್ಯಾತಿ ಪ್ರಿಯಾ ಕುಂದಾಪುರ, ಡ್ರಾಮಾ ಜ್ಯೂನಿಯರ್‌ನ ಪ್ರೇಕ್ಷಿತ್ ಹಾಗೂ ಮಹೇಂದ್ರ ಪ್ರಸಾದ ಸಂಪನ್ಮೂಲ ವ್ಯಕ್ತಿಗಳಾಗಿ ಶಿಬಿರದಲ್ಲಿ ಪಾಲ್ಗೊಳ್ಳುವರು ಎಂದರು. ಶಿಬಿರಕ್ಕೆ ಸಂಸ್ಕಾರ ಎಂದು ಹೆಸರಿಡಲಾಗಿದ್ದು, ಮಕ್ಕಳಲ್ಲಿ ಸಂಸ್ಕಾರ, ಶಿಸ್ತು, ಸಾಮಾನ್ಯ ಜ್ಞಾನ ಮೂಡಿಸುವುದು ಮುಖ್ಯ ಉದ್ದೇಶವಾಗಿದೆ. ಶಿಬಿರದಲ್ಲಿ ಉತ್ತಮ ಪ್ರದರ್ಶನ ತೋರುವ 5 ಮಕ್ಕಳಿಗೆ ಸಿಗ್ನೇಚರ್ ಸಂಸ್ಥೆಯಲ್ಲಿ ವರ್ಷದ ಉಚಿತ ತರಬೇತಿ ಇರಲಿದೆ. ಆಸಕ್ತರು ವಿವರಗಳಿಗೆ ಮೊ.ಸಂ.9900630327 ಸಂಪರ್ಕಿಸುವಂತೆ ಕೋರಿದರು. ಗೋಷ್ಠಿಯಲ್ಲಿ ಇಂಟೆನ್ಸ್ ಫಿಟ್‌ನೆಸ್ ಮಾಲೀಕ ನಿತೇಶ್ ಭಂಡಾರಿ, ತರಬೇತುದಾರ ಪೃಥ್ವಿ ನಾಯಕ್, ಶಶಾಂಕ್, ಹರ್ಷಿತ್‌ಕುಮಾರ್ ಇದ್ದರು.



ಪ್ರಸಕ್ತ ಸಾಲಿಗೆ ಮುಡಾದಿಂದ 129.76 ಕೋಟಿ ಉಳಿತಾಯ ಬಜೆಟ್ ಮಂಡನೆ

ಮೊದಲನೇ ಪುಟದಿಂದ

4,892 ಲಕ್ಷ ರೂ. ನಿಶ್ಚಿತ ಠೇವಣಿ ವಾರ್ಷಿಕ ಬಡ್ಡಿ 36,341.10 ಲಕ್ಷ ರೂ. ತುಂಡು ಜಾಗ ಮಂಜೂರಾತಿಯಿಂದ 550 ಲಕ್ಷ ರೂ., ನಕ್ಷೆ ಅನುಮೋದನೆಯ ವೇಳೆ ವಿಧಿಸುವ ಶುಲ್ಕದಿಂದ 2,570 ಲಕ್ಷ ರೂ., ವಿವಿಧ ದಾಖಲೆ ನೀಡಲು ಸಂಗ್ರಹಿಸುವ ಸೇವಾ ಶುಲ್ಕದಿಂದ 80.15 ರೂ., ರೋಡ್ ಕಟ್ಟಿಂಗ್, ಎಸ್‌ಟಿಪಿ ಜಾಹೀರಾತು ಶುಲ್ಕಗಳಿಂದ 632 ಲಕ್ಷ ರೂ., ನಗರದ ಹೊರಗಿನ ಬಡಾವಣೆ ನಿವಾಸಿಗಳಿಂದ ಸಂಗ್ರಹಿಸುವ ಕುಡಿಯುವ ನೀರಿನ ಶುಲ್ಕದಿಂದ 100 ಲಕ್ಷ ರೂ. ಅರ್ಜಿ/ಠೇವಣಿಗಳಿಂದ ವಸೂಲಿ ಮಾಡುವ ಶೇ.2 ರಷ್ಟು ಹಸಿರು ಶುಲ್ಕದಿಂದ 100 ಲಕ್ಷ ರೂ. ಹಾಗೂ ಕಟ್ಟಡ ತ್ಯಾಜ್ಯ ವಿಲೇವಾರಿ ಶುಲ್ಕದಿಂದ 300 ಲಕ್ಷ ರೂ. ಸೇರಿದಂತೆ 2022-23 ನೇ ಸಾಲಿನಲ್ಲಿ ಒಟ್ಟು 1,32,142.75 ಲಕ್ಷ ರೂ. ಆದಾಯ ಬರುತ್ತದೆ ಎಂದು ಮುಡಾ ನಿರೀಕ್ಷಿಸಿದೆ.

ವೆಚ್ಚದ ಬಾಬ್ತು: ನಿರೀಕ್ಷಿತ ಆದಾಯದಲ್ಲಿ ಪ್ರಾಧಿಕಾರದ ಬಡಾವಣೆಯ ಅಭಿವೃದ್ಧಿ ಕೆಲಸ, ಪಾಲಿಕೆಗೆ ಹಸ್ತಾಂತರಿಸಲು ಬಾಕಿ ಇರುವ ಬಡಾವಣೆಗಳ 325 ವಿವಿಧ ಕಾಮಗಾರಿಗಳಿಗೆ 53,406 ಲಕ್ಷ ರೂ. ಖರ್ಚು ಮಾಡಬೇಕಾಗಿದ್ದು, ಸಾಮಾನ್ಯ ಆಡಳಿತ ವೆಚ್ಚ 8,247.09 ಲಕ್ಷ ರೂ.ಗಳಾಗಲಿದೆ ಎಂದು ನಿರೀಕ್ಷಿಸಲಾಗಿದೆ. ಕೆರೆಗಳ ಅಭಿವೃದ್ಧಿಗೆ 900 ಲಕ್ಷ ರೂ., ನಿಧಿ-1, ನಿಧಿ-2, ನಿಧಿ-3, ನಿಧಿ-4 ರಡಿ ಸೇರಿ ಒಟ್ಟಾರೆ ಈ ವರ್ಷ 1,69, 167.09 ಕೋಟಿ ರೂ. ವ್ಯಯ ಮಾಡಲು ಮುಡಾ ಯೋಜನೆ ರೂಪಿಸಿದೆ. ಬಡಾವಣೆಗಳ ಜಂಟಿ ಅಭಿವೃದ್ಧಿಗಾಗಿ 6000 ಲಕ್ಷ ರೂ. ಗುಂಪು ಮನೆ ಯೋಜನೆಗೆ 10,000 ಲಕ್ಷ ರೂ. ಕುಡಿಯುವ ನೀರಿನ ಯೋಜನೆ ಮೇಲ್ದರ್ಜೆಗೇರಿಸಲು 25 ಕೋಟಿ ರೂ. ಪೆರಿಫೆರಲ್ ರಿಂಗ್ ರಸ್ತೆ ನ್ಯೂ ಕಾಂತರಾಜ ಅರಸ್ ರಸ್ತೆ, ಅಕ್ಕಮಹಾದೇವಿ ರಸ್ತೆ, ಆರ್.ಟಿ.ನಗರ ರಸ್ತೆ ಸೇರಿದಂತೆ ಹಲವು ವಿಶೇಷ ಯೋಜನೆಗಳಿಗಾಗಿ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಮುಡಾ ಅನುದಾನ ಮೀಸಲಿರಿಸಿದೆ. ಹಲವು ಮಾರ್ಪಾಡು ಸಲಹೆ-ಸೂಚನೆಗಳನ್ನು ಪರಿಗಣಿಸುವಂತೆ ಕೋರಿದ ಸದಸ್ಯರು ಪ್ರಸಕ್ತ ಸಾಲಿನ ಆಯ-ವ್ಯಯಕ್ಕೆ ಸಮ್ಮತಿ ಸೂಚಿಸಿದರು.

ಶಾಸಕರಾದ ಎಸ್.ಎ.ರಾಮದಾಸ್, ಜಿ.ಟಿ.ದೇವೇಗೌಡ, ಎಲ್.ನಾಗೇಂದ್ರ, ಬಿ.ಹರ್ಷವರ್ಧನ್, ಪರಿಷತ್ ಸದಸ್ಯರಾದ ಕೆ.ಟಿ.ಶ್ರೀಕಂಠೇಗೌಡ, ಡಾ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮರಿತಿಬ್ಬೇಗೌಡ, ಸದಸ್ಯರಾದ ಎಸ್.ಬಿ.ಎಂ.ಮಂಜು, ಲಕ್ಷ್ಮೀದೇವಿ, ನವೀನ್ ಕುಮಾರ್, ಜೆ. ಲಿಂಗಯ್ಯ, ಮಾದೇಶ ಸೇರಿದಂತೆ ಹಲವರು ಸಭೆಯಲ್ಲಿ ಹಾಜರಿದ್ದರು.

ಪೆರಿಫೆರಲ್ ರಿಂಗ್ ರಸ್ತೆಗೆ ಡಿಪಿಆರ್

ನಿರ್ಮಿಸಲಾಗುತ್ತಿದೆ. ಈ ಯೋಜನೆಗೆ ಒಟ್ಟು 27,468.75 ಎಕರೆ ಭೂಮಿ (ರಸ್ತೆಯ ಎರಡೂ ಬದಿ ಜಾಗ ಸೇರಿ) ಅಗತ್ಯವಿದೆ. 45 ಮೀ ಅಗಲದ ಹೊರವರ್ತುಲ ರಸ್ತೆ ನಿರ್ಮಿಸಬೇಕಾಗಿದೆ. ಜೊತೆಗೆ ಎರಡೂ ಬದಿಯಲ್ಲಿ ವಾಣಿಜ್ಯ ಚಟುವಟಿಕೆ ಆಸ್ಪತ್ರೆ, ಶೈಕ್ಷಣಿಕ ಸಂಸ್ಥೆ, ವಸತಿ ಸಮುಚ್ಚಯ, ಐಟಿ-ಬಿಟಿ ಪಾರ್ಕ್, ಆಟದ ಮೈದಾನ, ಉದ್ಯಾನ, ಮಾರುಕಟ್ಟೆ, ಸಾರಿಗೆ ಸೌಲಭ್ಯ ಅಭಿವೃದ್ಧಿಪಡಿಸಲು ಭೂಮಿಯನ್ನು ಕಾಯ್ದಿರಿಸಬೇಕಾಗುತ್ತದೆ ಎಂಬುದನ್ನು ಪೆರಿಫೆರಲ್ ರಿಂಗ್ ರಸ್ತೆ ಯೋಜನೆಯಲ್ಲಿ ಪ್ರಸ್ತಾಪಿಸಲಾಗಿದೆ. ನೈಪುಣ್ಯತೆ ಹೊಂದಿರುವ ಸಂಸ್ಥೆಗಳಿಂದ ವಿಸ್ತೃತ ಯೋಜನಾ ವರದಿ ತಯಾರಿಸಲು ಪ್ರಸಕ್ತ ಸಾಲಿನಲ್ಲಿ 3 ಕೋಟಿ ರೂ.ಗಳನ್ನು ಮೀಸಲಿರಿಸಲಾಗಿದೆ.



ಪ್ರಾಧಿಕಾರದಿಂದ ಲ್ಯಾಂಡ್ ಆಡಿಟ್

ಪ್ರಾಧಿಕಾರದಿಂದ ನೂರಾರು ಎಕರೆ ಭೂಮಿ ವಶಪಡಿಸಿಕೊಂಡು ಪರಿಹಾರ ನೀಡಿದ್ದರೂ ಕೂಡ ಭೂಮಿ ಅನ್ಯರ ವಶದಲ್ಲಿರುವುದನ್ನು ಗುರುತಿಸಲಾಗಿದೆ. ಇಂತಹ ಸಾವಿರಾರು ಕೋಟಿ ರೂ. ಬೆಲೆಬಾಳುವ ಭೂಮಿಯು ಭೂ ಸ್ವಾಧೀನಪಡಿಸಿಕೊಂಡ ನಂತರ ಬಡಾವಣೆ ರಚನೆಗೆ ಬಳಕೆಯಾಗಿರುವ ಬಗ್ಗೆ ಲ್ಯಾಂಡ್ ಆಡಿಟ್ ಮಾಡಿದರೆ ಪ್ರಾಧಿಕಾರಕ್ಕೆ ಸಾವಿರಾರು ಕೋಟಿ ಬೆಲೆ ಬಾಳುವ ಆಸ್ತಿ ದೊರೆಯುವ ಸಾಧ್ಯತೆ ಇದೆ. ಆದ್ದರಿಂದ ಈ ಸಂಬಂಧ ಮೌಖಿಕವಾಗಿ ಸರ್ವೆ ನಡೆಸಿ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅಂತಿಮ ವರದಿ ತಯಾರಿಸಲು 20 ಪರವಾನಗಿ ಭೂ ಮಾಪಕರು, ಇಬ್ಬರು ನಿವೃತ್ತ ಸರ್ವೆ ಸೂಪರ್‌ವೈಸರ್‌ಗಳು, ಇಬ್ಬರು ನಿವೃತ್ತ ಶಿರಸ್ತೇದಾರರುಗಳನ್ನು ಲ್ಯಾಂಡ್ ಆಡಿಟ್ ಮಾಡಿಸಲು ಉದ್ದೇಶಿಸಲಾಗಿದ್ದು, ಇದಕ್ಕಾಗಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ 1 ಕೋಟಿ ರೂ. ಕಾಯ್ದಿರಿಸಲು ಉದ್ದೇಶಿಸಲಾಗಿದೆ.

ಸ್ಥಳೀಯ ಯೋಜನಾ ಪ್ರದೇಶ ವಿಸ್ತರಣೆಗೆ ಚಿಂತನೆ

ಗ್ರಾಮಗಳು ಕ್ಷಿಪ್ರಗತಿಯಲ್ಲಿ ಪ್ರಗತಿ ಹೊಂದಿದ್ದು, ಈ ಭಾಗದಲ್ಲಿ ಯೋಜನಾಬದ್ಧ ಬೆಳವಣಿಗೆಯ ಮೇಲೆ ನಿಯಂತ್ರಣವಿಲ್ಲದೆ, ಕನಿಷ್ಠ ಮೂಲ ಸೌಕರ್ಯಗಳೂ ಇಲ್ಲದಂತಾಗಿದೆ. ಕಾವೇರಿ ಮತ್ತು ಕಪಿಲಾ ನದಿಗಳು ಕಲುಷಿತಗೊಳ್ಳುತ್ತಿರುವುದನ್ನು ಗಮನದಲ್ಲಿರಿಸಿಕೊಂಡು ಈ ಯೋಜನಾ ಪ್ರದೇಶವನ್ನು ವಿಸ್ತರಿಸುವುದು ಸೂಕ್ತ ಎಂದು ಪ್ರಸ್ತಾಪಿಸಲಾಗಿದೆ.

ಅದರಂತೆ ಮೈಸೂರು ತಾಲೂಕಿನ 57, ನಂಜನಗೂಡು ತಾಲೂಕಿನ 55, ಶ್ರೀರಂಗಪಟ್ಟಣ ತಾಲೂಕಿನ 45, ಪಾಂಡವಪುರ ತಾಲೂಕಿನ 10 ಹಾಗೂ ತಿ.ನರಸೀಪುರ ತಾಲೂಕಿನ 17 ಗ್ರಾಮಗಳು ಹೊಸ ವಿಸ್ತರಣಾ ಪ್ರದೇಶದ ವ್ಯಾಪ್ತಿಗೆ ಬರಲಿದ್ದು, 863.44 ಕಿ.ಮೀ.ವರೆಗೆ ಹೆಚ್ಚುವರಿ ವಿಸ್ತರಣೆಯಾಗಲಿದೆ. ಈ ಯೋಜನೆ ಜಾರಿಯಾದಲ್ಲಿ ಮೈಸೂರು ತಾಲೂಕಿನ 141, ನಂಜನಗೂಡಿನ 74, ಶ್ರೀರಂಗಪಟ್ಟಣದ 60 ಸೇರಿ ಒಟ್ಟು 301 ಗ್ರಾಮಗಳು ಸ್ಥಳೀಯ ಯೋಜನಾ ಪ್ರದೇಶ ವ್ಯಾಪ್ತಿಗೆ ಒಳಪಡಲಿವೆ ಹಾಗೂ 1370.52 ಕಿ.ಮೀ. ವಿಸ್ತಾರ ಪ್ರದೇಶ ನಗರ ಯೋಜನೆ ವ್ಯಾಪ್ತಿಗೆ ಬರಲಿದೆ.

ಯೋಜನಾ ಶಾಖೆ ಹುದ್ದೆಗಳ ಸೃಜನೆ: ಮೈಸೂರು-ನಂಜನಗೂಡು ಸ್ಥಳೀಯ ಯೋಜನಾ ಪ್ರದೇಶವನ್ನು ವಿಸ್ತರಿಸಲು ಉದ್ದೇಶಿಸಿರುವ ಹಿನ್ನೆಲೆಯಲ್ಲಿ ಮುಡಾ ಕಚೇರಿಯ ನಗರ ಯೋಜನಾ ಶಾಖೆಗೆ ಹೆಚ್ಚುವರಿಯಾಗಿ ಓರ್ವ ನಿರ್ದೇಶಕರು, ಇಬ್ಬರು ಉಪ ನಿರ್ದೇಶಕರು, ಓರ್ವ ಸಹಾಯಕ ನಿರ್ದೇಶಕ ಹಾಗೂ ಇಬ್ಬರು ನಗರ ಯೋಜಕರ ಹುದ್ದೆಗಳನ್ನು ಸೃಜಿಸಲು ಪ್ರಸಕ್ತ ಸಾಲಿನಲ್ಲಿ ಪ್ರಸ್ತಾಪಿಸಲಾಗಿದೆ.

9 ಕೋಟಿ ವೆಚ್ಚದಲ್ಲಿ 8 ಕೆರೆಗಳ ಅಭಿವೃದ್ಧಿ: ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ 8 ಕೆರೆಗಳನ್ನು, 900 ಲಕ್ಷ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಿ ಸಂರಕ್ಷಿಸಲು ಉದ್ದೇಶಿಸಲಾಗಿದೆ. ಬೋಗಾದಿ ಕೆರೆಗೆ 40 ಲಕ್ಷ ರೂ., ಪಿನಕಲ್ ಕೆರೆಗೆ 70 ಲಕ್ಷ ರೂ., ವಿಜಯನಗರ 3ನೇ ಹಂತದಲ್ಲಿ ರುವ ಕೆರೆಗೆ 10 ಲಕ್ಷ ರೂ., ದೇವನೂರು ಕೆರೆಗೆ 3 ಕೋಟಿ ರೂ., ಕೇರ್ಗಳ್ಳಿ ಕೆರೆಗೆ 75 ಲಕ್ಷ ರೂ., ಲಿಂಗಾಂಬುಧಿ ಕೆರೆಗೆ 2 ಕೋಟಿ ರೂ., ಪಿನಕಲ್ ಸರ್ವೆ ನಂ.31ರಲ್ಲಿರುವ ಕೆರೆಗೆ 10 ಲಕ್ಷ ರೂ. ಹಾಗೂ ಆಲನಹಳ್ಳಿ ಗ್ರಾಮದ ಕಟ್ಟೆ ಅಭಿವೃದ್ಧಿಗೆ 25 ಲಕ್ಷ ರೂ.ಗಳನ್ನು ಬಜೆಟ್‌ನಲ್ಲಿ ಮೀಸಲಿರಿಸಲಾಗಿದೆ. ಉಳಿದಂತೆ ಬಡಾವಣೆಗಳಲ್ಲಿ ಹಸಿರೀಕರಣ, ಒಳಚರಂಡಿ ವ್ಯವಸ್ಥೆ ಮೇಲ್ದರ್ಜೆಗೇರಿಸುವುದು, ರಾಜಕಾಲುವೆ ದುರಸ್ತಿ, ಕ್ರೀಡಾಂಗಣಗಳ ಅಭಿವೃದ್ಧಿ, ಬರ್ಲಿ ನಿರ್ಮಾಣ, ವಸತಿ ಮತ್ತು ವಾಣಿಜ್ಯ ಸಂಕೀರ್ಣ ನಿರ್ಮಾಣ, ಕುಡಿಯುವ ನೀರು ಸಂಗ್ರಹಣಾಗಾರದ ನಿರ್ಮಾಣ, ಬಯೋ ತಾಂತ್ರಿಕ ಆಧಾರದಲ್ಲಿ ಮಲಿನಗೊಂಡ ಕೆರೆಗಳ ಪುನಶ್ಚೇತನ, ಬಡಾವಣೆಗಳ ಸೌಂದರ್ಯ ಸೃಜಿಸುವುದು, ಘನ ತ್ಯಾಜ್ಯ ವಿಲೇವಾರಿ, ಖಾಲಿ ನಿವೇಶನಗಳ ಸ್ವಚ್ಛತೆ, ರಿಂಗ್ ರಸ್ತೆಗೆ ಎಲ್‌ಇಡಿ ಬಲ್ಬ್ ಅಳವಡಿಸುವುದು, ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಸ್ಮಶಾನಗಳು ಮತ್ತು ಚಿತಾಗಾರಗಳಲ್ಲಿ ಮೂಲ ಸೌಕರ್ಯಕ್ಕೆ ಒತ್ತು, ಮುಡಾದಿಂದ ಲ್ಯಾಂಡ್ ಆಡಿಟ್, ಬದಲೀ ನಿವೇಶನ ನೀಡಿರುವ ವಿಶೇಷ ಸಮಿತಿ ರಚನೆ ಸೇರಿದಂತೆ ಹತ್ತು ಹಲವು ಯೋಜನೆಗಳಿಗೆ ಮುಡಾ ಬಜೆಟ್‌ನಲ್ಲಿ ಅನುದಾನವನ್ನು ಮೀಸಲಿರಿಸಿದೆ.



ಜಂಟಿ ಅಭಿವೃದ್ಧಿಯಡಿ ಬಡಾವಣೆ ನಿರ್ಮಾಣ

ಕಲ್ಪಿಸುವುದಕ್ಕಾಗಿ ಬಜೆಟ್‌ನಲ್ಲಿ 6000 ಲಕ್ಷ ರೂ.ಗಳನ್ನು ಮೀಸಲಿರಿಸಿದೆ. ಮೈಸೂರು ತಾಲೂಕು ಉದ್ಬೂರು-ದಾರಿಪುರ, ಬೊಮ್ಮೇನಹಳ್ಳಿ ಮತ್ತು ವಾಜಮಂಗಲ ಬಳಿ 437 ಎಕರೆ ಪ್ರದೇಶದಲ್ಲಿ ವಸತಿ ಬಡಾವಣೆ ನಿರ್ಮಿಸಿ 7,676 ನಿವೇಶನ ರಚಿಸಲು 26,200 ಲಕ್ಷ ರೂ. ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ.

ಗುಂಪು ಮನೆ ಯೋಜನೆ: ಮುಡಾದಿಂದ ಅಭಿವೃದ್ಧಿಗೊಂಡಿರುವ ವಿಜಯನಗರ, ದಟ್ಟಗಳ್ಳಿಯಲ್ಲಿ ಗುಂಪು ವಸತಿ ಯೋಜನೆಗಾಗಿ ಕಾಯ್ದಿರಿಸಿರುವ ಜಾಗಗಳಲ್ಲಿ 952 ಮನೆ ನಿರ್ಮಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, 29,800 ಲಕ್ಷ ರೂ. ವೆಚ್ಚವಾಗಬಹುದೆಂದು ಅಂದಾಜಿಸಲಾಗಿದೆ.



ಕಾಮಗಾರಿ ಪೂರ್ಣಗೊಂಡ ನಂತರ ಮನೆ ಹಂಚಿಕೆ ಮೂಲಕ ಸಂದಾಯವಾಗಬಹುದಾದ 55,000 ಲಕ್ಷ ರೂ. ಆದಾಯವನ್ನು ನಿರೀಕ್ಷಿಸಿ ಪ್ರಾಧಿಕಾರವು ಪ್ರಸಕ್ತ ಸಾಲಿನಲ್ಲಿ ಒಟ್ಟು 10,000 ಲಕ್ಷ ರೂ.ಗಳನ್ನು ಇದಕ್ಕಾಗಿ ಮೀಸಲಿರಿಸಲಾಗಿದೆ.

ರಸ್ತೆಗಳ ಅಭಿವೃದ್ಧಿ: ರಿಂಗ್ ರಸ್ತೆಗೆ ಸಂಪರ್ಕ ಕಲ್ಪಿಸುವ ನ್ಯೂ ಕಾಂತರಾಜ ಅರಸ್ ರಸ್ತೆ, ಅಕ್ಕಮಹಾದೇವಿ ರಸ್ತೆ ಹಾಗೂ ಆರ್‌ಟಿ ನಗರದ ಪ್ರಮುಖ ರಸ್ತೆಯನ್ನು ವಿಸ್ತರಿಸಿ ಅಭಿವೃದ್ಧಿಪಡಿಸಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಆಯ-ವ್ಯಯದಲ್ಲಿ ಅನುದಾನ ಮೀಸಲಿರಿಸಿದೆ. 20 ಮೀ. ಅಗಲದ ನ್ಯೂ ಕಾಂತರಾಜ ಅರಸ್ ರಸ್ತೆಯು ರಿಂಗ್ ರಸ್ತೆಯಿಂದ ಬಡಗಲಹುಂಡಿ, ಕೆಹೆಚ್‌ಬಿ ಕಾಲೋನಿ, ಬೆಮೆಲ್, ರೈಲ್ವೆ, ನ್ಯಾಯಾಂಗ ಬಡಾವಣೆಗಳ ಮೂಲಕ ಮರಟಿ ಕ್ಯಾತನಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಬೋಗಾದಿ ರಸ್ತೆಗೆ ಸಮಾನಾಂತರ ರಸ್ತೆಯಾಗಿದೆ. ಪ್ರಸ್ತುತ ರಿಂಗ್ ರಸ್ತೆಯಿಂದ ಕ್ರೈಸ್ಟ್ ಪಬ್ಲಿಕ್ ಶಾಲೆವರೆಗೆ ಸುಮಾರು 1,020 ಮೀ. ಅಭಿವೃದ್ಧಿಪಡಿಸಬೇಕಾಗಿದ್ದು, ಆ ಪೈಕಿ 600 ಮೀ. ಅಭಿವೃದ್ಧಿಗೆ ಮಾತ್ರ ಜಾಗ ಲಭ್ಯವಿದೆ. ಉಳಿದ 24 ಮೀ. ರಸ್ತೆಗೆ ಅಗತ್ಯವಾದ ಜಾಗವನ್ನು ವಶಪಡಿಸಿಕೊಳ್ಳಲು ಮುಡಾ ಮುಂದಾಗಿದೆ. ಅದಕ್ಕಾಗಿ ಟೌನ್ ಪ್ಲಾನಿಂಗ್ ಸ್ಕೀಂ ಮೂಲಕ ಯೋಜನೆಯನ್ನು ಕೈಗೆತ್ತಿಕೊಂಡು ಅಭಿವೃದ್ಧಿಪಡಿಸಲು ಆಯ-ವ್ಯಯದಲ್ಲಿ ಪ್ರಸ್ತಾಪಿಸಲಾಗಿದೆ. ಇದೇ ರೀತಿ ವಿದ್ಯಾರಣ್ಯಪುರಂನಿಂದ ಮಂಡಕಳ್ಳಿ ಗ್ರಾಮ ವ್ಯಾಪ್ತಿಗೆ ಸಂಪರ್ಕ ಕಲ್ಪಿಸುವ ಅಕ್ಕಮಹಾದೇವಿ ರಸ್ತೆಯು ಹಾಲಿ 18 ಮೀ. ಅಗಲವಿದ್ದು, ಇದರ ವಿಸ್ತರಣೆಗೆ 500 ಲಕ್ಷ ರೂ.ಗಳನ್ನು ಕಾಯ್ದಿರಿಸಲಾಗಿದೆ ಹಾಗೂ 30 ಮೀ. ಅಗಲವಿರುವ ಆರ್‌ಟಿ ನಗರ ಮುಖ್ಯ ರಸ್ತೆಯನ್ನು ರಿಂಗ್ ರಸ್ತೆಯಿಂದ ಮೂಗನಹುಂಡಿ, ಕೆ.ಸಾಲುಂಡಿ, ನಂಜರಾಜಯ್ಯನಹುಂಡಿ ಮತ್ತು ರಾಮನಹುಂಡಿ ಗ್ರಾಮಗಳವರೆಗೆ ಅಭಿವೃದ್ಧಿಪಡಿಸುವ ಅಗತ್ಯವಿದ್ದು, ಅದಕ್ಕಾಗಿ ಆಯ-ವ್ಯಯದಲ್ಲಿ ಅನುದಾನ ಮೀಸಲಿರಿಸಲಾಗಿದೆ.



ಯುಆರ್‌ಹೆಚ್ ಯೋಜನೆ: ಮೈಸೂರು ನಗರದಲ್ಲಿರುವ ಕೈಗಾರಿಕಾ ಪ್ರದೇಶಗಳಲ್ಲಿ ಹೆಚ್ಚು ಮಂದಿ ವಲಸೆ ಕಾರ್ಮಿಕರು ಹಾಗೂ ಅಸಂಘಟಿತ ಕಾರ್ಮಿಕರು ಕೆಲಸ ಮಾಡುತ್ತಿರುವುದರಿಂದ ಅವರಿಗೆ ಕೇಂದ್ರದ ಅನುದಾನದಡಿ ರಿಂಗ್ ರಸ್ತೆಗೆ ಹೊಂದಿಕೊಂಡಂತಿರುವ ಬೆಲವತ್ತ ಗ್ರಾಮದ ಬಳಿ ಯುಆರ್ ಹೆಚ್‌ಎಸ್ ಯೋಜನೆಯನ್ನು ಅನುಷ್ಠಾನಗೊಳಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ 500ಲಕ್ಷ ರೂ.ಗಳನ್ನು ಕಾಯ್ದಿರಿಸಲಾಗಿದೆ. ಅದೇ ರೀತಿ ಪ್ರಾಧಿಕಾರದಿಂದ ಅಭಿವೃದ್ಧಿ ಪಡಿಸಿರುವ ಬಡಾವಣೆಗಳ ಖಾಲಿ ಜಾಗದಲ್ಲಿ ವಿಶೇಷ ಗುಂಪು ವಸತಿ ಯೋಜನೆಯನ್ನು ಅನುಷ್ಠಾನಗೊಳಿಸಲು 500 ಲಕ್ಷ ರೂ.ಗಳನ್ನು ಕಾಯ್ದಿರಿಸಲಾಗಿದೆ.

ಎಲ್‌ಇಡಿ ಬಲ್ಬ್ ಅಳವಡಿಕೆ: ಪ್ರಾಧಿಕಾರ ಅಭಿವೃದ್ಧಿಪಡಿಸಿರುವ ವಸಂತನಗರ, ಲಾಲ್‌ಬಹದ್ದೂರ್ ಶಾಸ್ತ್ರಿ ನಗರ, ಶಾಂತವೇರಿ ಗೋಪಾಲ ಗೌಡನಗರ, ವಿಜಯನಗರ 4ನೇ ಹಂತ ಬಡಾವಣೆಗಳಲ್ಲಿ ಎಲ್‌ಇಡಿ ಬಲ್ಬ್ ಅಳವಡಿಸಲು ಸ್ಥಳೀಯ ಗ್ರಾಮ ಪಂಚಾಯಿತಿಗಳ ಸಹಭಾಗಿತ್ವದಲ್ಲಿ ಉದ್ದೇಶಿ ಸಲಾಗಿದ್ದು, ಅದಕ್ಕಾಗಿ 5 ಕೋಟಿ ರೂ.ಗಳ ಪ್ರೀಮಿಯಂ ಅನ್ನು ಕಾಯ್ದಿರಿಸಲಾಗಿದೆ. ಕಪಿಲಾ ನದಿಗೆ ಒಳಚರಂಡಿ ನೀರು ಹರಿದು ಹೋಗುತ್ತಿರುವುದನ್ನು ತಪ್ಪಿಸಲು ನಂಜನಗೂಡು ಪಟ್ಟಣ ವ್ಯಾಪ್ತಿಯಲ್ಲಿ ಯುಜಿಡಿ ಟ್ರಂಕ್ ಲೈನ್ ಮತ್ತು ಒಳಚರಂಡಿ ನೀರಿನ ಸಾಗಾಣಿಕೆ ಪೈಪ್‌ಗಳನ್ನು ಅಳವಡಿಸಿ ಎಸ್‌ಟಿಪಿ ನಿರ್ಮಿಸಲು 11.50 ಕೋಟಿ ರೂ.ಗಳನ್ನು ಬಜೆಟ್‌ನಲ್ಲಿ ಮೀಸಲಿರಿಸಲಾಗಿದೆ.



ವಸತಿ ಸಮುಚ್ಚಯ ನಿರ್ಮಾಣ: ಮುಡಾದಿಂದ ಸ್ವಾಧೀನಪಡಿಸಿಕೊಂಡಿರುವ ವಿಜಯಶ್ರೀಪುರ ವ್ಯಾಪ್ತಿಯ 16 ಎಕರೆ ಹಾಗೂ ಲಲಿತಾದ್ರಿಪುರ ಗ್ರಾಮದ 26 ಎಕರೆ ಪ್ರದೇಶದಲ್ಲಿ ಅಂತಾರಾಷ್ಟ್ರೀಯ ಮಟ್ಟದ ವಾಣಿಜ್ಯ ಸಂಕೀರ್ಣ ಮತ್ತು ವಸತಿ ಸಮುಚ್ಚಯಗಳನ್ನು ನಿರ್ಮಿಸಲುದ್ದೇಶಿಸಲಾಗಿದ್ದು, ಈ ಸಂಬಂಧ ಡಿಪಿಆರ್ ತಯಾರಿಸಲು 1 ಕೋಟಿ ಮೀಸಲಿರಿಸಲಾಗಿದೆ.

ಟಾಸ್ಕ್‌ಫೋರ್ಸ್ ರಚನೆ: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ವಿಶೇಷ ಟಾಸ್ಕ್‌ಫೋರ್ಸ್ ವಿಭಾಗವನ್ನು ತೆರೆಯಲು ಉದ್ದೇಶಿಸಲಾಗಿದ್ದು, ಡಿವೈಎಸ್‌ಪಿ ದರ್ಜೆ ಅಧಿಕಾರಿಯ ನೇತೃತ್ವದಲ್ಲಿ ಇಬ್ಬರು ಪೊಲೀಸ್ ಇನ್ಸ್‌ಪೆಕ್ಟರ್‌ಗಳು, ಇಬ್ಬರು ಸಬ್ ಇನ್ಸ್‌ಪೆಕ್ಟರ್‌ಗಳು, ನಾಲ್ವರು ಹೆಡ್ ಕಾನ್‌ಸ್ಟೇಬಲ್‌ಗಳು ಹಾಗೂ 10 ಮಂದಿ ಕಾನ್‌ಸ್ಟೇಬಲ್‌ಗಳನ್ನೊಳಗೊಂಡ ಟಾಸ್ಕ್‌ಫೋರ್ಸ್ ರಚಿಸಲು 50 ಲಕ್ಷ ರೂ.ಗಳನ್ನು ಕಾಯ್ದಿರಿಸಲಾಗಿದೆ ಹಾಗೂ ಪ್ರಾಧಿಕಾರದ ಆಸ್ತಿಯನ್ನು ಅನ್ಯರು ಕಬಳಿಸುತ್ತಿರುವುದನ್ನು ತಡೆಯಲು ವಿಶೇಷ ತಂಡ ರಚಿಸಲು ಉದ್ದೇಶಿಸಲಾಗಿದೆ.

ಮೈಸೂರು ಸುತ್ತ 7 ವಾಣಿಜ್ಯ ಕ್ಲಸ್ಟರ್‌ಗಳ ರಚನೆ

ಪ್ರಸ್ತಾಪಿತ ಪರ್ಯಾಯ ರಿಂಗ್ ರಸ್ತೆಯನ್ನು ಇತರ ಊರುಗಳ ಸಂಪರ್ಕ ರಸ್ತೆ ಸೇರುವ ಸ್ಥಳಗಳಲ್ಲಿ ವಾಣಿಜ್ಯ ಕ್ಲಸ್ಟರ್‌ಗಳನ್ನು ನಿರ್ಮಿಸಲು ಮುಡಾ ಉದ್ದೇಶಿಸಿದೆ. ಅದರಂತೆ ಮೈಸೂರು-ಬೆಂಗಳೂರು ಜಂಕ್ಷನ್‌ನಲ್ಲಿ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಕ್ಲಸ್ಟರ್‌ಗಳು, ಮೈಸೂರು-ಹುಣಸೂರು ಜಂಕ್ಷನ್‌ನಲ್ಲಿ ಶೈಕ್ಷಣಿಕ ಮತ್ತು ಆರೋಗ್ಯ ಕ್ಲಸ್ಟರ್‌ಗಳು, ಮೈಸೂರು-ನಂಜನಗೂಡು ಜಂಕ್ಷನ್‌ನಲ್ಲಿ ಐಟಿ ಮತ್ತು ಬಿಟಿ ಉದ್ಯಮ ಕ್ಲಸ್ಟರ್‌ಗಳು, ಮೈಸೂರು-ಹೆಚ್.ಡಿ.ಕೋಟೆ ಜಂಕ್ಷನ್‌ನಲ್ಲಿ ಗಾರ್ಮೆಂಟ್ಸ್ ಮತ್ತು ಅಪೇರಲ್ಸ್ ಕ್ಲಸ್ಟರ್‌ಗಳು, ಮೈಸೂರು-ಗದ್ದಿಗೆ ಜಂಕ್ಷನ್‌ನಲ್ಲಿ ಗಾರ್ಮೆಂಟ್ಸ್ ಮತ್ತು ಅಪೇರಲ್ಸ್ ಕ್ಲಸ್ಟರ್‌ಗಳು ಹಾಗೂ ಸಾಂಸ್ಕೃತಿಕ ಗ್ರಾಮ, ಮೈಸೂರು-ಬನ್ನೂರು ಜಂಕ್ಷನ್‌ನಲ್ಲಿ ವಿಶೇಷ ಕ್ಲಸ್ಟರ್‌ಗಳು ಹಾಗೂ ಕ್ರೀಡಾಗ್ರಾಮ ರಚನೆಗೆ ಮುಡಾ ಬಜೆಟ್‌ನಲ್ಲಿ ಘೋಷಿಸಲಾಗಿದೆ.

ಬದಲಿ ನಿವೇಶನ ಪ್ರಕರಣಗಳ ಅಧ್ಯಯನಕ್ಕಾಗಿ ವಿಶೇಷ ಸಮಿತಿ

ಮುಡಾದಿಂದ ಹಂಚಿಕೆಯಾದ ಮೂಲ ನಿವೇಶನಕ್ಕೆ ಬದಲಿ ನಿವೇಶನವನ್ನು ನೀಡಲಾಗಿದ್ದರೂ, ಹಂಚಿಕೆಯಾಗಿದ್ದ ಮೂಲ ನಿವೇಶನಗಳು ಹಂಚಿಕೆದಾರರ ಹೆಸರಿನಲ್ಲೇ ಮುಂದುವರೆದು ಮುಡಾ ಆಸ್ತಿ ಅನ್ಯರ ವಶವಾಗಿರುವ ಬಗ್ಗೆ ಕೆಲವು ಪ್ರಕರಣಗಳು ಬೆಳಕಿಗೆ ಬಂದಿವೆ. ಈ ಹಿನ್ನೆಲೆಯಲ್ಲಿ ಬದಲಿ ನಿವೇಶನ ನೀಡಲಾದ ಪ್ರಕರಣಗಳನ್ನು ಸಮಗ್ರವಾಗಿ ಅಧ್ಯಯನ ನಡೆಸಿ ಮೂಲ ನಿವೇಶನಗಳನ್ನು ರದ್ದುಪಡಿಸಿ ಅದನ್ನು ಪ್ರಾಧಿಕಾರದ ವಶಕ್ಕೆ ತೆಗೆದುಕೊಂಡರೆ ನೂರಾರು ಕೋಟಿ ರೂ. ಮೌಲ್ಯದ ಆಸ್ತಿ ಸಂರಕ್ಷಣೆಯಾದಂತಾಗುತ್ತದೆ. ಹೀಗಾಗಿ ಮುಡಾ ಕಾರ್ಯದರ್ಶಿಗಳ ನೇತೃತ್ವದಲ್ಲಿ ಇಬ್ಬರು ನಿವೃತ್ತ ತಹಸೀಲ್ದಾರ್ ಹಂತದ ಅಧಿಕಾರಿಗಳನ್ನು ನೇಮಕ ಮಾಡಿಕೊಂಡು ವಿಶೇಷ ಸಮಿತಿ ರಚಿಸುವ ಉದ್ದೇಶಕ್ಕಾಗಿ 50 ಲಕ್ಷ ರೂ.ಗಳನ್ನು ಕಾಯ್ದಿರಿಸಲಾಗಿದೆ.

ಮುಖ್ಯ ರಸ್ತೆಗಳಲ್ಲಿ ಮಹಾದ್ವಾರ ನಿರ್ಮಾಣ

ನಂಜನಗೂಡು ರಸ್ತೆ, ತಿ.ನರಸೀಪುರ ರಸ್ತೆ, ಹೆಚ್.ಡಿ.ಕೋಟೆ ರಸ್ತೆ, ಗದ್ದಿಗೆ ರಸ್ತೆ ಹಾಗೂ ಬನ್ನೂರು ರಸ್ತೆಗಳಲ್ಲಿ ಲೋಕೋಪಯೋಗಿ ಇಲಾಖೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ಪಂಚಾಯತ್ ರಾಜ್ ಸಹಭಾಗಿತ್ವದಲ್ಲಿ ನಿರ್ಮಿಸಲುದ್ದೇಶಿಸಿರುವ ಮಹಾದ್ವಾರಗಳಿಗೆ ರಾಜಮನೆತನದವರ ಹೆಸರಿಡಲು ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹಕ್ಕೆ ಮುಡಾ ಮುಂದಾಗಿದೆ.

ಆಟೋನಗರ ನಿರ್ಮಾಣ: ಮಂಡಕಳ್ಳಿ ಬಳಿ 15 ಎಕರೆ ಪ್ರದೇಶದಲ್ಲಿ ಆಟೋನಗರ ಯೋಜನೆಯನ್ನು ಜಾರಿಗೊಳಿಸಲು ಮುಡಾ ಮುಂದಾಗಿದೆ. ಒಂದೇ ಸೂರಿನಡಿ ನೂರಕ್ಕೂ ಹೆಚ್ಚು ವಾಹನ ದುರಸ್ತಿದಾರರಿಗೆ ವ್ಯವಸ್ಥೆ ಕಲ್ಪಿಸಲು ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಿ, ಆಟೋನಗರ ನಿರ್ಮಿಸಲು ಪ್ರಸಕ್ತ ಹಣಕಾಸು ವರ್ಷದಲ್ಲಿ 20,000 ಲಕ್ಷ ರೂ.ಗಳನ್ನು ಕಾಯ್ದಿರಿಸಲಾಗಿದೆ.



ಮೆಟ್ರೋ ಯೋಜನೆಗೆ ಪ್ರಸ್ತಾಪ: ಅತೀ ವೇಗವಾಗಿ ಬೆಳೆಯುತ್ತಿರುವ ಮೈಸೂರು ನಗರಕ್ಕೆ ದಶಪಥ ರಸ್ತೆ, ವಿಮಾನ ನಿಲ್ದಾಣ ಅಭಿವೃದ್ಧಿಗೊಂಡಿರುವುದರಿಂದ ಹಾಗೂ ಮುಂದಿನ ದಿನಗಳಲ್ಲಿ ಬುಲೆಟ್ ರೈಲು ಸಂಪರ್ಕ ಕಲ್ಪಿಸಲು ಯೋಜಿಸಿರುವ ಹಿನ್ನೆಲೆಯಲ್ಲಿ ಮುಂದಿನ 10 ವರ್ಷಗಳಲ್ಲಿ ಆಗಬಹುದಾದ ಬೆಳವಣಿಗೆಗಳನ್ನು ಗಮನದಲ್ಲಿರಿಸಿಕೊಂಡು ಮೈಸೂರು ನಗರಕ್ಕೆ ಮೆಟ್ರೋ ಯೋಜನೆ ಅಗತ್ಯ ಇದೆ ಎಂದು ಪ್ರಸ್ತಾಪಿಸಲಾಗಿದೆ. ಅದಕ್ಕಾಗಿ ನಿಯೋ ಮೆಟ್ರೋ ಅಥವಾ ಮೆಟ್ರೋಲೈಟ್ ಅಥವಾ ಮೆಟ್ರೋ ಯೋಜನೆಯನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ನೈಪುಣ್ಯತೆ ಹೊಂದಿರುವ ಸಂಸ್ಥೆಗಳಿಂದ ಕಾರ್ಯಸಾಧ್ಯತೆ ವರದಿ ತಯಾರಿಸಲು 1 ಕೋಟಿ ರೂ.ಗಳನ್ನು ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಮೀಸಲಿರಿಸಲಾಗಿದೆ.



ಕುಪ್ಪಣ್ಣ ಪಾರ್ಕ್ ಅಭಿವೃದ್ಧಿ: ಕೇವಲ ದಸರಾ ಮಹೋತ್ಸವದ ಸಂದರ್ಭದಲ್ಲಿ ಮಾತ್ರ ಫಲಪುಷ್ಪ ಪ್ರದರ್ಶನ ಹಾಗೂ ಇನ್ನಿತರ ಕಾರ್ಯಕ್ರಮಗಳು ಜರುಗುತ್ತಿರುವ ಮೈಸೂರಿನ ಹೃದಯ ಭಾಗದಲ್ಲಿರುವ ಕುಪ್ಪಣ್ಣ ಪಾರ್ಕ್‌ನಲ್ಲಿ ವರ್ಷವಿಡೀ ಸಾಂಸ್ಕೃತಿಕ ಹಾಗೂ ಮನೋರಂಜನಾ ಕಾರ್ಯಕ್ರಮಗಳಿಗೆ ಅನುಕೂಲವಾಗುವಂತೆ ತೋಟಗಾರಿಕೆ ಇಲಾಖೆ ಹಾಗೂ ಮೈಸೂರು ಮಹಾನಗರ ಪಾಲಿಕೆ ಸಹಭಾಗಿತ್ವದಲ್ಲಿ ಪಾರ್ಕ್ ಅನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಅದಕ್ಕಾಗಿ 3 ಕೋಟಿ ರೂ.ಗಳನ್ನು ಕಾಯ್ದಿರಿಸಲಾಗಿದೆ.



ಏರ್ ಕ್ವಾಲಿಟಿ ಮಾನಿಟರಿಂಗ್ ಸಿಸ್ಟಂ: ಅಭಿವೃದ್ಧಿಯತ್ತ ಸಾಗುತ್ತಿರುವ ಮೈಸೂರು ನಗರದಲ್ಲಿ ಪರಿಸರದ ಮೇಲೆ ಆಗುವ ಪರಿಣಾಮವನ್ನು ತಪ್ಪಿಸಲು ಹಾಗೂ ಗಾಳಿಯ ಗುಣಮಟ್ಟದಲ್ಲಿ ಆಗುವ ಬದಲಾವಣೆಗಳನ್ನು ಅಧ್ಯಯನ ಮಾಡಿ ಉತ್ತಮ ವಾತಾವರಣ ನಿರ್ಮಿಸುವ ದೃಷ್ಟಿಯಿಂದ ಮೈಸೂರು ನಗರದಿಂದ ಪೂರ್ವ ಮತ್ತು ಪಶ್ಚಿಮ ಭಾಗದಲ್ಲಿ ಏರ್ ಕ್ವಾಲಿಟಿ ಮಾನಿಟರಿಂಗ್ ಸಿಸ್ಟಂ ಅಳವಡಿಸಲು 50 ಲಕ್ಷ ರೂ.ಗಳನ್ನು ಕಾಯ್ದಿರಿಸಿರುವ ಮುಡಾ, ಸುಮಾರು 50 ಉದ್ಯಾನವನಗಳಲ್ಲಿ ಹಸಿರೀಕರಣ ಮತ್ತು ಅರಣ್ಯೀಕರಣ ಮಾಡುವ ಮೂಲಕ ಪ್ರಾಣಿ-ಪಕ್ಷಿ ಸಂಕುಲಗಳಿಗೆ ಅನುಕೂಲವಾಗುವಂತೆ 50 ಸಾವಿರ ಸಸಿಗಳನ್ನು ನೆಟ್ಟು, ಪೋಷಿಸಲು ಉದ್ದೇಶಿಸಿ, ಅದಕ್ಕಾಗಿ 150 ಲಕ್ಷ ರೂ.ಗಳನ್ನು ಕಾಯ್ದಿರಿಸಲಾಗಿದೆ.

ಅನಧಿಕೃತ ಕಟ್ಟಡಗಳ ಸಕ್ರಮ: ಪ್ರಾಧಿಕಾರದಿಂದ ನಿರ್ಮಿಸಲಾಗಿರುವ ಬಡಾವಣೆಗಳಿಗೆ ಭೂ ಸ್ವಾಧೀನಪಡಿಸಿಕೊಳ್ಳಲು ಅಧಿಸೂಚನೆ ಹೊರಡಿಸುವಾಗ ಭೂ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಉಂಟಾಗಿದ್ದ ಖಾಸಗಿ ವ್ಯಾಜ್ಯಗಳಿಂದಾಗಿ ನೂರಾರು ಎಕರೆ ಭೂಮಿ ಅಂತಿಮ ಅಧಿಸೂಚನೆಯಲ್ಲಿ ಸೇರಿದ್ದರೂ ಸಂಪೂರ್ಣ ಸ್ವಾಧೀನಕ್ಕೆ ಒಳಪಟ್ಟಿರುವುದಿಲ್ಲ. ಅಂತಹ ಭೂಮಿಯಲ್ಲಿ ಅನಧಿಕೃತ ಕಟ್ಟಡಗಳು ನಿರ್ಮಾಣವಾಗಿದ್ದು, ಕಟ್ಟಡ ನಕ್ಷೆ ಮತ್ತು ಖಾತಾ ವರ್ಗಾವಣೆಗೆ ತಾಂತ್ರಿಕ ತೊಡಕು ಉಂಟಾಗಿರುವುದರಿಂದ ಅಂತಹ ಕಟ್ಟಡಗಳನ್ನು ಬಿಡಿಎ ಮಾದರಿಯಲ್ಲಿ ಆಸ್ತಿ ಮಾಲೀಕರಿಗೇ ರೀ-ಕನ್ವೆ ಮೂಲಕ ಹಕ್ಕುಪತ್ರ ನೀಡಲು ಪ್ರಸ್ತುತ ಮಾರುಕಟ್ಟೆ ದರದ ಶೇ.25, ಶೇ.30, ಶೇ.35 ಹಾಗೂ ಶೇ.40ರಷ್ಟನ್ನು ವಿವಿಧ ಅಳತೆಯ ನಿವೇಶನಗಳಿಗೆ ದಂಡ ರೂಪದಲ್ಲಿ ಪಾವತಿಸಿಕೊಂಡು ವಿಶೇಷ ನಿಯಮದಡಿ ಅಂತಹ ಕಟ್ಟಡಗಳನ್ನು ಸಕ್ರಮಗೊಳಿಸಿದ್ದಲ್ಲಿ ಪ್ರಾಧಿಕಾರಕ್ಕೆ ನೂರಾರು ಕೋಟಿ ಸಂಪನ್ಮೂಲ ಕ್ರೋಢೀಕರಣವಾಗುತ್ತದೆಯಲ್ಲದೇ, ಯೋಜನಾಬದ್ಧ ಕಾರ್ಯಸೂಚಿ ನಿರೂಪಿಸಬಹುದಾಗಿದೆ ಎಂದು ಅಭಿಪ್ರಾಯಿಸಿ, ಪ್ರಸ್ತಾವನೆ ತಯಾರಿಸಲು ಅಗತ್ಯವಿರುವ ಸರ್ವೆ ಕಾರ್ಯ ಮತ್ತು ಆ್ಯಸ್ ಬಿಲ್ಟ್ ಪ್ಲಾನ್ ತಯಾರಿಸಲು 50 ಲಕ್ಷ ರೂ.ಗಳನ್ನು ಮೀಸಲಿರಿಸಲಾಗಿದೆ.

ಅಭಿವೃದ್ಧಿ ಕಾಮಗಾರಿಗಳ ಶೀಘ್ರ ಪೂರ್ಣಗೊಳಿಸಲು ಜಿಟಿಡಿ ಸೂಚನೆ

ಮೈಸೂರು,ಮಾ.31- ಅಭಿವೃದ್ಧಿ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸುವಂತೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು, ಅಧಿಕಾರಿಗಳಿಗೆ ಸೂಚಿಸಿದರು. ಮುಡಾ ಬಜೆಟ್ ಮಂಡನೆ ನಂತರ ಮಾತನಾಡಿದ ಅವರು, ನಗರದ ಹಲವೆಡೆ ಕಾಮಗಾರಿಗಳು ಅರ್ಧಕ್ಕೆ ನಿಂತಿದ್ದು, ಆದ್ಯತೆಯಲ್ಲಿ ಆದಷ್ಟು ಬೇಗ ಪೂರ್ಣಗೊಳಿಸಬೇಕು. ಮುಡಾ ಬಡಾವಣೆಗಳಲ್ಲಿ ಕುಡಿಯುವ ನೀರು, ವಿದ್ಯುತ್, ಒಳಚರಂಡಿ ಇನ್ನಿತರ ಮೂಲ ಸೌಕರ್ಯ ಕಲ್ಪಿಸಿ, ಜನರ ಬವಣೆ ನೀಗಿಸಬೇಕು ಎಂದು ತಿಳಿಸಿದರು.



ಖಾಸಗಿ ಬಡಾವಣೆಗಳಿಂದಲೂ ಕಂದಾಯ ವಸೂಲಿ ಮಾಡಲಾಗುತ್ತಿದೆ. ಆದರೆ ಅವರಿಗೆ ಕನಿಷ್ಠ ಕುಡಿಯುವ ನೀರಿನ ವ್ಯವಸ್ಥೆಯನ್ನೂ ಮಾಡಿಲ್ಲ. ಬೀದಿದೀಪ ನಿರ್ವಹಣೆ ಇಲ್ಲವೇ ಇಲ್ಲ. ಜನರಿಂದ ಕಂದಾಯ ವಸೂಲಿ ಮಾಡಿದವರೇ ಬೀದಿದೀಪಗಳ ಬಿಲ್ ಪಾವತಿಸಬೇಕಲ್ಲವೇ?. ಇದರಿಂದ ನುಣುಚಿಕೊಳ್ಳುವ ಪ್ರಯತ್ನ ಮಾಡಬಾರದು. ಖಾಸಗಿ ಬಡಾವಣೆಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ ಮಾಡುವ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ವಿಜಯನಗರ 4ನೇ ಹಂತ ನಿರ್ಮಿಸಿದ್ದ ಮುಡಾ. ಆದರೆ ಬೀದಿದೀಪಗಳ ಬಿಲ್ ಪಾವತಿಸದ ಕಾರಣ ಬಡಾವಣೆಯಲ್ಲಿ ರಾತ್ರಿ ವೇಳೆ ಕಗ್ಗತ್ತಲು ಆವರಿಸುತ್ತದೆ. ತಕ್ಷಣ ಈ ಸಮಸ್ಯೆಯನ್ನು ಬಗೆಹರಿಸಬೇಕು. ಪ್ರಕೃತಿ ವಿಕೋಪ ಸಂಭವಿಸಿದಾಗ ತುರ್ತು ಕಾಮಗಾರಿಗಳಿಗೆಂದು ಬಜೆಟ್‌ನಲ್ಲಿ ಹಣ ಇಡಬೇಕು. ಮುಡಾ ಹಣ ಖರ್ಚು ಮಾಡುವಲ್ಲಿ 2 ನಿಧಿ ಸ್ಥಾಪಿಸಿ ಶೇ.50ರಷ್ಟು ಹಣವನ್ನು ನಿಧಿಯಲ್ಲಿ ಕಾಯ್ದಿರಿಸಿ ಉಳಿದ ಹಣವನ್ನು ಅಭಿವೃದ್ಧಿಗೆ ಬಳಸಬೇಕು. ಮಹಾರಾಜರ ದೂರದೃಷ್ಟಿಯ ಫಲವಾಗಿರುವ ಸುಂದರ ಮೈಸೂರು ಹಾಳಾಗಬಾರದು. ಇಲ್ಲಿನ ಪರಿಸರ, ಪ್ರವಾಸಿ ತಾಣ, ರಸ್ತೆಗಳು ಎಲ್ಲವೂ ಮಹಾರಾಜರ ದೂರದೃಷ್ಟಿಯ ಫಲ. ಇದಕ್ಕೆ ಧಕ್ಕೆಯಾಗದ ರೀತಿಯಲ್ಲಿ ಹೊಸ ಯೋಜನೆಗಳನ್ನು ರೂಪಿಸಬೇಕೆಂದು ಸಲಹೆ ನೀಡಿದರು.

ಮುಡಾ ಬಜೆಟ್‌ಗೆ ಮಿಶ್ರ ಪ್ರತಿಕ್ರಿಯೆ

ಬಜೆಟ್ ಅಭಿವೃದ್ಧಿ ಪೂರಕವಾಗಿರಲಿ; ಕೇವಲ ಔಪಚಾರಿಕ ಪ್ರಕ್ರಿಯೆಯಾಗಿರಬಾರದು

ಮೈಸೂರು, ಮಾ.31(ಆರ್‌ಕೆ)-ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ಇಂದು ಮಂಡಿತವಾದ 129.75 ಕೋಟಿ ರೂ.ಗಳ ಉಳಿತಾಯ ಬಜೆಟ್‌ಗೆ ಸದಸ್ಯರುಗಳಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಎಸ್.ಎ.ರಾಮದಾಸ್: ಪ್ರಸಕ್ತ ಸಾಲಿನ ಬಜೆಟ್ ಅಭಿವೃದ್ಧಿ ಪೂರಕವಾಗಿದೆ. ಆದರೆ ಕಳೆದ ವರ್ಷದ ಬಜೆಟ್‌ನಲ್ಲಿ ಪ್ರಕಟಿಸಿದ್ದ ಯೋಜನೆಗಳು ಕೇವಲ ಶೇ.52ರಷ್ಟು ಮಾತ್ರ ಜಾರಿಗೆ ಬಂದಿರುವುದು ಬೇಸರದ ಸಂಗತಿ. ಬಡವರ ಕ್ಷೇಮಾಭಿವೃದ್ಧಿಗಾಗಿ ಯೋಜನೆಗಳು ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ರೂಪಿತವಾಗಿಲ್ಲ. ಸಾಮಾಜಿಕವಾಗಿ, ಆರೋಗ್ಯದ ದೃಷ್ಟಿಯಿಂದ, ವಿದ್ಯಾರ್ಥಿಗಳಿಗೆ, ಹಿರಿಯ ನಾಗರಿಕರಿಗೆ ಪೂರಕವಾದ ಯಾವುದೇ ಕಾರ್ಯಕ್ರಮ ಜೋಡಿಸಿಲ್ಲ. ಪಂಚತತ್ವದಡಿ ಸಾಮಾಜಿಕ ನ್ಯಾಯ ಕಲ್ಪಿಸುವ ದೃಷ್ಟಿಯಿಂದ ಮತ್ತಷ್ಟು ಹಣವನ್ನು ಮೀಸಲಿಡಬೇಕಾಗಿತ್ತು. ಮುಡಾಗೆ ಸೇರಿದ ಆಸ್ತಿಗಳನ್ನು ಸಂರಕ್ಷಿಸುವ ಬಗ್ಗೆ ಹಾಗೂ ಪಾಲಿಕೆಗೆ ಬಡಾವಣೆಗಳನ್ನು ಹಸ್ತಾಂತರಿಸಿರುವ ಬಗ್ಗೆ ಸ್ಪಷ್ಟತೆ ಇಲ್ಲ. ಪ್ರಾಧಿಕಾರದಿಂದ ರಚನೆಯಾಗಿರುವ ಬಡಾವಣೆಗಳನ್ನು ಅಭಿವೃದ್ಧಿಪಡಿಸಿ ಆದಷ್ಟು ಬೇಗ ಪಾಲಿಕೆಗೆ ಹಸ್ತಾಂತರಿಸಬೇಕು.



ಎಲ್.ನಾಗೇಂದ್ರ: ಮಂಡನೆಯಾಗಿರುವ ಬಜೆಟ್‌ನಲ್ಲಿ ರೂಪಿಸಿರುವ ಕಾರ್ಯಕ್ರಮಗಳಲ್ಲಿ ಶೇ.90ರಷ್ಟು ಜಾರಿಯಾಗಬೇಕು. ಸ್ಮಶಾನಗಳು, ದೋಬಿ ಘಾಟ್ ಅಭಿವೃದ್ಧಿಗೆ ನೀಡಿರುವ ಅನುದಾನವನ್ನು ಹೆಚ್ಚಿಸಬೇಕು. ವಿಳಂಬವಾಗಿರುವ ಆಟೋನಗರವನ್ನು ಈಗಲಾದರೂ ಸಾಕಾರಗೊಳಿಸಿ. ಕುಪ್ಪಣ್ಣ ಪಾರ್ಕ್‌ಗೆ ನೀಡಿರುವ ಹಣ ಸಾಲದಾಗಿದ್ದು, ವರ್ಷಪೂರ್ತಿ ಚಟುವಟಿಕೆಗಳನ್ನು ನಡೆಸಲು ಬೇಕಾದ ಸೌಲಭ್ಯ ಒದಗಿಸಿ. ವಿಜಯನಗರ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ಸ್ವಿಮ್ಮಿಂಗ್ ಪೂಲ್ ನಿರ್ಮಿಸಬೇಕಾಗಿದೆ. ಕುಂಬಾರಕೊಪ್ಪಲು ಕೆಂಪೇಗೌಡ ಕ್ರೀಡಾಂಗಣಕ್ಕೆ ಹೆಚ್ಚು ಅನುದಾನದ ಅಗತ್ಯವಿದೆ. ಹೆಬ್ಬಾಳು ಮತ್ತು ವಿಜಯನಗರ ಭಾಗದ ರಸ್ತೆಗಳ ಸಮಗ್ರ ಅಭಿವೃದ್ಧಿಗೆ ಒತ್ತು ಕೊಡಬೇಕು. ಕಾಂಟೂರು ರಸ್ತೆಯಿಂದ ಕೆಆರ್‌ಎಸ್ ರಸ್ತೆಯವರೆಗೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕು. ಅನುದಾನದಲ್ಲಿ ತಾರತಮ್ಯ ಮಾಡದೇ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಗೂ ಸಮಾನಾಂತರವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಯೋಜನೆ ನಿರೂಪಿಸಬೇಕು.



ಕೆ.ಟಿ.ಶ್ರೀಕಂಠೇಗೌಡ: ರೂಪಿಸಲಾದ ಯೋಜನೆಗಳನ್ನು ಜಾರಿಗೆ ತರದಿದ್ದಲ್ಲಿ ಬಜೆಟ್‌ನ ಪಾವಿತ್ರ್ಯತೆ ಹಾಳಾಗುತ್ತದೆ. ಸಂಪನ್ಮೂಲ ಕ್ರೋಢೀಕರಣಕ್ಕೆ ಹಾಗೂ ಶಾಶ್ವತವಾಗಿ ಆದಾಯ ಸೃಷ್ಟಿಸಲು ಮುಡಾ ಬಜೆಟ್‌ನಲ್ಲಿ ಪ್ರಸ್ತಾವನೆ ಆಗಿಲ್ಲ. ಮೂಲ ಉದ್ದೇಶವಾದ ಬಡಾವಣೆ ರಚಿಸಿ, ನಿವೇಶನ ಹಂಚಿಕೆ ಮಾಡುವ ಸಂಕಲ್ಪ ಸಾಕಾರವಾಗಿಲ್ಲ. ಕೇವಲ ಲಭ್ಯವಿರುವ ನಿವೇಶನಗಳನ್ನು ಹರಾಜು ಮಾಡುತ್ತಿದ್ದರೆ ಮುಂದೆ ಮುಡಾ ಆರ್ಥಿಕ ಸಂಕಷ್ಟಕ್ಕೆ ಒಳಗಾಗಬಹುದು. ಗುಂಪು ಮನೆ ಯೋಜನೆ ವಿಳಂಬವಾಗುತ್ತಿದೆ. ಮೈಸೂರಿನಲ್ಲಿ ಒಳಚರಂಡಿ ಸಂಪರ್ಕ ಸದೃಢವಾಗಬೇಕು. ರಸ್ತೆಗಳ ಅಭಿವೃದ್ಧಿ, ಕುಡಿಯುವ ನೀರಿನ ಪೂರೈಕೆಯಂತಹ ಯೋಜನೆಗಳಿಗೆ ಪ್ರಾಧಿಕಾರ ಆದ್ಯತೆ ನೀಡಬೇಕು.



ಡಾ. ಡಿ.ತಿಮ್ಮಯ್ಯ: ಮಹಾ ಯೋಜನೆಯಡಿಯಲ್ಲಿ ಕೈಬಿಟ್ಟಿರುವ ಮೈಸೂರು ಮಹದೇವಪುರ ರಸ್ತೆ ಅಭಿವೃದ್ಧಿ ಕೈಗೆತ್ತಿಕೊಳ್ಳಿ. ದಲಿತ ಕೇರಿಗಳಲ್ಲಿನ ಸ್ಮಶಾನ ಅಭಿವೃದ್ಧಿಪಡಿಸಿ. ಶತಮಾನೋತ್ಸವದ ನೆನಪಿಗಾಗಿ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಗೆ ಪ್ರಾಧಿಕಾರದಿಂದ ಯಾವುದಾದರೊಂದು ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನ ಮಾಡಲು ಒತ್ತು ಕೊಡಬೇಕು.



ಸಿ.ಎನ್.ಮಂಜೇಗೌಡ: ಬೆಂಗಳೂರಿನಲ್ಲಿ ಏರ್ ಮಾನಿಟರಿಂಗ್ ಯೂನಿಟ್ ಹಾಗೂ ಟಾಸ್ಕ್‌ಫೋರ್ಸ್ ತಂಡಗಳು ವಿಫಲವಾಗಿವೆ. ಮಾಜಿ ಸೈನಿಕರಿಗೆ ವಿಶೇಷ ಸೌಲಭ್ಯವನ್ನು ನೀಡಬೇಕು. ಲ್ಯಾಂಡ್ ಆಡಿಟ್ ಮಾಡಿ ಪ್ರಾಧಿಕಾರದ ಆಸ್ತಿ ಸಂರಕ್ಷಣೆ ಮಾಡುವುದು ಸೂಕ್ತ. ಈ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕು.



ಬಿ.ಹರ್ಷವರ್ಧನ: ನಂಜನಗೂಡಿನಲ್ಲಿ ಸ್ಯಾಟಲೈಟ್ ಟೌನ್ ಮಾಡುವ ಯೋಜನೆ ಸಾಕಾರಗೊಳ್ಳಲಿಲ್ಲ. ಐತಿಹಾಸಿಕ ಶ್ರೀಕಂಠೇಶ್ವರ ದೇವಸ್ಥಾನ ಇರುವ ಪಟ್ಟಣಕ್ಕೆ ಭಕ್ತಾದಿಗಳು ಹಾಗೂ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿರುವುದರಿಂದ ಅಲ್ಲಿನ ಸಮಗ್ರ ಅಭಿವೃದ್ಧಿಗೆ ಮುಡಾ ಕಾರ್ಯಕ್ರಮ ರೂಪಿಸಬೇಕು.



ಮರಿತಿಬ್ಬೇಗೌಡ: ಕಳೆದ ಬಾರಿ ಮಂಡಿಸಿದ ಬಜೆಟ್‌ನ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರಲಾಗಿಲ್ಲ. ಬಾಕಿ ಇರುವ ಯೋಜನೆಗಳನ್ನು ಮುಂದುವರೆಸುತ್ತೀರಾ ಅಥವಾ ಅದನ್ನು ಹೊರತುಪಡಿಸಿ ಹೊಸದಾಗಿ ಮಾಡುತ್ತೀರಾ ಎಂಬುದನ್ನು ಸ್ಪಷ್ಟಪಡಿಸಿ. ಅವಕಾಶವಿರುವೆಡೆ ರಸ್ತೆಗಳ ವಿಸ್ತರಣೆ ಮಾಡಬೇಕಾಗಿದೆ. ಕೆರೆಗಳ ಸಂರಕ್ಷಣೆ ಮಾಡದಿದ್ದರೆ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗುತ್ತದೆ. ಬಲ್ಲಳ್ಳಿ ವಸತಿ ಯೋಜನೆ ಏನಾಯಿತು? ರೈತರಿಗೆ ಬಾಕಿ ಇರುವ ಹಣ ವಿತರಿಸಬೇಕು ಹಾಗೂ ಸಾಮಾನ್ಯ ಸಭೆಗಳನ್ನು ನಿರಂತರವಾಗಿ ಮಾಡಬೇಕು.



ಕಾಂಗ್ರೆಸ್‌ನಿಂದ ಬೆಲೆ ಏರಿಕೆ ಮುಕ್ತ ಭಾರತ ಅಭಿಯಾನ; ದೇಶಾದ್ಯಂತ ಪ್ರತಿಭಟನೆ

ಬೆಂಗಳೂರು, ಮಾ.31(ಕೆಎಂಶಿ)-ಪೆಟ್ರೋಲ್, ಡೀಸೆಲ್, ಎಲ್ಪಿಜಿ, ಸಿಎನ್‌ಜಿ ಮತ್ತು ಪಿಎನ್‌ಜಿ ಮತ್ತಿತರ ಅಗತ್ಯ ವಸ್ತುಗಳ ಬೆಲೆ ಹೆಚ್ಚಳದ ವಿರುದ್ಧ ಎಐಸಿಸಿ ದೇಶಾದ್ಯಂತ ಹಮ್ಮಿಕೊಂಡಿರುವ 'ಬೆಲೆ ಏರಿಕೆ ಮುಕ್ತ ಭಾರತ ಅಭಿಯಾನ'ದ ಭಾಗವಾಗಿ ಕೆಪಿಸಿಸಿ, ಬೆಂಗಳೂರಿನ ಕೆಪಿಸಿಸಿ ಕಚೇರಿ ಎದುರು ಗುರುವಾರ ಪ್ರತಿಭಟನೆ ನಡೆಸಿತು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನಪರಿಷತ್ ವಿರೋಧ ಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹ್ಮದ್, ರಾಮಲಿಂಗಾರೆಡ್ಡಿ, ಧ್ರುವನಾರಾಯಣ ಮತ್ತಿತರ ಮುಖಂಡರು ಭಾಗವಹಿಸಿದ್ದರು.

ದ್ವಿಚಕ್ರ ವಾಹನ ಹಾಗೂ ಅಡುಗೆ ಅನಿಲ ಸಿಲಿಂಡರ್‌ಗೆ ಹೂವಿನ ಹಾರ ಹಾಕಿ ಪೂಜೆ ಮಾಡಿ ಪ್ರತಿಭಟನೆ ನಡೆಸಿದರು. ಇದಕ್ಕೂ ಮೊದಲು ಶಿವಕುಮಾರ್ ಅವರು ಬೆಳಗ್ಗೆ ತಮ್ಮ ಸದಾಶಿವನಗರದ ನಿವಾಸದ ಬಳಿ ಅಡುಗೆ ಅನಿಲದ ಸಿಲಿಂಡರ್ ಗೆ ಹೂಹಾರ ಹಾಕಿ, ಚಪ್ಪಾಳೆ ತಟ್ಟುವ ಮೂಲಕ ಪ್ರತಿಭಟನೆ ಮಾಡಿದರು. ನಂತರ ಕೆಪಿಸಿಸಿ ಕಚೇರಿಯಲ್ಲಿ ದ್ವಿಚಕ್ರ ವಾಹನ ಹಾಗೂ ಅಡುಗೆ ಸಿಲಿಂಡರ್‌ಗೆ ಗಂಟೆ ಬಾರಿಸಿ ಪೂಜೆ ಮಾಡಿದರು.

'ಇಂದು ಮಾರ್ಚ್ 31 ಆರ್ಥಿಕ ವರ್ಷ ಮುಕ್ತಾಯದ ದಿನ. ಹೀಗಾಗಿ ಇಂದು ಪ್ರತಿಭಟನೆ ಮಾಡಲು ನಿರ್ಧರಿಸಿದ್ದೇವೆ ಎಂದ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶಿವಕುಮಾರ್, ಕಳೆದ 11 ದಿನಗಳಲ್ಲಿ ಕೇಂದ್ರ ಸರ್ಕಾರ 10 ಬಾರಿ ಇಂಧನ ಬೆಲೆ ಏರಿಕೆ ಮಾಡಿದೆ. ದಿನನಿತ್ಯ ಜನರ ಜೇಬು ಪಿಕ್ ಪಾಕೇಟ್ ಆಗುತ್ತಿದೆ.

ಅಡುಗೆ ಅನಿಲ ಸಿಲಿಂಡರ್‌ಗೆ ಪೂಜೆ ಸಲ್ಲಿಸಿ ಪ್ರತಿಭಟನೆಗೆ ಚಾಲನೆ ನೀಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್



ಎಲ್ಲರ ಆದಾಯ ಡಬಲ್ ಮಾಡುತ್ತೇವೆ ಎಂದಿದ್ದ ಬಿಜೆಪಿ ಸರ್ಕಾರ, ಬೆಲೆ ಏರಿಕೆ ಗಗನಕ್ಕೇರಿದೆ. ಆದಾಯ ಪಾತಾಳಕ್ಕೆ ಹೋಗಿದೆ. ಹೀಗಾಗಿ ನಾವು ಈ ಪ್ರತಿಭಟನೆ ಮಾಡುತ್ತಿದ್ದೇವೆ. ವಾಹನ ಸವಾರರಿಂದ ಹಿಡಿದು, ಗೃಹಿಣಿಯವರೆಗೂ ಎಲ್ಲರೂ ದಿನನಿತ್ಯ ನೋವು ಅನುಭವಿಸುತ್ತಿದ್ದಾರೆ. ಈಗಾಗಲೇ ಸುಮಾರು 35 ರೂ. ಏರಿಕೆಯಾಗಿದ್ದು, ಪೆಟ್ರೋಲ್ ಬೆಲೆ 111 ರೂ. ಮುಟ್ಟಿದೆ. ಇದರ ವಿರುದ್ಧ ಇಡೀ ದೇಶದಲ್ಲಿ ಕಾಂಗ್ರೆಸ್ ಪಕ್ಷ ಹೋರಾಟ ಮಾಡುತ್ತಿದ್ದು, ನಮ್ಮ ಮನೆಗಳ ಮುಂದೆ ಅಡುಗೆ ಅನಿಲ ಸಿಲಿಂಡರ್, ವಾಹನಗಳಿಗೆ ಹೂವಿನ ಹಾರ ಹಾಕಿ ಪೂಜೆ ಮಾಡಿದ್ದೇವೆ.

ಕಾಂಗ್ರೆಸ್ ಕಚೇರಿ ಮುಂದೆ ನಾನು, ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು, ನಮ್ಮ ಕಾರ್ಯಾಧ್ಯಕ್ಷರುಗಳು, ಎಐಸಿಸಿ ನಾಯಕರು ಪ್ರತಿಭಟನೆ ಮಾಡುತ್ತಿದ್ದೇವೆ. ರಾಜ್ಯದ ಜನ ದಡ್ಡರಲ್ಲ. ಅವರು ಅವಕಾಶಕ್ಕಾಗಿ ಕಾದು ಕುಳಿತಿದ್ದಾರೆ. ಅವಕಾಶ ಸಿಕ್ಕಾಗ ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕಿ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯುವ ಮೂಲಕ ಅವರ ದಿನನಿತ್ಯದ ನೋವನ್ನು ಹೊರಹಾಕಲಿದ್ದಾರೆ ಎಂಬ ನಂಬಿಕೆ ಇದೆ. ನಾವು ಜನರ ಧ್ವನಿಯಾಗಿ ಕೆಲಸ ಮಾಡುತ್ತಿದ್ದೇವೆ. ಪಂಚರಾಜ್ಯ ಚುನಾವಣೆ ನಡೆಯುವಾಗ ತಡೆಯಲಾಗಿದ್ದ ಬೆಲೆ ಏರಿಕೆ, ಫಲಿತಾಂಶ ಬಂದ ನಂತರ ಮತ್ತೆ ಆರಂಭವಾಗಿದೆಯೇ ಎಂಬ ಪ್ರಶ್ನೆಗೆ, 'ಅವರು ತಡೆ ಹಿಡಿದಿದ್ದರೋ ಇಲ್ಲವೋ, ಜನರಿಗಂತೂ ಪ್ರಾಣ ಹಿಂಡುತ್ತಿದ್ದಾರೆ. ನಮ್ಮ ಹಳ್ಳಿ ಕಡೆ ಒಂದು ಮಾತಿದೆ. 100 ಚಪ್ಪಲಿ ಏಟು ತಿನ್ನಬಹುದು, ಆದರೆ ದುಡ್ಡಿನ ಏಟು ಮಾತ್ರ ತಡೆಯಲು ಆಗುವುದಿಲ್ಲ. ಅದೇ ರೀತಿ ಈ ಸರ್ಕಾರ ದಿನನಿತ್ಯ ಜನರ ಬದುಕಿನಲ್ಲಿ ಚೆಲ್ಲಾಟವಾಡುತ್ತಿದೆ' ಎಂದು ಡಿ.ಕೆ.ಶಿವಕುಮಾರ್ ದೂರಿದರು.

ಜನರ ಸಮಸ್ಯೆಗಳ ಬದಲು ಭಾವನಾತ್ಮಕ ವಿಚಾರ ಚುನಾವಣೆ ಅಜೆಂಡಾ ಆಗುತ್ತಿದೆಯೇ ಎಂಬ ಪ್ರಶ್ನೆಗೆ, 'ಅವರು ಸಮಾಜ ಒಡೆಯುವವರಾದರೆ, ನಾವು ಸಮಾಜವನ್ನು ಒಂದು ಮಾಡುತ್ತೇವೆ. ಇದೇ ನಮಗೂ ಅವರಿಗೂ ಇರುವ ವ್ಯತ್ಯಾಸ' ಎಂದು ಉತ್ತರಿಸಿದರು.

ಯಾವುದೇ ಶಸ್ತ್ರಚಿಕಿತ್ಸೆ ಇಲ್ಲದೆ ಇಸಿಪಿ ಥೆರಪಿ ಮೂಲಕ ಹೃದ್ರೋಗಿಗಳಿಗೆ ಚಿಕಿತ್ಸೆ

ಮೈಸೂರು,ಮಾ.31(ಎಂಟಿವೈ)–ಹೃದಯದ ರಕ್ತ ಪರಿಚಲನೆ ಮತ್ತು ವಿವಿಧ ಹೃದ್ರೋಗಗಳಿಂದ ಬಳಲುತ್ತಿರುವವರಿಗೆ ಮೈಸೂರಿನ ಹೆಬ್ಬಾಳ ಕೆರೆ ಪಕ್ಕದಲ್ಲಿರುವ ದಿ ರಿವೈವ್ ಆಸ್ಪತ್ರೆಯ ಮೈಸೂರು ಕಾರ್ಡಿಯಾಕ್ ಇಸಿಪಿ ಸೆಂಟರ್‌ನಲ್ಲಿ ಯಾವುದೇ ಶಸ್ತ್ರ ಚಿಕಿತ್ಸೆ, ಗಾಯವಿಲ್ಲದ ಅಪರೂಪದ ಎಕ್ಸ್‌ಟ್ರನಲ್ ಕೌಂಟರ್ ಪಲ್ಸೇಷನ್ (ಇಸಿಪಿ)ಥೆರಪಿ ಮೂಲಕ ಗುಣಪಡಿಸಲಾಗಿದೆ ಎಂದು ಫಿಜಿಷಿಯನ್ ಮತ್ತು ಹೃದ್ರೋಗ ತಜ್ಞ ಡಾ.ವಿ.ಮೋಹನ್‌ಕುಮಾರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೃದಯದ ಒಂದು ಇಲ್ಲವೇ ಎರಡು ರಕ್ತನಾಳಗಳಲ್ಲಿ ಬ್ಲಾಕ್ ಇದ್ದರೆ ಅದನ್ನು ತೆರವುಗೊಳಿಸಲು ಸ್ಟಂಟ್ ಹಾಕಲಾಗುತ್ತದೆ. ಮೂರು ಪ್ರಮುಖ ರಕ್ತನಾಳಗಳಲ್ಲಿಯೂ ಬ್ಲಾಕೇಜ್ ಕಂಡು ಬಂದರೆ ಬೈಪಾಸ್ ಶಸ್ತ್ರಚಿಕಿತ್ಸೆ ಮಾಡಲಾಗುತ್ತದೆ. ಕೆಲವು ರೋಗಿಗಳಿಗೆ ಶಸ್ತ್ರ ಚಿಕಿತ್ಸೆ ಮಾಡಿದರೂ ಗುಣಪಡಿಸಲು ಸಾಧ್ಯವಾಗದ ಪ್ರಮಾಣದಲ್ಲಿ ರಕ್ತನಾಳಗಳು ಬಂದ್ ಆಗಿರುತ್ತವೆ. ಈ ವಿಧವಾದ ರಕ್ತನಾಳಗಳ ಬ್ಲಾಕೇಜ್ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಇಸಿಪಿ ಥೆರಪಿ ಅತ್ಯಂತ ಪರಿಣಾಮಕಾರಿಯಾಗಿದೆ. ಮೈಸೂರಿನಲ್ಲಿ ಕೆಲವು ವರ್ಷಗಳಿಂದ ದಿ ರಿವೈವ್ ಆಸ್ಪತ್ರೆಯಲ್ಲಿರುವ ಮೈಸೂರು ಕಾರ್ಡಿಯಾಕ್ ಇಸಿಪಿ ಸೆಂಟರ್‌ನಲ್ಲಿ ಈ ವಿಶೇಷ ಚಿಕಿತ್ಸೆ ನೀಡಲಾಗುತ್ತಿದೆ. ಸಾವಿರಾರು ಮಂದಿ ಇದರ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ ಎಂದರು.

ಇಸಿಪಿ ಥೆರಪಿ ಎಂಬುದು ಹೃದಯದಿಂದ ದೇಹದ ವಿವಿಧ ಭಾಗಗಳಿಗೆ ರಕ್ತ ಸಾಗಿಸುವ ಮೂರು ಪ್ರಮುಖ ನಾಳಗಳಲ್ಲಿ ಬ್ಲಾಕೇಜ್ ಕಂಡುಬಂದಾಗ ಅದಕ್ಕೆ ಹೊಂದಿಕೊಂಡಿರುವ ಉಪರಕ್ತ ನಾಳಗಳನ್ನು ತೆರೆಯುವಂತೆ ಮಾಡಿ ಅದರಲ್ಲಿ ರಕ್ತಚಲನೆಯಾಗುವಂತೆ ಮಾಡಿ ಹೃದಯ ಎಂದಿನಂತೆ ಕೆಲಸ ಮಾಡುವಂತೆ ಮಾಡುವ ಚಿಕಿತ್ಸಾ ವಿಧಾನವಾಗಿದೆ. ಈ ಕುರಿತು 23,000 ಅಧ್ಯಯನಗಳು ಹಾಗೂ 400ಕ್ಕೂ ಹೆಚ್ಚು ಕ್ಲಿನಿಕಲ್ ರಿಸರ್ಚ್ ನಡೆದಿವೆ ಎಂದರು.

ಏ.9ರಿಂದ ಸುಕ್ಷೇಮ ಆರೋಗ್ಯ ಶಿಬಿರ

ಮೈಸೂರು,ಮಾ.31–ಮೈಸೂರಿನ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ವತಿಯಿಂದ ಏ.9ರಿಂದ 15ರವರೆಗೆ ಸುತ್ತೂರು ಕ್ಷೇತ್ರದಲ್ಲಿ ಸುಕ್ಷೇಮ ಆರೋಗ್ಯ ಶಿಬಿರ ಆಯೋಜಿಸಲಾಗಿದೆ. ಆಧುನಿಕ ಜೀವನಶೈಲಿಗೆ ಒಗ್ಗಿಕೊಳ್ಳುವ ಭರದಲ್ಲಿ ಸಂಪೂರ್ಣ ಆರೋಗ್ಯವೆಂಬುದು ಇಂದು ಮರೀಚಿಕೆಯಾಗಿದೆ. ರಾಸಾಯನಿಕ ಭರಿತ ಆಹಾರ, ಶಾರೀರಿಕ ಹಾಗೂ ಮಾನಸಿಕ ಒತ್ತಡ, ಕಲುಷಿತ ವಾತಾವರಣ ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ. ಇಂತಹ ಒತ್ತಡಭರಿತ ಜೀವನಶೈಲಿಯಿಂದ ಉಂಟಾಗುವ ದುಷ್ಪರಿಣಾಮಗಳನ್ನು ತಡೆಯಲು ಹಾಗೂ ಆರೋಗ್ಯದೆಡೆಗೆ ಹೆಜ್ಜೆಯಿಡಲು ಶಿಬಿರದಲ್ಲಿ ಭಾಗವಹಿಸಲು ಕೋರಲಾಗಿದೆ. ಮಾಹಿತಿಗೆ ಮೊ. 8095233526, 974119700 ಸಂಪರ್ಕಿಸಬಹುದು.

ಏ.7ರಂದು ಉಚಿತ ಕಾರ್ಯಾಗಾರ

ಮೈಸೂರು, ಮಾ. 31– ಮೈಸೂರಿನ ಶ್ರೀ ಸಾರಸ್ವತ್ ಅಕಾಡೆಮಿಯಿಂದ ಏ.7ರಂದು ಬೆಳಗ್ಗೆ 10.30ರಿಂದ ಮಧ್ಯಾಹ್ನ 1ರವರೆಗೆ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಪರೀಕ್ಷೆಗೆ ಉಚಿತ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ.

ಹೆಚ್ಚಿನ ಮಾಹಿತಿಗೆ ಮೊ. 7619415566, 7619615566 ಸಂಪರ್ಕಿಸಬಹುದು.

ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಹುಣಸೂರು ತಾಲ್ಲೂಕು

ಸಂಖ್ಯೆ: ಸಕೃನಿ/ಹುಣಸೂರು/ಬ.ಹರಾಜು/2021–22 ದಿ: 25.03.2022

ಬಹಿರಂಗ ಹರಾಜು ಪ್ರಕಟಣೆ

2021–22ನೇ ಸಾಲಿನಲ್ಲಿ ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಪರವಾನಗಿ ಹೊಂದಿಲ್ಲದ ಕೀಟನಾಶಕ ಮಾರಾಟಗಾರರಿಂದ ವಶಪಡಿಸಿಕೊಳ್ಳಲಾಗಿರುವ ಕೆಳಗೆ ನಮೂದಿಸಿರುವ ಪ್ರಮಾಣದ ಕೀಟನಾಶಕಗಳ ದಾಸ್ತಾನನ್ನು ದಿ: 06.04.2022 ರಂದು ಸಂಜೆ 4.00 ಗಂಟೆಗೆ ಹುಣಸೂರು ಪಟ್ಟಣದ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿ (ಎ.ಪಿ.ಎಂ.ಸಿ) ಆವರಣದಲ್ಲಿರುವ ರೈತ ಸಂಪರ್ಕ ಕೇಂದ್ರ ಕಛೇರಿಯ ಮುಂಭಾಗದಲ್ಲಿ ಬಹಿರಂಗ ಹರಾಜು ಮಾಡಲಾಗುವುದು. ಸದರಿ ಹರಾಜಿನಲ್ಲಿ ಕೀಟನಾಶಕಗಳ ಅಧಿಕೃತ ಮಾರಾಟ ಪರವಾನಗಿಯನ್ನು ಹೊಂದಿರುವ ಮಾರಾಟಗಾರರು ಮಾತ್ರ ಭಾಗವಹಿಸಲು ಅವಕಾಶವನ್ನು ಕಲ್ಪಿಸಿಕೊಡಲಾಗಿದೆ. ಈ ಸಂಬಂಧ ಬಹಿರಂಗ ಹರಾಜಿನ ನಿಬಂಧನೆಗಳು ಹಾಗೂ ಹೆಚ್ಚಿನ ಮಾಹಿತಿಯನ್ನು ಹುಣಸೂರಿನ ಕಸಬಾ ರೈತ ಸಂಪರ್ಕ ಕೇಂದ್ರದಿಂದ ಅಥವಾ ಹುಣಸೂರಿನ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಿಂದ ಪಡೆದುಕೊಳ್ಳಬಹುದಾಗಿರುತ್ತದೆ.

ದಾಸ್ತಾನಿನ ವಿವರ: 16/20/50/100/250/300/500/1000 ಎಂ.ಎಲ್/ಗ್ರಾಂನ ಪ್ಯಾಕೇಜ್‌ನಲ್ಲಿರುವ ವಿವಿಧ ಕೀಟನಾಶಕಗಳು. **ಸಂಖ್ಯೆ:** 59 **ಒಟ್ಟಾರೆ ಪ್ರಮಾಣ (ಕೆಜಿ/ಲೀ):** 143.75ಲೀ & 117.13 ಕೆಜಿ **ಒಟ್ಟು ಮೌಲ್ಯ ರೂ.ಗಳಲ್ಲಿ:** 146605/–

ಸಹಿ/– ಸಹಾಯಕ ಕೃಷಿ ನಿರ್ದೇಶಕರು, ಹುಣಸೂರು ತಾಲ್ಲೂಕು

DIPR/DDMYS/MCA/1074/2021-22

MYSORE RACE CLUB LIMITED
P B No. 11, Race course Road, Mysore - 570 010
Tel. No. 0821-2521675, Fax: 2520248, Email: secretary@mysoreraceclub.com

TENDER FOR VETERINARY & GENERAL MEDICINES, PRINTING & STATIONERY ETC.,

Sealed offers are invited for supply of the following items to Mysore Race Club Ltd., for a period of one year from the date of approval of tender.

a) Veterinary medicine, supplements and general medicine
b) Cups & Trophies
c) Paper Rolls for Totalizator Tickets
d) Printing of entrance tickets with bar code / without bar code
e) Printing of Race cards and prospectus, sweepstakes etc.,
f) Stationery Items
g) Consumables (Phenyl, Acid, Bleaching Powder, etc.,)

Details of requirement may be collected from the Office between **10.00 a.m. and 5.30 p.m. on or before 8th April 2022,** on payment of tender form fee of Rs 500/- + GST extra (Non Refundable)

Offers in the prescribed format, in sealed envelopes should reach the Club by **5.00p.m. on or before 15th April 2022**

The Mysore Race Club Ltd, reserves the right to accept or reject any or all offers without assigning any reason.


Date: 30th March 2022

Sd/-
Secretary & CEO
Mysore Race Club Ltd.,



ಇಂದು ಡಾ.ಶಿವಕುಮಾರ ಸ್ವಾಮೀಜಿ ಜನ್ಮದಿನಾಚರಣೆ: ವಿವಿಧೆಡೆ ಅನ್ನದಾಸೋಹ, ಸಿಹಿ ವಿತರಣೆ

ಚಾಮರಾಜನಗರ, ಮಾ.31– ತ್ರಿವಿಧ ದಾಸೋಹಿ ಸಿದ್ಧಗಂಗಾ ಮಠದ ಡಾ.ಶ್ರೀಶಿವಕುಮಾರ ಸ್ವಾಮೀಜಿ ಅವರ 115ನೇ ಜನ್ಮದಿನವನ್ನು ಏ.1ರ ಶುಕ್ರವಾರ ಹಲವೆಡೆ ಅನ್ನದಾಸೋಹ,



ಮಜ್ಜಿಗೆ– ಪಾನಕ ಹಾಗೂ ಸಿಹಿ ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ.

ರಾಮಸಮುದ್ರದ ಕುಲುಮೆ ರಸ್ತೆಯಲ್ಲಿ ಇರುವ ಪುಟ್ಟಣ್ಣ ಹೊಟೇಲ್‌ನಲ್ಲಿ ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ಉಚಿತ ತಿಂಡಿ ವಿತರಣೆ ನಡೆಯಲಿದೆ. ನಗರದ ಸಿದ್ಧಮಲ್ಲೇಶ್ವರ ವಿರಕ್ತ ಮಠದ ಮುಂಭಾಗ ಬೆಳಗ್ಗೆಯಿಂದ ಸಂಜೆವರೆಗೆ ಮಜ್ಜಿಗೆ– ಪಾನಕ ಹಾಗೂ ಲಾಡು ವಿತರಿಸಲಾಗುತ್ತದೆ. ಜೋಡಿ ರಸ್ತೆಯಲ್ಲಿರುವ ಹೊಟೇಲ್ ಅಧ್ಯಕ್ಷದಲ್ಲಿ ಅನ್ನ ಸಂತರ್ಪಣೆ ಆಯೋಜಿಸಲಾಗುತ್ತದೆ. ಸರ್ಕಾರಿ ಆಸ್ಪತ್ರೆ ಮುಂಭಾಗ ಹಾಗೂ ಸಂತೇಮರಳ್ಳಿ ವೃತ್ತದಲ್ಲಿ ಮಜ್ಜಿಗೆ, ಪಾನಕ, ಲಾಡು ಹಾಗೂ ಪ್ರಸಾದ ವಿತರಣೆ ಆಯೋಜಿಸಲಾಗುವುದು ಎಂದು ಬಿಜೆಪಿ ರೈತ ಮುಖಂಡ ಅಮ್ಮನಪುರ ಮಲ್ಲೇಶ್ ತಿಳಿಸಿದ್ದಾರೆ.

ಎಪಿಎಂಸಿ ಚುನಾವಣೆ: ಕಾಂಗ್ರೆಸ್ ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಕೆ



ಚಾಮರಾಜನಗರ, ಮಾ.31– ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಏ.17ರಂದು ನಡೆಯುವ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಗಳು ನಾನಾ ಕ್ಷೇತ್ರಗಳಿಂದ ಚುನಾವಣಾಧಿಕಾರಿ ತಹಸೀಲ್ದಾರ್ ಚಿದಾನಂದ ಗುರುಸ್ವಾಮಿ ಅವರಿಗೆ ನಾಮಪತ್ರ ಸಲ್ಲಿಸಿದರು.

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ತಮ್ಮ ಮುಖಂಡರೊಂದಿಗೆ ತೆರಳಿ ನಾಮಪತ್ರ ಸಲ್ಲಿಸಿದರು.

ಚಾಮರಾಜನಗರ ಕ್ಷೇತ್ರ– ಪಿ.ಸಿದ್ದರಾಜು, ಬದನಗುಪ್ಪೆ ಕ್ಷೇತ್ರ– ಗುರುಸ್ವಾಮಿ, ಹರವೆ ಕ್ಷೇತ್ರ– ಎಂ.ಗುರುಸ್ವಾಮಿ, ಎಂ.ಗಿರೀಶ್, ಉಡಿಗಾಲ ಕ್ಷೇತ್ರ– ಪ್ರೇಮಾ, ಅಮಚವಾಡಿ ಕ್ಷೇತ್ರ– ವಿ.ಕೆ.ರಾಜಶೇಖರಮೂರ್ತಿ, ಹರದನಹಳ್ಳಿ ಕ್ಷೇತ್ರ– ಹೆಚ್.ಎನ್.ಮಹದೇವಸ್ವಾಮಿ, ನಾಗವಳ್ಳಿ ಕ್ಷೇತ್ರ– ಎ.ಎಸ್.ಪ್ರದೀಪ್, ಹೊಂಗನೂರು ಕ್ಷೇತ್ರ– ಜಿ.ಎಂ.ರವಿಶಂಕರಮೂರ್ತಿ, ಉಮ್ಮತ್ತೂರು ಕ್ಷೇತ್ರ– ಕಲಾವತಿ ಹೆಗ್ಗವಾಡಿ, ವರ್ತಕರ ಕ್ಷೇತ್ರ– ಎಲ್.ಸುರೇಶ್ ಇವರು ನಾಮಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯ ಕೆ.ಪಿ.ಸದಾಶಿವಮೂರ್ತಿ, ಯೋಗೇಶ್, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಪ್ರಧಾನ ಕಾರ್ಯದರ್ಶಿಗಳಾದ ಚಿಕ್ಕಮಹದೇವು, ಆರ್.ಮಹದೇವು, ಎ.ಎಸ್.ಗುರುಸ್ವಾಮಿ, ಚಂದ್ರ ನಾಗೇಂದ್ರ ಉಮೇಶ್, ಲಿಂಗಣ್ಣ, ಪುಟ್ಟಸ್ವಾಮಿ, ಚಂದ್ರು, ರಾಮಚಂದ್ರ, ಡಿ.ಪಿ.ಪ್ರಕಾಶ್, ಸಿದ್ದಲಿಂಗಸ್ವಾಮಿ, ಶಿವಸ್ವಾಮಿ, ನಾಗವಳ್ಳಿ ಖಾನ್, ಸಿದ್ದರಾಜು, ನವೀನ್, ರವಿ ಇತರರು ಹಾಜರಿದ್ದರು.

ಮಾದಪ್ಪನ ಬೆಟ್ಟದಲ್ಲಿ ಕಳೆಗಟ್ಟಿದ ಸಂಭ್ರಮ



ಹನೂರು, ಮಾ.31(ಸೋಮು)– ದಕ್ಷಿಣ ಭಾರತದ ಪ್ರಮುಖ ದೇವಾಲಯಗಳಲ್ಲಿ ಒಂದಾದ ಹನೂರು ತಾಲೂಕಿನ ಮಲೆಮಹದೇಶ್ವರ ಬೆಟ್ಟದಲ್ಲಿ ಯುಗಾದಿ ಜಾತ್ರೆ ಆರಂಭಗೊಂಡಿದ್ದು, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದು, ಬೆಟ್ಟದಲ್ಲಿ ಹಬ್ಬದ ಸಂಭ್ರಮ ಮನೆ ಮಾಡಿದೆ.

ನವ ಸಂವತ್ಸರದ ಮೊದಲ ಉತ್ಸವಕ್ಕೆ ಮಾದಪ್ಪನ ಸನ್ನಿಧಿ ಸಿದ್ಧವಾಗಿದ್ದು, ಮಾದಪ್ಪನ ದರುಶನ ಪಡೆದು, ಹಬ್ಬವನ್ನು ಆಚರಿಸಲು ಭಕ್ತರು ಸಹಸ್ರಾರು ಸಂಖ್ಯೆಯಲ್ಲಿ ಆಗಮಿಸುತ್ತಿದ್ದಾರೆ. ಏ. 2ರಂದು ಬೆಳಗ್ಗೆ 7.30ರಿಂದ 9 ಗಂಟೆಯವರೆಗೆ ಮಹಾ ರಥೋತ್ಸವ ನಡೆಯಲಿದ್ದು, ಬಿರು ಬಿಸಿಲನ್ನೂ ಲೆಕ್ಕಿಸದೇ ಹರಕೆ ಪೂರೈಸಲು ಭಕ್ತರು ತವಕದಲ್ಲಿದ್ದಾರೆ.

ಕೊರೊನಾ ಕರಿಛಾಯೆಯಿಂದಾಗಿ ಕಳೆದ ಎರಡು ವರ್ಷವೂ ಸರಳ, ಸಾಂಪ್ರದಾಯಿಕವಾಗಿ ನಡೆದಿದ್ದ ಜಾತ್ರೆ ಈ ಬಾರಿ ವಿಜೃಂಭಣೆಯಿಂದ ನಡೆಯುತ್ತಿದ್ದು, ಮೈಸೂರು ದಸರಾ ಮಾದರಿಯಲ್ಲಿ ದೇವಾಲಯ ಆವರಣ, ರಸ್ತೆಗಳು, ಮರಗಳಿಗೆ ದೀಪಾಲಂಕಾರ ಮಾಡಲಾಗಿದೆ. ಇಡೀ ಮಲೆಮಹದೇಶ್ವರ ಬೆಟ್ಟ ವಿದ್ಯುತ್ ದೀಪಗಳಿಂದ ಜಗಮಗಿಸುತ್ತಿದೆ.

ಗುರುವಾರ ಮಾದಪ್ಪನಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. ಬೆಳಗ್ಗೆಯಿಂದಲೇ ದೇವಾಲಯದಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ನಡೆದವು. ಏಪ್ರಿಲ್ 1 ರಂದು ಅಮಾವಾಸ್ಯೆ ಪೂಜಾ ಕಾರ್ಯಕ್ರಮ ನಡೆಯಲಿದೆ ಎಂದು ಮಲೆಮಹದೇಶ್ವರ ಬೆಟ್ಟ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಜಯವಿಭವಸ್ವಾಮಿ ತಿಳಿಸಿದ್ದಾರೆ.

ಸಾಂಸ್ಕೃತಿಕ ಕಾರ್ಯಕ್ರಮಗಳ ವಿವರ

ಹನೂರು: ಮಹದೇಶ್ವರಬೆಟ್ಟದಲ್ಲಿ ನಡೆಯುತ್ತಿರುವ ಯುಗಾದಿ ಜಾತ್ರೆಯ ಅಂಗವಾಗಿ ಬೆಟ್ಟದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.



ಏ.1ರ ಶುಕ್ರವಾರ ಸಂಜೆ 6 ಗಂಟೆಯಿಂದ 7 ಗಂಟೆಯವರೆಗೆ ಬೆಟ್ಟದ ಬಯಲು ರಂಗ ಮಂದಿರದಲ್ಲಿ ಯಳಂದೂರಿನ ಆರ್.ಮಹೇಂದ್ರ ಮತ್ತು ತಂಡದಿಂದ ಭಕ್ತಿಗೀತೆ, 7 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ಮಂಜುಳಾ ಪರಮೇಶ್ ಮತ್ತು ತಂಡದವರಿಂದ ನೃತ್ಯ ಸಂಭ್ರಮ ನಡೆಯಲಿದೆ. ರಾತ್ರಿ 9 ಗಂಟೆಯಿಂದ 10 ಗಂಟೆಯವರೆಗೆ ಚಾಮರಾಜನಗರದ ಮಹೇಶ್ ಮತ್ತು ತಂಡದಿಂದ ನೃತ್ಯ ವೈಭವ ಕಾರ್ಯಕ್ರಮ ನಡೆಯಲಿವೆ. ಯುಗಾದಿಯ ದಿನವನ್ನು (ಏ.2)ವರ್ಷದ ಪ್ರಾರಂಭದ ದಿನವಾಗಿಯೂ, ಧಾರ್ಮಿಕ ಹಬ್ಬದ ದಿನವಾಗಿಯೂ ಆಚರಿಸಲಾಗುವುದು. ಬೆಳಗ್ಗೆ 6.30ಕ್ಕೆ ಮಹಾರಥೋತ್ಸವ ನಡೆಯಲಿದೆ. ಈ ಸಂದರ್ಭದಲ್ಲಿ ಹುಲಿವೇಷ, ಕಂಸಾಳೆ, ಡೊಳ್ಳು ಕುಣಿತ, ಪೂಜಾ ಕುಣಿತ ಕಲಾ ತಂಡಗಳು ಪ್ರದರ್ಶನ ನೀಡಲಿವೆ ಎಂದು ಮಲೆ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಜಯವಿಭವಸ್ವಾಮಿ ಮಾಹಿತಿ ನೀಡಿದರು.

ಮಧ್ಯಾಹ್ನದ ವೇಳೆ ಬಿಸಿಲಿನ ಝಳ ಹೆಚ್ಚಾಗಿರುವುದರಿಂದ ಭಕ್ತರಿಗೆ ನೆರಳಿನ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಹಾಗೂ ನಿರಂತರ ಅನ್ನದಾಸೋಹ ವ್ಯವಸ್ಥೆಯನ್ನು ಮಾಡಲಾಗಿದೆ. ಯುಗಾದಿಯನ್ನು ಧಾರ್ಮಿಕ ಹಬ್ಬವಾಗಿ ಆಚರಿಸಬೇಕು ಎಂದು ಮುಜರಾಯಿ ಇಲಾಖೆ ಸೂಚನೆ ಹಿನ್ನೆಲೆಯಲ್ಲಿ ರಥೋತ್ಸವ ದಿನದಂದು ದೊಡ್ಡ ಮಟ್ಟದಲ್ಲಿ ಭಕ್ತರಿಗೆ ಬೇವು ಬೆಲ್ಲ ವಿತರಿಸಲು ಪ್ರಾಧಿಕಾರ ಸಿದ್ಧತೆ ಮಾಡಿಕೊಂಡಿದೆ.

ಮದ್ಯ ಮಾರಾಟ ನಿಷೇಧ: ಜಾತ್ರಾ ಮಹೋತ್ಸವದಲ್ಲಿ ಕಾನೂನು ಸುವ್ಯವಸ್ಥೆ ಮತ್ತು ಶಾಂತಿ ಕಾಪಾಡಲು ಹನೂರು ತಾಲೂಕಿನ ಕೌದಳ್ಳಿ ಗ್ರಾಮದ ಎರಡು ಮದ್ಯದ ಅಂಗಡಿಗಳನ್ನು ಏ. 2ರ ಸಂಜೆ 6 ಗಂಟೆಯವರೆಗೆ ಮುಚ್ಚಿಸಿ, ಈ ಅವಧಿಯಲ್ಲಿ ಮದ್ಯ ಮಾರಾಟ, ಅಕ್ರಮ ಸಾಗಣೆ, ಅಕ್ರಮ ದಾಸ್ತಾನು ಮಾಡದಂತೆ ಆದೇಶಿಸಿ ಪ್ರಭಾರ ಜಿಲ್ಲಾಧಿಕಾರಿ ಕೆ.ಎಂ.ಗಾಯತ್ರಿ ಆದೇಶ ಹೊರಡಿಸಿದ್ದಾರೆ.

ಈ ಅವಧಿಯಲ್ಲಿ ಮಲೆ ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಮದ್ಯಪಾನವನ್ನು ಸಂಪೂರ್ಣವಾಗಿ ನಿಷೇಧಿಸಿಯೂ ಅವರು ಆದೇಶಿಸಿದ್ದಾರೆ.

ಪ್ಲಾಸ್ಟಿಕ್ ಜಾಗೃತಿ: ಬೆಟ್ಟದಲ್ಲಿ ಪ್ಲಾಸ್ಟಿಕ್ ಮುಕ್ತ ಮಾಡುವ ಉದ್ದೇಶದಿಂದ ಪ್ಲಾಸ್ಟಿಕ್ ಬಳಕೆ ವಿರುದ್ಧ ಜನಜಾಗೃತಿ ಮೂಡಿಸಲಾಗುತ್ತಿದೆ. ತಾಳಬೆಟ್ಟದಿಂದ ಬೆಟ್ಟದವರೆಗೂ ಹಾಗೂ ದೇವಾಲಯದ ಆವರಣದಲ್ಲಿ ಕಸದ ಡಬ್ಬಗಳ ವ್ಯವಸ್ಥೆ ಮಾಡಲಾಗಿದ್ದು, ಭಕ್ತರು ಕಸಗಳನ್ನು ಕಡ್ಡಾಯವಾಗಿ ಡಬ್ಬದಲ್ಲೇ ಹಾಕುವಂತೆ ಸೂಚಿಸಲಾಗಿದೆ.

ಹೆಚ್ಚುವರಿ ಬಸ್: ಯುಗಾದಿ ಜಾತ್ರಾ ಮಹೋತ್ಸವದ ಅಂಗವಾಗಿ ತಮಿಳುನಾಡಿನ ಧರ್ಮಪುರಿ, ಮೆಟ್ಟೂರು ಹಾಗೂ ಸೇಲಂನಿಂದ ಮಹದೇಶ್ವರ ಬೆಟ್ಟಕ್ಕೆ ತಮಿಳುನಾಡಿನ ಸಾರಿಗೆ ಇಲಾಖೆ ಹೆಚ್ಚುವರಿಯಾಗಿ 100 ಬಸ್‌ಗಳ ಸಂಚಾರ ಪ್ರಾರಂಭ ಮಾಡಲಾಗಿದ್ದು, ಏಪ್ರಿಲ್ 4ರವರೆಗೆ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ.

ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ ನಿಖಿಲ್ ಜೆಡಿಎಸ್ ಅಭ್ಯರ್ಥಿ

- ಅಂದು ಕುತಂತ್ರದಿಂದ ಸೋಲಾಗಿದೆ, ಮುಂದೆ ಗೆದ್ದೇ ಗೆಲ್ಲುತ್ತಾನೆ
- ಮತ್ತೆ ಮಂಡ್ಯ ಅಖಾಡದಲ್ಲಿ ಪುತ್ರನನ್ನು ಕಣಕ್ಕಿಳಿಸಲು ಹೆಚ್ಡಿಕೆ ನಿರ್ಧಾರ
- ಚುನಾವಣೆ 2 ವರ್ಷ ಇರುವಂತೆಯೇ ಸುಮಲತಾ ವಿರುದ್ಧ ಸಮರ

ಮಂಡ್ಯ, ಮಾ.31(ಮೋಹನ್ ರಾಜ್)– ಮುಂದಿನ 2024ರ ಲೋಕಸಭಾ ಚುನಾವಣೆಗೆ ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ ತಮ್ಮ ಪುತ್ರ ಹಾಗೂ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿಯೇ ಜೆಡಿಎಸ್ ಅಭ್ಯರ್ಥಿ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಘೋಷಿಸಿದ್ದಾರೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಕುತಂತ್ರದಿಂದ ನಿಖಿಲ್‌ರನ್ನು ಸೋಲಿಸಲಾಯಿತು. ಕಾಂಗ್ರೆಸ್, ಬಿಜೆಪಿ, ರೈತ ಸಂಘ ಒಂದಾಗಿ ನಮ್ಮ ವಿರುದ್ಧ ಷಡ್ಯಂತ್ರ ರೂಪಿಸಿದ್ದರು. ಮಂಡ್ಯ ಜಿಲ್ಲೆಯ ಜನರ ಮೇಲೆ ನಂಬಿಕೆ ಇದ್ದು, ಮುಂದಿನ ಲೋಕಸಭಾ ಚುನಾವಣೆಯಲ್ಲಿ ನಿಖಿಲ್‌ರನ್ನು ಮಂಡ್ಯದಿಂದಲೇ ಕಣಕ್ಕಿಳಿಸಲಿದ್ದು, ಹಾಲಿ ಸಂಸದೆ ಸುಮಲತಾ ಅಂಬರೀಷ್‌ಗೆ ಚುನಾವಣೆಯಲ್ಲಿ ಜನರು ತಕ್ಕ ಉತ್ತರ ನೀಡಲಿದ್ದಾರೆ ಎಂದು ಹೇಳಿದರು.

ಕಳೆದ ಚುನಾವಣೆ ಸೋಲಿನ ಬಳಿಕ ಸ್ಪರ್ಧೆಗೆ ಹಿಂದೇಟು ಹಾಕಿದ್ದ ನಿಖಿಲ್: ಕಳೆದ 2019ರ ಸಾರ್ವತ್ರಿಕ ಚುನಾವಣೆಯಲ್ಲಿ ಪಕ್ಷೇತರವಾಗಿ ಸ್ಪರ್ಧಿಸಿದ್ದ ಸುಮಲತಾ ಅಂಬರೀಷ್ ವಿರುದ್ಧ ಜೆಡಿಎಸ್–ಕಾಂಗ್ರೆಸ್ ಮೈತ್ರಿಕೂಟದ ಅಭ್ಯರ್ಥಿಯಾಗಿ ನಿಖಿಲ್ ಕುಮಾರಸ್ವಾಮಿ ಸ್ಪರ್ಧಿಸಿದ್ದರು. ಹಾಲಿ ಮುಖ್ಯಮಂತ್ರಿ, ಮಾಜಿ ಪ್ರಧಾನಿ, ಮಾಜಿ ಸಿಎಂಗಳು, ಹಾಲಿ ಸಚಿವ, ಶಾಸಕರು ಪ್ರಚಾರ ನಡೆಸಿದ್ದರು. ನಿಖಿಲ್‌ಗೆ ಸೋಲಾಗಿತ್ತು. ಈ ಚುನಾವಣೆಯಲ್ಲಿ ಸುಮಲತಾಗೆ ಬಿಜೆಪಿ, ರೈತ ಸಂಘ ಬಹಿರಂಗ ಬೆಂಬಲ ನೀಡಿದ್ದರೆ, ಕಾಂಗ್ರೆಸ್ ಆಂತರಿಕವಾಗಿ ಬೆಂಬಲ ನೀಡಿತ್ತು.





ನಿಖಿಲ್ ಕುಮಾರಸ್ವಾಮಿ ಹೆಚ್.ಡಿ. ಕುಮಾರಸ್ವಾಮಿ

ಚುನಾವಣೆ ಸೋಲಿನ ನಂತರ ತೀವ್ರ ಬೇಸರಕ್ಕೊಳಗಾಗಿದ್ದ ನಿಖಿಲ್‌ಕುಮಾರಸ್ವಾಮಿ ಮಂಡ್ಯದಿಂದ ಮತ್ತೆ ಚುನಾವಣೆಗೆ ಸ್ಪರ್ಧಿಸಲ್ಲ ಎಂದು ಹೇಳಿದ್ದರು. ಆದರೆ ನಿಖಿಲ್ ದಿಢೀರನೇ ನಿರ್ಧಾರ ಬದಲಿಸಿ, ಮಂಡ್ಯದತ್ತ ಹೆಚ್ಚು ಮುಖ ಮಾಡಲು ಆರಂಭಿಸಿದರು. ಸಂಸದೆ ಸುಮಲತಾ ಕ್ಷೇತ್ರಕ್ಕೆ ಸರಿಯಾಗಿ ಬಾರದಿರುವುದನ್ನೇ ಟ್ರಂಪ್‌ಕಾರ್ಡ್ ರೀತಿಯಲ್ಲಿ ಬಳಸಿಕೊಂಡ ನಿಖಿಲ್ ಕ್ಷೇತ್ರದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳಲು ಆರಂಭಿಸಿದರು. ಅದರಲ್ಲೂ ಇತ್ತೀಚೆಗೆ ಮಾಜಿ ಸಿಎಂ ಹೆಚ್ಡಿಕೆ ಹಾಗೂ ಸಂಸದೆ ಸುಮಲತಾ ಮತ್ತು ದಳಪತಿಗಳ ನಡುವೆ ಟಾಕ್‌ವಾರ್ ನಡೆದಾಗ ಸುಮಲತಾ ವಿರುದ್ಧ ಮುಂದಿನ ಚುನಾವಣೆಯಲ್ಲಿ ನಿಖಿಲ್‌ರನ್ನೇ ಅಭ್ಯರ್ಥಿ ಮಾಡಬೇಕೆಂದು ಜೆಡಿಎಸ್ ಶಾಸಕರು ಹೆಚ್ಡಿಕೆ ಬಳಿ ಮನವಿ ಸಹ ಮಾಡಿದ್ದರಂತೆ.

ಮರುದಿನವೇ ಸುಮಲತಾ ಹೇಳಿಕೆಗೆ ಹೆಚ್ಡಿಕೆ ಕೆಂಡ: ನಿನ್ನೆ ನವದೆಹಲಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ್ದ ಸಂಸದೆ ಸುಮಲತಾ ಅಂಬರೀಷ್, ನಿಖಿಲ್, ತಂದೆ ಹಾಗೂ ತಾತನ ಹೆಸರಿಲ್ಲದೇ ಜಿಲ್ಲಾ ಪಂಚಾಯ್ತಿ ಚುನಾವಣೆಯಲ್ಲಿ ಗೆದ್ದು ತಾಕತ್ತು ತೋರಿಸಲಿ ಎಂದು ಸವಾಲು ಹಾಕಿದ್ದರು. ಇದಕ್ಕೆ ನಿಖಿಲ್ ಹಾಗೂ ಕುಮಾರಸ್ವಾಮಿ ಕೆಂಡಾಮಂಡಲರಾಗಿದ್ದು, ಈ ನಿಟ್ಟಿನಲ್ಲಿ ಸುಮಲತಾ ಈ ಹೇಳಿಕೆ ಕೊಟ್ಟ ಮರುದಿನವೇ ಹೆಚ್ಡಿಕೆ ಮುಂದಿನ ಚುನಾವಣೆಯಲ್ಲಿ ನಿಖಿಲ್ ಅವರೇ ಮಂಡ್ಯ ಲೋಕಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಎಂದು ಅಧಿಕೃತವಾಗಿ ಘೋಷಿಸಿದ್ದಾರೆ.

ಕ್ಷೇತ್ರದಲ್ಲಿ ನಿಖಿಲ್ ನಿರಂತರ ಪ್ರವಾಸ: ಇತ್ತೀಚೆಗೆ ಕ್ಷೇತ್ರದಲ್ಲಿ ನಿರಂತರ ಪ್ರವಾಸದಲ್ಲಿರುವ ನಿಖಿಲ್ ಕುಮಾರಸ್ವಾಮಿ ತಿಂಗಳ ಹಿಂದಷ್ಟೇ ಕೆ.ಆರ್.ಪೇಟೆಯಲ್ಲಿ ಜಾತ್ರಾ ಮಹೋತ್ಸವಕ್ಕೆ ಆಗಮಿಸಿದ್ದರು. ಬಳಿಕ ಕೆ.ಆರ್.ಪೇಟೆಯಲ್ಲಿ ಯುವ ಜೆಡಿಎಸ್ ಸಮಾವೇಶದಲ್ಲಿ ಪಾಲ್ಗೊಂಡಿದ್ದರೆ, ಕಳೆದ ಭಾನುವಾರ ಚಂದಗಾಲು ಗ್ರಾಮದಲ್ಲಿ ನಡೆದಿದ್ದ ಎತ್ತಿನಗಾಡಿ ಓಟದ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು. ಮೊನ್ನೆ ಮದ್ದೂರಿನಲ್ಲಿ ಸಂಭವಿಸಿದ ಮೇಲ್ಸಾವಣಿ ದುರಂತದಲ್ಲಿ ಗಾಯಗೊಂಡವರ ಆರೋಗ್ಯ ವಿಚಾರಿಸಿ ಪರಿಹಾರ ನೀಡಿ ಹೋಗಿದ್ದರು. ಇವೆಲ್ಲವೂ ಸಹ ನಿಖಿಲ್ ಮಂಡ್ಯದಿಂದಲೇ ಸ್ಪರ್ಧಿಸಬಹುದೆಂಬ ಗುಮಾನಿಗೆ ಪುಷ್ಟಿ ನೀಡುವಂತಿತ್ತು.

ಮತ್ತೆ ನಿಖಿಲ್ ವರ್ಸಸ್ ಸುಮಲತಾ: ಕಳೆದ ಚುನಾವಣೆಯಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರ ರಾಜ್ಯವ್ಯಾಪಿ ಗಮನ ಸೆಳೆದಿತ್ತು, ಇದು ಎಲ್ಲರಿಗೂ ಗೊತ್ತೇ ಇದೆ. ನಿಖಿಲ್‌ಕುಮಾರಸ್ವಾಮಿ ಪರ ಇಡೀ ಸರ್ಕಾರವೇ ಪ್ರಚಾರಕ್ಕೆ ಇಳಿದಿದ್ದರೆ, ಪಕ್ಷೇತರವಾಗಿ ಸ್ಪರ್ಧಿಸಿದ್ದ ಸುಮಲತಾ ಅಂಬರೀಷ್‌ಗೆ ಅಂಬರೀಷ್ ಅವರ ಸಾವಿನ ಅನುಕಂಪದ ಅಲೆ ಇತ್ತು. ಎಲ್ಲಕ್ಕಿಂತ ಹೆಚ್ಚಾಗಿ ನಟರಾದ ದರ್ಶನ್, ಯಶ್ ಪ್ರಚಾರ ನಡೆಸಿದ್ದರು. ಸುಮಲತಾ ಒಂದೂವರೆ ಲಕ್ಷ ಮತಗಳಿಂದ ಗೆಲುವು ಸಾಧಿಸಿದ್ದರು. ಆದರೆ 2024ಕ್ಕೆ ನಡೆಯುವ ಚುನಾವಣೆಯಲ್ಲಿ ನಿಖಿಲ್ ಜೆಡಿಎಸ್‌ನಿಂದ ಸ್ಪರ್ಧಿಸಿದರೆ, ಸುಮಲತಾ ಪಕ್ಷೇತರವಾಗಿ ಮತ್ತೆ ಸ್ಪರ್ಧಿಸುತ್ತಾರೋ ಅಥವಾ ಕಾಂಗ್ರೆಸ್ ಅಥವಾ ಬಿಜೆಪಿ ಸೇರಿ ಅಭ್ಯರ್ಥಿಯಾಗುತ್ತಾರೋ ಎನ್ನುವುದು ಕಾದು ನೋಡಬೇಕಿದೆ.

ಇಂದು ಚಿನಕುರಳಿಯಲ್ಲಿ ಧರ್ಮಸ್ಥಳ ಸಂಸ್ಥೆಯ ಸಾಧನಾ ಸಮಾವೇಶ



ಚಿನಕುರಳಿ, ಮಾ.31(ಸಿ.ಎ.ಲೋಕೇಶ್)– ಗ್ರಾಮದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ವತಿಯಿಂದ ಶುಕ್ರವಾರ ಹಮ್ಮಿಕೊಂಡಿರುವ ಸಾಧನಾ ಸಮಾವೇಶ ಹಾಗೂ ಉದ್ಯಾನವನ ಉದ್ಘಾಟನಾ ಕಾರ್ಯಕ್ರಮದಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಪಾಲ್ಗೊಳ್ಳಲಿದ್ದಾರೆ.

ಶಾಸಕ ಸಿ.ಎಸ್.ಪುಟ್ಟರಾಜು ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮವನ್ನು ಡಾ.ಡಿ.ವೀರೇಂದ್ರ ಹೆಗ್ಗಡೆ ಉದ್ಘಾಟಿಸಲಿದ್ದಾರೆ. ಡಾ.ಡಿ.ವೀರೇಂದ್ರ ಹೆಗ್ಗಡೆ ಅವರನ್ನು ಶುಕ್ರವಾರ ಬೆಳಗ್ಗೆ 8 ಗಂಟೆಗೆ ಪಿಎಸ್‌ಎಸ್‌ಕೆ ಕಾರ್ಖಾನೆ ಬಳಿ ಶಾಸಕ ಸಿ.ಎಸ್.ಪುಟ್ಟರಾಜು ಸ್ವಾಗತಿಸಲಿದ್ದಾರೆ. ಸುಂಕಾತೊಣ್ಣೂರು ಗ್ರಾಮದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಸಂಸ್ಥೆ ವತಿಯಿಂದ ಜೀರ್ಣೋದ್ಧಾರ ಮಾಡಿರುವ ಶ್ರೀಚನ್ನಕೇಶವ ದೇವಸ್ಥಾನ ವೀಕ್ಷಣೆ ಮಾಡಲಿದ್ದು, ಬಳಿಕ ಪಾಂಡವಪುರದ ಮಾರ್ಗವಾಗಿ ಹೊನಗಾನಹಳ್ಳಿ ಗ್ರಾಮದಲ್ಲಿ ಅಭಿವೃದ್ಧಿಪಡಿಸಿರುವ ಕೆರೆಗೆ ಬಾಗಿನ ಅರ್ಪಿಸಲಿದ್ದಾರೆ. ಬಳಿಕ ಗ್ರಾಮಸ್ಥರಿಗೆ ಹಸ್ತಾಂತರಿಸಲಿದ್ದಾರೆ. ಚಿನಕುರಳಿ ಗ್ರಾಮದಲ್ಲಿ ನಿರ್ಮಾಣ ಮಾಡಿರುವ ಪಾರ್ಕ್‌ಗಳನ್ನು ಡಾ.ವೀರೇಂದ್ರ ಹೆಗ್ಗಡೆ ಉದ್ಘಾಟಿಸಲಿದ್ದಾರೆ. ಚಿನಕುರಳಿ ಗ್ರಾಮದ ಮಹಿಳೆಯರು ಪೂರ್ಣಕುಂಭ ಹಾಗೂ ವಿವಿಧ ಸಾಂಸ್ಕೃತಿಕ ಕಲಾತಂಡಗಳ ಮೂಲಕ ಬೆಳ್ಳಿ ರಥದಲ್ಲಿ ಡಾ.ವೀರೇಂದ್ರ ಹೆಗ್ಗಡೆ ಅವರನ್ನು ಗ್ರಾಮದ ಪ್ರಮುಖ ಬೀದಿಯಲ್ಲಿ ಮೆರವಣಿಗೆ ನಡೆಸಲಾಗುವುದು. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಕಟ್ಟಡ ಉದ್ಘಾಟಿಸಲಿದ್ದಾರೆ. ನಂತರ ಶ್ರೀತ್ರಿಪುರ ಸುಂದರಮ್ಮನ ಚಿತ್ರಮಂದಿರ ಬಳಿಯ ವೇದಿಕೆ ಕಾರ್ಯಕ್ರಮದಲ್ಲಿ ನಡೆಯುವ ಶ್ರೀಕ್ಷೇತ್ರ ಗ್ರಾಮಾಭಿವೃದ್ಧಿ ಸಂಸ್ಥೆಯ ಸಾಧನಾ ಸಮಾವೇಶ ಉದ್ಘಾಟಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಎಸ್.ಅಶ್ವಥಿ ಯೋಜನೆಯ ಅನುದಾನ ವಿತರಣೆ ಮಾಡಲಿದ್ದಾರೆ. ಯೂನಿಯನ್ ಬ್ಯಾಂಕ್‌ನ ಮೈಸೂರು ಪ್ರಾದೇಶಿಕ ವಿಭಾಗ ಡಿಜಿಎಂ ಜ್ಯೋತಿಕೃಷ್ಣನ್, ಧರ್ಮಸ್ಥಳ ಸಂಸ್ಥೆಯ ಮೈಸೂರು ಪ್ರಾದೇಶಿಕ ನಿರ್ದೇಶಕ ಪಿ.ಗಂಗಾಧರ್ ರೈ, ಜಿಲ್ಲಾ ನಿರ್ದೇಶಕ ಎಚ್.ಎಲ್.ಮುರುಳಿಧರ್, ಯೋಜನಾಧಿಕಾರಿ ದಯಾನಂದ, ಜಿಪಂ ಸಾಮಾಜಿಕ ನ್ಯಾಯ ಸಮಿತಿ ಮಾಜಿ ಅಧ್ಯಕ್ಷ ಸಿ.ಅಶೋಕ್, ತಾಪಂ ಸದಸ್ಯ ಸಿ.ಎಸ್.ಗೋಪಾಲಗೌಡ, ಗ್ರಾಪಂ ಅಧ್ಯಕ್ಷ ಮಹಮದ್ ಇಮ್ತಿಯಾಜ್ ಪಾಷ, ಲಾರಿ ಮಾಲೀಕರ ಸಂಘದ ಅಧ್ಯಕ್ಷ ಸಿ.ಶಿವಕುಮಾರ್ ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ.

ಜಿಲ್ಲಾದ್ಯಂತ ಯುಗಾದಿ ಜೂಜಾಟಕ್ಕೆ ನಿರ್ಬಂಧ

ಮಂಡ್ಯ, ಮಾ.31(ಮೋಹನ್‌ರಾಜ್)– ಜಿಲ್ಲೆಯಲ್ಲಿ ಯುಗಾದಿ ಹಬ್ಬದ ಸಂದರ್ಭದಲ್ಲಿ ಬಹಿರಂಗ ಜೂಜಾಟಕ್ಕೆ ಬ್ರೇಕ್ ಹಾಕಿದ್ದು, ಯುಗಾದಿ ಹಬ್ಬದ ಸಂದರ್ಭದಲ್ಲಿ ಯಾರೂ ಸಹ ಜೂಜಾಟದಲ್ಲಿ ಪಾಲ್ಗೊಳ್ಳಬಾರದು. ಒಂದು ವೇಳೆ ಪಾಲ್ಗೊಂಡರೆ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಸ್ಪಿ ಯತೀಶ್ ಎಚ್ಚರಿಕೆ ನೀಡಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಹಿಂದಿನ ಹಲವು ವರ್ಷಗಳಿಂದ ಮಂಡ್ಯ ಜಿಲ್ಲೆಯಲ್ಲಿ ಯುಗಾದಿ ಸಂದರ್ಭದಲ್ಲಿ ಬಹಿರಂಗ ಜೂಜಾಟಕ್ಕೆ ಬ್ರೇಕ್ ಹಾಕಿದ್ದು, ಯಾರೂ ಸಹ ಶಾಮಿಯಾನ ಹಾಕಿಕೊಂಡು ಅಥವಾ ಇನ್ನಿತರೆಡೆ ಜೂಜಾಡುವುದನ್ನು ನಿರ್ಬಂಧಿಸಲಾಗಿದೆ. ಹಣ ಪಣಕ್ಕಿಟ್ಟು ಜೂಜಾಟ ಆಡುವುದು ಅಕ್ರಮವಾಗಿದ್ದು, ಅದನ್ನು ನಿರ್ಬಂಧಿಸಲಾಗಿದೆ. ಒಂದು ವೇಳೆ ಅಂತಹ ಚಟುವಟಿಕೆಯಲ್ಲಿ ಪಾಲ್ಗೊಂಡರೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

ಭಾರತೀನಗರದಲ್ಲಿ ಶ್ರೀ ಮಾರಮ್ಮ ಹಬ್ಬ

ಭಾರತೀನಗರ, ಮಾ.31(ಅ.ಸತೀಶ್)– ಇಲ್ಲಿಗೆ ಸಮೀಪದ ಗುಡಿಗೆರೆ ಕಾಲೋನಿಯಲ್ಲಿ ಶ್ರೀ ಮಾರಮ್ಮದೇವಿಯ ಹಬ್ಬಕ್ಕೆ ಗ್ರಾಮದ ಮಹಿಳೆಯರೆಲ್ಲರೂ ಮಾರಿಗುಡಿ ಆವರಣದಲ್ಲಿ ತಂಬಿಟ್ಟಿನಾರತಿಯ ಮೂಲಕ ವಿಶೇಷ ಪೂಜೆ ಸಲ್ಲಿಸಿದರು.



ಇದಕ್ಕೂ ಮುನ್ನ ಮಾರಮ್ಮ ದೇವಸ್ಥಾನದಲ್ಲಿ ಕುಂದವನ್ನು ನಿರ್ಮಿಸಿ ಹೋಮ, ಹವನದ ಪೂಜೆ ಮಾಡಲಾಯಿತು. ನಂತರ ಶ್ರೀಮಾರಮ್ಮದೇವಿಗೆ ವಿವಿಧ ಬಗೆಯ ಹೂಗಳಿಂದ ಅಲಂಕರಿಸಿ, ವಿಶೇಷ ಪೂಜೆ ಸಲ್ಲಿಸಿದರು. ಗ್ರಾಮದಲ್ಲಿ ಮಹಿಳೆಯರು, ಮಕ್ಕಳು ಹೊಸ ಉಡುಪುಗಳನ್ನು ಧರಿಸಿ ಮಾರಮ್ಮ ದೇವಿಗೆ ಪೂಜೆ ಸಲ್ಲಿಸಿದ್ದು ಕಂಡುಬಂದಿತು. ದೇವಸ್ಥಾನದ ಆವರಣವನ್ನು ವಿದ್ಯುತ್ ದೀಪಗಳಿಂದ ಅಲಂಕಾರಗೊಳಿಸಲಾಗಿತ್ತು.

ಮಡಿಕೇರಿಯಲ್ಲಿ ಜನರಲ್ ಕೆ.ಎಸ್.ತಿಮ್ಮಯ್ಯ ಅವರ ಜನ್ಮ ದಿನಾಚರಣೆ



ಮಡಿಕೇರಿ, ಮಾ.31– ಪದ್ಮಭೂಷಣ ಜನರಲ್ ಕೆ.ಎಸ್.ತಿಮ್ಮಯ್ಯ ಅವರ 116ನೇ ಜನ್ಮ ದಿನಾಚರಣೆಯು ಗುರುವಾರ ಜಿಲ್ಲಾಡಳಿತ ವತಿಯಿಂದ ನಗರದ ಜನರಲ್ ತಿಮ್ಮಯ್ಯ ಸ್ಮಾರಕ ಭವನ (ಸನ್ನಿಸೈಡ್)ದಲ್ಲಿ ನಡೆಯಿತು.

ಜನರಲ್ ತಿಮ್ಮಯ್ಯ ಸ್ಮಾರಕ ಭವನದ ಅಮರ್ ಜವಾನ್ ಯುದ್ಧ ಸ್ಮಾರಕಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್ ಅವರು ಪುಷ್ಪ ನಮನ ಸಲ್ಲಿಸಿದರು.


ನಂತರ ಜನರಲ್ ತಿಮ್ಮಯ್ಯ ಸ್ಮಾರಕ ಭವನಕ್ಕೆ ಭೇಟಿ ನೀಡಿ ಜನರಲ್ ತಿಮ್ಮಯ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದ ನಂತರ ಜನರಲ್ ತಿಮ್ಮಯ್ಯ ಸ್ಮಾರಕ ಭವನವನ್ನು ವೀಕ್ಷಿಸಿದರು. ಜನರಲ್ ಕೆ.ಎಸ್.ತಿಮ್ಮಯ್ಯ ಸ್ಮಾರಕ ಎದುರು ಜನರಲ್ ತಿಮ್ಮಯ್ಯ ಅವರ ಮ್ಯೂಸಿಯಂನ ವಿಷಯಗಳನ್ನೊಳಗೊಂಡ ಭಿತ್ತಿಪತ್ರವನ್ನು ಬಿಡುಗಡೆ ಮಾಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಮಕ್ಕಳಿಗೆ ಆಯೋಜಿಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಸಚಿವರು ಬಹುಮಾನ ವಿತರಣೆ ಮಾಡಿದರು. ನಂತರ ಸ್ಮಾರಕ ಭವನದ ಹತ್ತಿರ ಹೊಸದಾಗಿ ನಿರ್ಮಿತವಾದ 'BLOSSUM' ಕೆಫೆಯನ್ನು ಸಚಿವರು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಎಂ.ಸಿ.ನಾಣಯ್ಯ, ಶಾಸಕರಾದ ಎಂ.ಪಿ.ಅಪ್ಪಚ್ಚು ರಂಜನ್, ಕೆ.ಜಿ.ಬೋಪಯ್ಯ, ಎಂ.ಪಿ.ಸುಜಾ ಕುಶಾಲಪ್ಪ, ಎಸ್.ಎಲ್. ಭೋಜೇಗೌಡ, ಕರ್ನಾಟಕ ರಾಜ್ಯ ಪಶ್ಚಿಮಘಟ್ಟ ಕಾರ್ಯಪಡೆ ಸಮಿತಿ ಅಧ್ಯಕ್ಷ ಶಾಂತೆಯಂಡ ರವಿ ಕುಶಾಲಪ್ಪ, ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಮೇಶ್ ಹೊಳ್ಳ, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ, ಜಿ.ಪಂ.ಸಿಇಒ ಭಂವರ್ ಸಿಂಗ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ.ಅಯ್ಯಪ್ಪ, ಉಪ ವಿಭಾಗಾಧಿಕಾರಿ ಡಾ. ಯತೀಶ್ ಉಳ್ಳಾಲ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕೆ.ಟಿ.ದರ್ಶನ್, ಮಾಜಿ ಸೈನಿಕರು, ಅಧಿಕಾರಿಗಳು, ಇತರರು ಇದ್ದರು.

ಕೊಡಗಿನ ಕವಿ ಅಬ್ದುಲ್ ರಶೀದ್‌ಗೆ 'ಸಾಹಿತ್ಯ ಶ್ರೀ' ಪ್ರಶಸ್ತಿ

ಮಡಿಕೇರಿ, ಮಾ.31– ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವ ಗಮನಾರ್ಹ ಸೇವೆಯನ್ನು ಪರಿಗಣಿಸಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಕೊಡಮಾಡುವ 'ಸಾಹಿತ್ಯ ಶ್ರೀ' ಪ್ರಶಸ್ತಿಗೆ ಕೊಡಗಿನ ಸುಂಟಿಕೊಪ್ಪ ಮೂಲದ ಲೇಖಕ, ಕವಿ ಅಬ್ದುಲ್ ರಶೀದ್ ಅವರು ಭಾಜನರಾಗಿದ್ದಾರೆ.



ಈ ಬಾರಿ ಒಟ್ಟು ಹತ್ತು ಲೇಖಕರನ್ನು ಗುರುತಿಸಿ ಈ ಪುರಸ್ಕಾರ ನೀಡಿದ್ದು, ಸೃಜನಶೀಲ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆಗೈದ ಐವರಿಗೆ, ಸೃಜನೇತರ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆಗೈದ ಮೂವರಿಗೆ, ಸಾಹಿತ್ಯ ಪರಿಚಾರಿಕೆಗೆ ಒಬ್ಬರಿಗೆ ಹಾಗೂ ಹೊರನಾಡಿನ ಸಾಧಕರಿಗೆ ಒಂದು ಪ್ರಶಸ್ತಿಯಂತೆ ಒಟ್ಟು ಹತ್ತು ಮಂದಿಗೆ ಈ ಪ್ರಶಸ್ತಿಯನ್ನು ಕೊಡಲಾಗುತ್ತಿದೆ.

25 ಸಾವಿರ ನಗದು, ಫಲಕ, ಶಾಲು, ಹಾರ ಹಾಗೂ ಪ್ರಮಾಣ ಪತ್ರದೊಂದಿಗೆ ಸಾಹಿತ್ಯಶ್ರೀ ಪ್ರಶಸ್ತಿ ನೀಡಿ ಸನ್ಮಾನಿಸಬೇಕೆಂದು ಅಕಾಡೆಮಿ ಅಧ್ಯಕ್ಷರಾದ ಡಾ.ಬಿ.ಸಿ. ವಸಂತಕುಮಾರ್ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆದ ಸರ್ವ ಸದಸ್ಯರ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಮಾಜಿ ಸೈನಿಕರ ಕುಂದು ಕೊರತೆಗಳನ್ನು ಹಂತ ಹಂತವಾಗಿ ಬಗೆಹರಿಸಲಾಗುವುದು

ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್



ಮಡಿಕೇರಿ, ಮಾ.31– ದೇಶದ ಪ್ರಜೆಗಳು ನೆಮ್ಮದಿಯಿಂದ ಬದುಕುತ್ತಿರುವುದರ ಹಿಂದೆ ಸೈನಿಕರ ಶ್ರಮವಿದೆ. ಸೈನಿಕರ ಸೇವೆಗಳನ್ನು ಪದಗಳಲ್ಲಿ ವಿವರಿಸಲು ಸಾಧ್ಯವಿಲ್ಲ. ಮಾಜಿ ಸೈನಿಕರ ಕುಂದು ಕೊರತೆಗಳನ್ನು ಹಂತ ಹಂತವಾಗಿ ಬಗೆಹರಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್ ಅವರು ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ಮಾಜಿ ಸೈನಿಕರ ಕುಂದು ಕೊರತೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲಾ ಕೇಂದ್ರದಲ್ಲಿ ಮತ್ತು ತಾಲೂಕುಗಳಲ್ಲಿ ಸೈನಿಕ ಭವನ ನಿರ್ಮಾಣಕ್ಕೆ ಜಾಗ ಒದಗಿಸಲಾಗುವುದು. ಮಾಜಿ ಸೈನಿಕರ ಶ್ರೇಯೋಭಿವೃದ್ಧಿಗೆ ಎಲ್ಲಾ ರೀತಿಯ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು.

ಮಾಜಿ ಸೈನಿಕರಿಗೆ ಸಕಾಲದಲ್ಲಿ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ವಿಳಂಬ ಮಾಡಿದರೆ ಕೂಡಲೇ ಜಿಲ್ಲಾಧಿಕಾರಿಗಳ ಗಮನಕ್ಕೆ ತರುವಂತೆ ಮಾಜಿ ಸೈನಿಕರಿಗೆ ತಿಳಿಸಿದರು.

ಕೊಡಗು ಜಿಲ್ಲಾ ಮಾಜಿ ಸೈನಿಕರ ಸಂಘದ ಅಧ್ಯಕ್ಷ ನಿವೃತ್ತ ಮೇಜರ್ ಜನರಲ್ ಬಿ.ಎ.ಕಾರ್ಯಪ್ಪ ಅವರು ಮಾತನಾಡಿ, ಜಿಲ್ಲೆಯ ಮಾಜಿ ಸೈನಿಕರ ಸಂಘದ ಕೇಂದ್ರ ಸ್ಥಾನ ಮಡಿಕೇರಿಯಲ್ಲಿದ್ದು, ಮಾಜಿ ಸೈನಿಕರು ಕುಳಿತುಕೊಳ್ಳಲು ಅವರ ಅಹವಾಲುಗಳನ್ನು ಸ್ವೀಕರಿಸಲು ಯಾವುದೇ ಸ್ಥಳವಿಲ್ಲದಿರುವುದರಿಂದ ಜಿಲ್ಲಾ ಕೇಂದ್ರವಾದ ಮಡಿಕೇರಿ ನಗರದಲ್ಲಿ ಮತ್ತು ತಾಲೂಕುಗಳಲ್ಲಿ ಸಮುದಾಯ ಭವನ ನಿರ್ಮಾಣ ಮಾಡಬೇಕಾಗಿ ಸಚಿವರಲ್ಲಿ ಮನವಿ ಮಾಡಿದರು.

ಸರ್ಕಾರಿ ಜಾಗ ಮಂಜೂರಾತಿ ವಿಷಯದಲ್ಲಿ ರಾಜ್ಯ ಸರ್ಕಾರ ಮತ್ತು ಉಚ್ಚ ನ್ಯಾಯಾಲಯದಿಂದ ಆದೇಶವಿದ್ದರೂ ಜಿಲ್ಲೆಯಲ್ಲಿ ಮಾಜಿ ಸೈನಿಕರ ಮತ್ತು ವಿಧವೆಯರ ಅರ್ಜಿಗಳು ವಿಲೇವಾರಿ ಆಗದೆ ಬಾಕಿ ಆಗಿರುತ್ತದೆ. ಈ ಬಗ್ಗೆ ಪರಿಶೀಲಿಸಿ ಬಾಕಿ ಇರುವ ಅರ್ಜಿಗಳನ್ನು ವಿಲೇವಾರಿ ಮಾಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಮನವಿ ಮಾಡಿದರು.

ಮಾಜಿ ಸೈನಿಕರ ಮನೆ ಕಂದಾಯದಲ್ಲಿ ಶೇ.50 ರಷ್ಟು ರಿಯಾಯ್ತಿಯನ್ನು ನೀಡುವಂತೆ ಆದೇಶವಿದ್ದರೂ, ಇಲ್ಲಿಯವರೆಗೆ ಜಿಲ್ಲೆಯ ಗ್ರಾಮ ಪಂಚಾಯತಿಗಳಿಂದ ಮಾಜಿ ಸೈನಿಕರಿಗೆ ರಿಯಾಯ್ತಿ ಸಿಗುತ್ತಿಲ್ಲ ಎಂದು ಸಚಿವರ ಗಮನಕ್ಕೆ ತಂದರು.

ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಜಿಲ್ಲಾಧ್ಯಕ್ಷ ಕೆ.ಪಿ.ಸೋಮಣ್ಣ ಮಾತನಾಡಿ, ಸೈನಿಕ ಕಲ್ಯಾಣ ಇಲಾಖೆಯಲ್ಲಿ ಖಾಯಂ ಜಂಟಿ ನಿರ್ದೇಶಕರು ಇಲ್ಲದಿರುವುದರಿಂದ ಸೈನಿಕರ ಕುಂದು ಕೊರತೆಗಳನ್ನು ಆಲಿಸಲು ಅಧಿಕಾರಿಗಳು ಇಲ್ಲದಂತಾಗಿದೆ. ಆದ್ದರಿಂದ ಖಾಯಂ ಜಂಟಿ ನಿರ್ದೇಶಕರನ್ನು ನೇಮಕ ಮಾಡಬೇಕು ಎಂದು ಸಚಿವರ ಗಮನಕ್ಕೆ ತಂದರು. ಮಾಜಿ ಸೈನಿಕರ ಕುಟುಂಬ ಪಿಂಚಣಿ ಹೊಂದಿರುವ ಕುಟುಂಬಗಳಿಗೆ ಯಾವುದೇ ಆದಾಯ ಇಲ್ಲದಿರುವುದರಿಂದ ಸರ್ಕಾರ ನೀಡುವ ಬಿಪಿಎಲ್ ಕಾರ್ಡ್‌ನ ಸೌಲಭ್ಯವನ್ನು ಈ ಕುಟುಂಬಗಳಿಗೂ ನೀಡುವಂತಾಗಬೇಕು ಎಂದು ಅವರು ಹೇಳಿದರು.

ಶಾಸಕರಾದ ಎಂ.ಪಿ.ಅಪ್ಪಚ್ಚುರಂಜನ್, ಕೆ.ಜಿ.ಬೋಪಯ್ಯ, ವಿಧಾನಪರಿಷತ್ ಸದಸ್ಯ ಎಸ್.ಎಲ್.ಭೋಜೇಗೌಡ, ಸೈನಿಕ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಲೋಲಾಕ್ಷ, ಇತರರು ಹಲವು ಮಾಹಿತಿ ನೀಡಿದರು.

ವಿಧಾನಪರಿಷತ್ ಸದಸ್ಯ ಎಂ.ಪಿ.ಸುಜಾ ಕುಶಾಲಪ್ಪ, ಕರ್ನಾಟಕ ರಾಜ್ಯ ಪಶ್ಚಿಮಘಟ್ಟ ಕಾರ್ಯಪಡೆ ಸಮಿತಿ ಅಧ್ಯಕ್ಷ ಶಾಂತೆಯಂಡ ರವಿ ಕುಶಾಲಪ್ಪ, ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಮೇಶ್ ಹೊಳ್ಳ, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ, ಜಿ.ಪಂ.ಸಿಇಒ ಭಂವರ್ ಸಿಂಗ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ. ಅಯ್ಯಪ್ಪ, ಉಪ ವಿಭಾಗಾಧಿಕಾರಿ ಡಾ. ಯತೀಶ್ ಉಳ್ಳಾಲ್, ಮಾಜಿ ಸೈನಿಕರು, ಅಧಿಕಾರಿಗಳು, ಇತರರು ಇದ್ದರು.

ಎಸ್‌ಐ ನಂದಕುಮಾರ್‌ಗೆ ಮುಖ್ಯಮಂತ್ರಿ ಚಿನ್ನದ ಪದಕ



ನಾಪೋಕ್ಲು, ಮಾ.31(ದುಗ್ಗಳ)– ಬೆಳ್ತಂಗಡಿ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ನಂದಕುಮಾರ್ ಅವರು ಮುಖ್ಯಮಂತ್ರಿ ಚಿನ್ನದ ಪದಕಕ್ಕೆ ಆಯ್ಕೆಯಾಗಿದ್ದಾರೆ.

ಮಲೆಯರ ನಂದಕುಮಾರ್ ಮೂಲತಃ ಕೊಡಗು ಜಿಲ್ಲೆಯ ಕೋಡಂಬೂರು ನಿವಾಸಿ.ದಿವಂಗತ ಮಾದಯ್ಯ ಮತ್ತು ನಳಿನಿ ದಂಪತಿಯ ಪುತ್ರ. ಕೊಡಗಿನಲ್ಲಿ ವಿದ್ಯಾಭ್ಯಾಸವನ್ನು ಪೂರೈಸಿ, 2010 ರ ಬ್ಯಾಚ್‌ನಲ್ಲಿ ಪೊಲೀಸ್ ಇಲಾಖೆಗೆ ಆಯ್ಕೆಯಾಗಿದ್ದಾರೆ. ಕಲಬುರ್ಗಿಯಲ್ಲಿ ತರಬೇತಿ ಪೂರೈಸಿ ಮಂಗಳೂರು ನಗರ, ಬಂಟ್ವಾಳ, ಉಪ್ಪಿನಂಗಡಿ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸಿರುವ ಇವರು ಪ್ರಸ್ತುತ ಬೆಳ್ತಂಗಡಿಯಲ್ಲಿ ಸಬ್‌ಇನ್ಸ್‌ಪೆಕ್ಟರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

ಮೈಸೂರು ಮಿತ್ರ

ಗಾಯಗೊಂಡಿದ್ದ ವ್ಯಕ್ತಿ ಸಾವು

ಮೈಸೂರು, ಮಾ.31–ರಸ್ತೆ ಅಪಘಾತದಲ್ಲಿ ಗಾಯಗೊಂಡು ಕೆ.ಆರ್.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವ್ಯಕ್ತಿಯೊಬ್ಬರು ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ.

ಚಾಮರಾಜನಗರ–ನಂಜನಗೂಡು ಮುಖ್ಯ ರಸ್ತೆ ಗೋಳೂರು ಸಮೀಪ ಸುಮಾರು 44 ರಿಂದ 46 ವರ್ಷ ವಯಸ್ಸಿನ ವ್ಯಕ್ತಿ ವಾಹನ ಡಿಕ್ಕಿಯಿಂದ ಗಾಯಗೊಂಡು ನರಳುತ್ತಿದ್ದ. ನಂಜನಗೂಡು ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು ಮೃತ ವ್ಯಕ್ತಿ ಆಕಾಶ ನೀಲಿ ಬಣ್ಣದ ಶರ್ಟ್ ಧರಿಸಿದ್ದು, ವಾರಸುದಾರರು ದೂ: 0821–2520040, 2444800, 08221–226633 ಮೂಲಕ ಸಂಪರ್ಕಿಸಲು ಕೋರಲಾಗಿದೆ.

ರೈಲಿಗೆ ಸಿಲುಕಿ ಸಾವು: ನಾಗನಹಳ್ಳಿ ಎಂಎನ್‌ಜಿಟಿ ರೈಲು ನಿಲ್ದಾಣದ ಬಳಿ ಅಪರಿಚಿತ ವ್ಯಕ್ತಿಯೊಬ್ಬರು ರೈಲಿಗೆ ಸಿಲುಕಿ ಸಾವನ್ನಪ್ಪಿದ್ದಾರೆ. ಸುಮಾರು 30 ವರ್ಷ ಈ ವ್ಯಕ್ತಿಯ ಬಲಗೈ ತೋಳಿನ ಮೇಲೆ 'ಪಿ' ಎಂತಲೂ, ಭುಜದ ಮೇಲೆ 'ಕೆ' ಎಂತಲೂ ಹಚ್ಚೆ ಗುರುತು ಇದೆ. ಕಪ್ಪು ಬಣ್ಣದ ಗುಲಾಬಿ ಮಚ್ಚೆಯುಳ್ಳ ತುಂಬು–ತೋಳಿನ ಶರ್ಟ್, ಬೂದು ಬಣ್ಣದ ಜೀನ್ಸ್ ಪ್ಯಾಂಟ್ ಧರಿಸಿದ್ದು, ವಾರಸುದಾರರು ಮೈಸೂರು ರೈಲ್ವೆ ಪೊಲೀಸ್ ಠಾಣೆಯನ್ನು ದೂ: 0821–2516579 ಮೂಲಕ ಸಂಪರ್ಕಿಸಲು ಕೋರಲಾಗಿದೆ.

ವಿದ್ಯುತ್ ಶಾರ್ಟ್ ಸರ್ಕ್ಯೂಟ್: ಮೊಬೈಲ್ ರಿಪೇರಿ ಅಂಗಡಿ ಅಗ್ನಿಗಾಹುತಿ



ಮೈಸೂರು, ಮಾ.31(ಎಂಕೆ)– ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಮೊಬೈಲ್ ರಿಪೇರಿ ಅಂಗಡಿಯೊಂದು ಹೊತ್ತಿ ಉರಿದ ಘಟನೆ ಮೈಸೂರಿನ ವಿದ್ಯಾರಣ್ಯಪುರಂನಲ್ಲಿ ಗುರುವಾರ ನಡೆಯಿತು.

ವಿದ್ಯಾರಣ್ಯಪುರಂನ 4ನೇ ಮುಖ್ಯ ರಸ್ತೆಯ 16ನೇ ಕ್ರಾಸ್‌ನಲ್ಲಿರುವ 'ಅರ್ಜುನ್ ಸೆಲ್ ಟೆಕ್(ಮೊಬೈಲ್ ರಿಪೇರಿ ಅಂಗಡಿ)'ನಲ್ಲಿ ಮಧ್ಯಾಹ್ನ 2.30ರ ಸುಮಾರಿಗೆ ಯುಪಿಎಸ್ ಬ್ಯಾಟರಿಯಲ್ಲಿ ಶಾರ್ಟ್ ಸರ್ಕ್ಯೂಟ್ ಆಗಿ ರಿಪೇರಿಗೆಂದು ಕೊಟ್ಟಿದ್ದ ಮೊಬೈಲ್‌ಗಳು, ಎಲೆಕ್ಟ್ರಾನಿಕ್ ವಸ್ತುಗಳು ಸುಟ್ಟು ಕರಕಲಾಗಿದೆ. ಅದೃಷ್ಟವಶಾತ್ ಈ ವೇಳೆ ಮೊಬೈಲ್ ರಿಪೇರಿ ಅಂಗಡಿ ಬಾಗಿಲು ಮುಚ್ಚಿದ್ದರಿಂದ ಬೆಂಕಿ ಅಕ್ಕ–ಪಕ್ಕ ಅಂಗಡಿ ಮಳಿಗೆಗಳಿಗೆ ತಾಕುವುದಾಗಲೀ, ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಶಾರ್ಟ್ ಸರ್ಕ್ಯೂಟ್ ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಧಾವಿಸಿದ ಸರಸ್ವತಿಪುರಂ ಅಗ್ನಿಶಾಮಕ ಸಿಬ್ಬಂದಿ ಮೊಬೈಲ್ ರಿಪೇರಿ ಅಂಗಡಿಯ ಶೆಟರ್ ತೆಗೆದು ಬೆಂಕಿ ನಂದಿಸಿದ್ದಾರೆ. ಯುಪಿಎಸ್ ಬ್ಯಾಟರಿಯಲ್ಲಿ ಶಾರ್ಟ್ ಸರ್ಕ್ಯೂಟ್ ಆಗಿರುವುದರಿಂದ ಬ್ಯಾಟರಿ ಶಾಖಕ್ಕೆ ಅಂಗಡಿಯೊಳಗಿದ್ದ ಬಹುತೇಕ ಎಲೆಕ್ಟ್ರಾನಿಕ್ ವಸ್ತುಗಳು ಸುಟ್ಟು ಹೋಗಿವೆ. ಅಕ್ಕ–ಪಕ್ಕದಲ್ಲಿಯೂ ಮೊಬೈಲ್ ಶಾಪ್, ತರಕಾರಿ ಅಂಗಡಿಗಳಿದ್ದು, ಅವುಗಳಿಗೆ ಬೆಂಕಿ ತಾಕಿಲ್ಲ ಎಂದು ಸರಸ್ವತಿಪುರಂ ಅಗ್ನಿಶಾಮಕ ಠಾಣೆ ಸಿಬ್ಬಂದಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮೂರನೇ ಪುಟದಿಂದ

ಹಾಲು ಖರೀದಿ ದರ 2 ರೂ. ಹೆಚ್ಚಳ

ಮಾ.29ರಂದು ನಡೆದ ಒಕ್ಕೂಟದ ಆಡಳಿತ ಮಂಡಳಿ ಸಭೆಯಲ್ಲಿ ಒಕ್ಕೂಟದ ಅಧ್ಯಕ್ಷರು ಮತ್ತು ನಿರ್ದೇಶಕರುಗಳು ಸುದೀರ್ಘವಾಗಿ ಚರ್ಚಿಸಿ ಯುಗಾದಿ ಹಬ್ಬದ ಕೊಡುಗೆಯಾಗಿ ಹಾಲಿನ ಖರೀದಿ ದರವನ್ನು ಎರಡು ರೂ. ಹೆಚ್ಚಿಸಲು ತೀರ್ಮಾನಿಸಲಾಗಿದ್ದು, ಇದರಿಂದ ಹೈನುಗಾರಿಕೆಯಲ್ಲಿ ತೊಡಗಿರುವ ರೈತರಿಗೆ ಅನುಕೂಲವಾಗಲಿದೆ ಎಂದು ವಿವರಿಸಿದ್ದಾರೆ.

ಮೈಸೂರು ಜಿಲ್ಲೆಯ ಏಳು ತಾಲೂಕಿನ ಒಟ್ಟು 2,19,957 ಹಾಲು ಉತ್ಪಾದಕ ರೈತರಿಂದ ಹಾಗೂ 1123 ಪ್ರಾಥಮಿಕ ಹಾಲು ಉತ್ಪಾದಕ ಸಂಘಗಳಿಂದ ಪ್ರತಿ ದಿನ ಸರಾಸರಿ 6,08,524 ಲೀಟರ್ ಹಾಲನ್ನು ಸಂಗ್ರಹಿಸಲಾಗುತ್ತಿದೆ. ಪ್ರಸ್ತುತ ಬೇಸಿಗೆ ಪ್ರಾರಂಭವಾಗಿದ್ದು, ಹಸಿರು ಮೇವಿನ ಹಾಲಿನ ಶೇಖರಣೆ ಕುಂಠಿತಗೊಂಡಿದೆ. ಹಾಲು ಶೇಖರಣೆಯನ್ನು ಹೆಚ್ಚಿಸಲು, ಜಾನುವಾರುಗಳ ನಿರ್ವಹಣೆಗಾಗಿ ಹಾಗೂ ಉತ್ಪಾದಕ ರೈತರ ಹಿತ ದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅವರು ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ದರ ಏರಿಕೆಯು ಗ್ರಾಹಕರ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಆದರೆ ಮುಂದಿನ ದಿನಗಳಲ್ಲಿ ಗ್ರಾಹಕರು ಖರೀದಿಸುವ ಹಾಲಿನ ದರವನ್ನು ಹೆಚ್ಚಿಸುವ ಮುನ್ಸೂಚನೆ ಇದಾಗಿದೆ ಎಂದು ಹೇಳಲಾಗುತ್ತಿದೆ.

ಬಜರಂಗದಳದವರು ಸಮಾಜಘಾತುಕರು....

ಈಗಿನದ್ದಲ್ಲ. ಆಸ್ಪತ್ರೆಯಲ್ಲಿ ಆಕ್ಸಿಜನ್ ಇಲ್ಲದೇ ಜನ ಸತ್ತರು. ಆ ಸಂದರ್ಭವನ್ನು ಸರಕಾರ ಹೇಗೆ ನಿರ್ವಹಣೆ ಮಾಡಿತು ಎನ್ನುವುದನ್ನು ನಾವೆಲ್ಲ ನೋಡಿದ್ದೇವೆ. ಬಿಜೆಪಿ ಸರಕಾರದ ಯೋಗ್ಯತೆಗೆ ಆಸ್ಪತ್ರೆ ನಿರ್ವಹಣೆ ಮಾಡಲು ಅಗಲಿಲ್ಲ. ಆಗ ಎಲ್ಲಿದ್ದರು ವಿಶ್ವ ಹಿಂದೂ ಪರಿಷತ್, ಬಜರಂಗದಳದವರು? ಎಂದು ಕುಮಾರಸ್ವಾಮಿ ಗುಡುಗಿದರು.

ಮುಖ್ಯಮಂತ್ರಿ ಮೌನಕ್ಕೆ ಅರ್ಥ ಏನು ಸಮಾಜ ಹೊಡೆಯುವ ಶಕ್ತಿಗಳು ಹ್ಯಾಂಡ್ ಬಿಲ್ ಹಂಚುತ್ತಿದ್ದಾರೆ. ಅಂತಹ ಕಿಡಿಗೇಡಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಪಡಿಸಿದರು. ಯಾವ ಸಂವಿಧಾನಕ್ಕೆ ಗೌರವಿಸುತ್ತಿದ್ದೀರಿ, ಯಾಕೆ ಅಂಬೇಡ್ಕರ್ ಜಯಂತಿ ಆಚರಿಸುತ್ತೀರಿ ಅದೆಲ್ಲ ಯಾವ ಪುರುಷಾರ್ಥಕ್ಕೆ? ಇಂಥದ್ದನ್ನು ನಡೆಯಲು ಬಿಟ್ಟು ಸಂವಿಧಾನ, ಡಾ.ಅಂಬೇಡ್ಕರ್ ಅವರ ಹೆಸರು ಹೇಳಿದರೆ ಏನು ಪ್ರಯೋಜನ ಎಂದ ಅವರು, ನನಗೆ ವೋಟ್ ಮುಖ್ಯವಲ್ಲ, ಈ ನಾಡು ಶಾಂತಿಯಿಂದ ಬದುಕಬೇಕು. ಅದು ಮುಖ್ಯ ನನಗೆ. ನಾನು ಮೌನವಾಗಿರಲು ಸಾಧ್ಯವಿಲ್ಲ ಎಂದರು. ಕಾಂಗ್ರೆಸ್‌ನವರಿಗೆ ಮಾತನಾಡಲು ತಾಕತ್ತಿಲ್ಲ. ನಾನು ಸುಮ್ಮನಿರಲಾರೆ. ಹಿಂದೂಗಳು ವೋಟ್ ಹಾಕ್ತಾರೋ ಇಲ್ಲವೋ ಎಂಬ ಭಯ ನನಗಿಲ್ಲ. ಉತ್ತರ ಪ್ರದೇಶದಲ್ಲಿ ನಿಮ್ಮ ಆಟ ಆಡಿಕೊಳ್ಳಿ, ಇಲ್ಲಿ ಬೇಡ ಎಂದು ಪ್ರಚೋದನೆ ನೀಡುತ್ತಿರುವ ಸಂಘಟನೆಗಳಿಗೆ ಎಚ್ಚರಿಕೆ ನೀಡಿದರು. ಮುಂದಿನ ಲೋಕಸಭೆ ಚುನಾವಣೆಯಲ್ಲಿ ನಿಖಿಲ್ ಕುಮಾರಸ್ವಾಮಿ, ಮಂಡ್ಯದ ಲೋಕಸಭೆ ಕ್ಷೇತ್ರದಿಂದಲ್ಲೇ ಕಣಕ್ಕಿಳಿಸುತ್ತೇನೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಹೆಚ್.ಡಿ.ಕುಮಾರಸ್ವಾಮಿ ಅವರಿಗಿರುವಂತಹ ಗಂಡಸ್ತನದ ಸರ್ಟಿಫಿಕೇಟ್ ನಮಗ್ಯಾರಿಗೂ ಇಲ್ಲ. ಅವರ ಗಂಡಸ್ತನವನ್ನು ಬಹಳ ಸಾರಿ ಸಾಬೀತುಪಡಿಸಿದ್ದಾರೆ. ಆದರೆ ನಾವು ಆ ತರಹದವರಲ್ಲ. ಹಾಗಾಗಿ ಅವರಿಗಿರುವ ಗಂಡಸ್ತನದ ಬಗ್ಗೆ ನಾವು ಯಾರು ಸವಾಲು ಹಾಕುವುದಿಲ್ಲ. ನಾವು ಅವರೊಂದಿಗೆ ಕಾಂಪಿಟೇಷನ್ ಕೂಡ ಮಾಡುವುದಿಲ್ಲ. ಅವರಿಗಿರುವ ಗಂಡಸ್ತನದ ಬಗ್ಗೆ ನಾವು ನಿರ್ವಿವಾದವಾಗಿ ಒಪ್ಪಿಕೊಳ್ಳುತ್ತೇವೆ, ನಿಮಗಿರುವಂತಹ ಗಂಡಸ್ತನ ನಮಗ್ಯಾರಿಗೂ ಇಲ್ಲ.

– ಸಿ.ಟಿ.ರವಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

ಗಂಡಸ್ತನ ಯಾವ್ಯಾವುದಕ್ಕೆ ಬಳಸಬೇಕು ಎಂದು ಕುಮಾರಸ್ವಾಮಿಗೆ ಗೊತ್ತಿದೆ. ಒಂದು ಕಡೆ ಬಳಸಬೇಕೋ, ಎರಡು ಕಡೆ ಬಳಸಬೇಕೋ, ಮೂರು ಕಡೆ ಬಳಸಬೇಕೋ ಎಂಬುದನ್ನು ಅವರು ತಿಳಿದುಕೊಂಡಿದ್ದಾರೆ. ಮುಖ್ಯಮಂತ್ರಿಯಾಗಿದ್ದವರು, ಮತ್ತೊಬ್ಬ ಮುಖ್ಯಮಂತ್ರಿಯ ಗಂಡಸ್ತನ ಬಗ್ಗೆ ಪ್ರಶ್ನೆ ಮಾಡೋದು ಸರಿಯಲ್ಲ. ಅವರು ಹಿರಿಯ ರಾಜಕಾರಣಿ. ಗಂಡಸ್ತನ ತೋರಿಸುವ ಅವರ ಹೇಳಿಕೆಯನ್ನು ಉಗ್ರವಾಗಿ ಖಂಡಿಸುತ್ತೇನೆ.

– ಕೆ.ಎಸ್.ಈಶ್ವರಪ್ಪ, ಸಚಿವರು.

ಕುಮಾರಣ್ಣ ಬಹಳ ಹಿರಿಯರಿದ್ದಾರೆ. ಅಶ್ವಥ್ ನಾರಾಯಣ ಅವರು ಗಂಡಸ್ತನದ ಬಗ್ಗೆ ಮಾತನಾಡುತ್ತಾರೊ, ಬೇರೆಯವರು ಏನು ಮಾತನಾಡುತ್ತಾರೋ ಆ ಬಗ್ಗೆ ಮಾತನಾಡುವಷ್ಟು ಶಕ್ತಿ ನನಗಿಲ್ಲ. ಸದ್ಯ ನಾವು ಪಕ್ಷದ ಸದಸ್ಯತ್ವ ಮಾಡುತ್ತಿದ್ದು, ಇಂದು ಕಡೆ ದಿನವಾಗಿದ್ದು ಕಾರ್ಯಕರ್ತರು ಸಕ್ರಿಯವಾಗಿ ಭಾಗವಹಿಸುವಂತೆ ನೋಡಿಕೊಳ್ಳುತ್ತಿದ್ದೇವೆ ನಮ್ಮ ಮನೆ ನಾವು ಕಟ್ಟಿಕೊಳ್ಳುವ ಪ್ರಯತ್ನದಲ್ಲಿದ್ದೇವೆ. ಇಂತಹ ವಿಚಾರಗಳಿಗೆ ಜನ ಉತ್ತರ ನೀಡುತ್ತಾರೆ ಎಂದು ಉತ್ತರಿಸಿದ್ದಾರೆ.

– ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಮಾಜಿ ಸಿಎಂ ಕುಮಾರಸ್ವಾಮಿಯವರೇ ನೀವು ಕಾಂಗ್ರೆಸ್ ಮುಖಂಡರಿಗೆ ಧಮ್ಮು, ಗಂಡಸ್ತನ ಎನ್ನುವ ಮಾತುಗಳನ್ನು ಹೇಳಿ. ಬಿಜೆಪಿ ಅಭಿವೃದ್ಧಿ ಹಾಗೂ ಕೋಮು ಸಾಮರಸ್ಯದಲ್ಲಿ ಗಂಡಸ್ತನ ತೋರಿಸುತ್ತದೆ. ಗಂಡಸ್ತನ ಎಂದು ವಿವಾದ ಹುಟ್ಟಿಹಾಕುವುದು ಗಂಡಸ್ತನ ಅಲ್ಲ. ಕುಮಾರಸ್ವಾಮಿಯವರು ತಮ್ಮ ಹೇಳಿಕೆ ವಾಪಸ್ ಪಡೆದು ಬೇಷರತ್ ಕ್ಷಮೆ ಕೇಳಬೇಕು. ಸಿಎಂ ಬಸವರಾಜ ಬೊಮ್ಮಾಯಿಯವರ ಬಗ್ಗೆ ಗಂಡಸ್ತನದ ಮಾತನಾಡಿದ್ದು ನಾನು ಖಂಡಿಸುತ್ತೇನೆ.

– ಎಂ.ಪಿ.ರೇಣುಕಾಚಾರ್ಯ, ಬಿಜೆಪಿ ಶಾಸಕ.

ಮುಖ್ಯಮಂತ್ರಿಗಳ ಬಗ್ಗೆ ಗಂಡಸ್ತನ ಪದ ಬಳಕೆ ಮಾಡಿರುವ ಹೆಚ್.ಡಿ.ಕುಮಾರಸ್ವಾಮಿ ಅವರು ತಪ್ಪು ಮಾಡಿದ್ದಾರೆ. ಅವರು ಬಳಸಿರುವ ಪದ ಮಾಜಿ ಮುಖ್ಯಮಂತ್ರಿಯಾದ ಅವರ ಗೌರವ–ಘನತೆಗೆ ಒಳ್ಳೆಯದಲ್ಲ. ಇಂತಹ ಹೇಳಿಕೆಗಳಿಂದ ಸಮಾಜದ ಶಾಂತಿ–ಸೌಹಾರ್ದತೆಗೆ ಧಕ್ಕೆ ಉಂಟಾಗುತ್ತದೆ. ಮುಖ್ಯಮಂತ್ರಿಗಳು ಹೀಗೇ ಮಾಡಿ ಎಂದು ಯಾವ ಸಂಘಟನೆಗೂ ಸೂಚನೆ ಕೊಟ್ಟಿಲ್ಲ. ಕುಮಾರಸ್ವಾಮಿ ವಿನಾ ಕಾರಣ ಈ ಪದ ಬಳಕೆ ಮಾಡಿದ್ದಾರೆ.

– ಆರ್.ಅಶೋಕ್, ಕಂದಾಯ ಸಚಿವರು.

ಸಾಧನೆಗೆ 'ಕಠಿಣ ಪರಿಶ್ರಮ' ಬಿಟ್ಟರೆ ಪರ್ಯಾಯ ಮಾರ್ಗವಿಲ್ಲ

● ಎಸ್‌ಡಿಎಂ–ಐಎಂಡಿ ಘಟಿಕೋತ್ಸವದಲ್ಲಿ ಕಾಮನ್‌ವೆಲ್ತ್ ಬ್ಯಾಂಕ್ ಆಫ್ ಆಸ್ಟ್ರೇಲಿಯಾ(ಇಂಡಿಯಾ) ವ್ಯವಸ್ಥಾಪಕ ನಿರ್ದೇಶಕಿ ಪಂಕಜಂ ಶ್ರೀದೇವಿ ಅಭಿಮತ ● 181 ವಿದ್ಯಾರ್ಥಿಗಳಿಗೆ ಗಣ್ಯರಿಂದ ಪದವಿ ಪ್ರದಾನ



ಮೈಸೂರಿನ ಎಸ್‌ಡಿಎಂಐಎಂಡಿ ಸಂಸ್ಥೆಯ 27ನೇ ಘಟಿಕೋತ್ಸವದಲ್ಲಿ ಸಂಸ್ಥೆಯ ಅಧ್ಯಕ್ಷರೂ ಆದ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗಡೆ, ಕಾಮನ್‌ವೆಲ್ತ್ ಬ್ಯಾಂಕ್ ಆಫ್ ಆಸ್ಟ್ರೇಲಿಯಾ (ಇಂಡಿಯಾ) ವ್ಯವಸ್ಥಾಪಕ ನಿರ್ದೇಶಕಿ ಪಂಕಜಂ ಶ್ರೀದೇವಿ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು. ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳು ಚಿತ್ರದಲ್ಲಿದ್ದಾರೆ.

ಮೈಸೂರು, ಮಾ.31(ಎಸ್‌ಬಿಡಿ)– ಮಹಾನ್ ನಾಯಕರು ಹಾಗೂ ಸಾಧಕರದಲ್ಲಿ ಸಾಮಾನ್ಯವಾಗಿರುವುದು 'ಕಠಿಣ ಪರಿಶ್ರಮ'. ಇದಕ್ಕೆ ಪರ್ಯಾಯವಾದುದು ಯಾವುದೂ ಇಲ್ಲ ಎಂದು ಕಾಮನ್‌ವೆಲ್ತ್ ಬ್ಯಾಂಕ್ ಆಫ್ ಆಸ್ಟ್ರೇಲಿಯಾ (ಇಂಡಿಯಾ) ವ್ಯವಸ್ಥಾಪಕ ನಿರ್ದೇಶಕಿ ಪಂಕಜಂ ಶ್ರೀದೇವಿ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮೈಸೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್ಮೆಂಟ್ ಡೆವಲಪ್‌ಮೆಂಟ್ (ಎಸ್‌ಡಿಎಂ–ಐಎಂಡಿ)ನ 27ನೇ ಘಟಿಕೋತ್ಸವದಲ್ಲಿ ಗುರುವಾರ ಘಟಿಕೋತ್ಸವ ಭಾಷಣ ಮಾಡಿದ ಅವರು, ಈ ಸಂಸ್ಥೆಯ ಅಧ್ಯಕ್ಷರೂ ಆದ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗಡೆ, ಅಜೀಂ ಪ್ರೇಮ್‌ಜಿ, ಕಿರಣ್ ಮಜುಂದಾರ್ ಅವರಂತಹ ಮಹಾನ್ ನಾಯಕರು ದೊಡ್ಡ ಕನಸು ಕಂಡು ಅದನ್ನು ಕಠಿಣ ಪರಿಶ್ರಮದಿಂದ ಸಾಕಾರಗೊಳಿಸಿಕೊಂಡಿದ್ದಾರೆ. ಸೂಕ್ಷ್ಮವಾಗಿ ಗಮನಿಸಿದರೆ ಎಲ್ಲಾ ಮಹಾನ್ ನಾಯಕರಲ್ಲೂ ಕಠಿಣ ಪರಿಶ್ರಮ ಸಾಮಾನ್ಯವಾಗಿ ಕಂಡುಬರುತ್ತದೆ. ನೀವೂ ಕೂಡ ದೊಡ್ಡ ಕನಸುಗಳನ್ನು ಕಂಡು ಕಠಿಣ ಪರಿಶ್ರಮದ ಹಾದಿಯಲ್ಲಿ ಸಾಧಿಸಬೇಕೆಂದು ಆಶಿಸಿದರು.

ಕಠಿಣ ಪರಿಶ್ರಮದ ಜೊತೆಗೆ ಸಾಧಿಸುವ ಉತ್ಸಾಹ ಹಾಗೂ ಬದ್ಧತೆ ಇರಲಿ. ಶಿಕ್ಷಕರು ಹಾಗೂ ಪ್ರಾಧ್ಯಾಪಕರು ವಿದ್ಯಾರ್ಥಿಗಳಿಗಾಗಿ ನಿಸ್ವಾರ್ಥದಿಂದ ಕೆಲಸ ಮಾಡುತ್ತಾರೆ. ಇವರೇ ನಿಮ್ಮ ಶಕ್ತಿಯ ಮೂಲವಾಗಿದ್ದಾರೆ. ಸದಾ ನಿಮ್ಮ ಯಶಸ್ಸನ್ನು ಬಯಸುತ್ತಾರೆ. ಹಾಗಾಗಿ ನೀವು ಅವರ ಮಾತನ್ನು ಆಲಿಸಿ, ಪಾಲಿಸಬೇಕು. ಉತ್ತಮ ಸಾಧನೆ ಮೂಲಕ ಅವರ ಪರಿಶ್ರಮದ ಮೌಲ್ಯ ಹೆಚ್ಚಿಸಬೇಕು. ಬುದ್ಧಿವಂತಿಕೆ ಉಡುಗೊರೆಯಂತೆ. ಆದರೆ ಒಳ್ಳೆಯತನ ನಿಮ್ಮ ಆಯ್ಕೆಯಾಗಿ ರುತ್ತದೆ ಇವೆರಡೂ ಬಹಳ ಮುಖ್ಯವಾಗುತ್ತವೆ. ಜೀವನದ ಪ್ರತಿ ಹೆಜ್ಜೆಯಲ್ಲೂ ಒಳ್ಳೆಯದನ್ನೇ ಆಯ್ಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ನಿಮ್ಮ ಬಗ್ಗೆ ಇತರರಾಡುವ ಮಾತುಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ. ನೀವು ಯೋಚಿಸುವುದಕ್ಕಿಂತಲೂ ನೀವು ಉತ್ತಮರು ಎಂದು ತಿಳಿದುಕೊಳ್ಳಿ. ಕೆಲಸ ಮತ್ತು ವೈಯಕ್ತಿಕ ಜೀವನದ ಸಮತೋಲನ ಕಾಪಾಡಿಕೊಳ್ಳುವುದು ಮುಖ್ಯ. ಇದು ಹೆಚ್ಚಿನದಾಗಿ ಮಹಿಳೆಯರಿಗೆ ಸವಾಲಾಗಬಹುದು. ಹಾಗಂತ ಅವಕಾಶಗಳು ಎದುರಾದಾಗ ವಿಮುಖರಾಗಬೇಡಿ. ಹೊರ ದೇಶಗಳಲ್ಲಿ ಕಾರ್ಯನಿರ್ವಹಿಸುವ ಅವಕಾಶಗಳನ್ನು ಮಹಿಳೆಯರು ಕಳೆದುಕೊಳ್ಳಬೇಡಿ. ಕುಟುಂಬದವರ ಜೊತೆ ಚರ್ಚಿಸಿ ಸೂಕ್ತ ತೀರ್ಮಾನ ಕೈಗೊಂಡರೆ ಎಲ್ಲವೂ ಸಾಧ್ಯ ಸ್ವಿಟ್ಜರ್‌ಲೆಂಡ್‌ನಲ್ಲಿ ಕಾರ್ಯನಿರ್ವಹಿಸುವ ಅವಕಾಶ ಸಿಕ್ಕಾಗ ನಾನೂ ಗೊಂದಲಕ್ಕೆ ಸಿಲುಕಿದ್ದೆ. ಕಡೆಗೆ ಪತಿ ಧೈರ್ಯ ತುಂಬಿದ್ದರಿಂದ ವಿದೇಶಕ್ಕೆ ತೆರಳಿದೆ. ಹಲವು ದಿನ 9 ವರ್ಷದ ಮಗನನ್ನು ಬಿಟ್ಟಿರುವ ನೋವಿನಲ್ಲಿ ಕಣ್ಣೀರಿಟ್ಟಿದ್ದೆ ಎಂದು ತಮ್ಮ ಜೀವನದ ಸಂಗತಿಗಳನ್ನು ಉದಾಹರಿಸಿ, ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬಿದರು.

ಪದವಿ ಪ್ರಧಾನ: ಎರಡು ಚಿನ್ನದ ಪದಕ ಪಡೆದ ಸಂಜನಾ ವಿಜಯ್‌ಕುಮಾರ್ ಹಾಗೂ ಸುದೀಪ್ ಎಸ್.ರಾವ್, ಒಂದು ಚಿನ್ನದ ಪದಕ ಪಡೆದ ಹೆಚ್.ಅನಿರುದ್ಧ ಹಂಡೆ, ಸೀತಾಲಕ್ಷ್ಮಿ ಸತೀಶ್ ಹೆಗ್ಡೆ, ಯಶ್ ಶರ್ಮ ಮುಕುಂದ್, ಎಂ.ಅಭಿನಯ್ ಹಾಗೂ ಪ್ರಕೃತಿ ವಿವೇಕಾನಂದ ಸೇರಿದಂತೆ ಪಿಜಿ ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್ ಪೂರೈಸಿದ 181 ವಿದ್ಯಾರ್ಥಿಗಳಿಗೆ ಗಣ್ಯರು ಪದವಿ ಪ್ರದಾನ ಮಾಡಿದರು.

ಸಮಾರಂಭದಲ್ಲಿ ಎಸ್‌ಡಿಎಂ–ಐಎಂಡಿ ಅಧ್ಯಕ್ಷರೂ ಆದ ಧರ್ಮಸ್ಥಳ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗಡೆ, ಸಂಸ್ಥೆಯ ನಿರ್ದೇಶಕ ಡಾ.ಎನ್. ಆರ್.ಪರಶುರಾಮನ್, ಉಪನಿರ್ದೇಶಕ ಪ್ರಸಾದ್, ಶೈಕ್ಷಣಿಕ ಆಡಳಿತಗಾರ ಎಂ.ವಿ.ಸುನಿಲ್, ಸಂಸ್ಥೆಯ ಪ್ರಸನ್ನ ಚಂದ್ರ, ರಾಜ್ ಅಗರ್‌ವಾಲ್, ನಾಗರಾಜ್, ಡಿ.ಸುಂದರ ಕುಮಾರ್, ಕಮಲ್ ಬಾಲಿ, ವಿಜು ಪರಮೇಶ್ವರ್, ನಿಶಿತ್ ಜೈನ್, ಭೀಮರಾಯ ಮೇತ್ರಿ, ಆರ್.ಇಂದಿರಾ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯಾವಂತೆಯರು ಉದ್ಯೋಗಸ್ಥರಾಗಬೇಕು

ಶ್ರೀ ಧರ್ಮಸ್ಥಳ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗಡೆ ಆಶಯ

ಮೈಸೂರು: ಶಿಕ್ಷಣ ಪಡೆದಿರುವ ಮಹಿಳೆಯರು ಗೃಹಿಣಿಯಾಗಿ ಮನೆಯಲ್ಲೇ ಇರದೆ, ಉದ್ಯೋಗಸ್ಥರಾಗಬೇಕು ಎಂದು ಶ್ರೀ ಧರ್ಮಸ್ಥಳ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಆಶಯ ವ್ಯಕ್ತಪಡಿಸಿದರು.

ಎಸ್‌ಡಿಎಂ–ಐಎಂಡಿ 27ನೇ ಘಟಿಕೋತ್ಸವದಲ್ಲಿ ಮಾತನಾಡಿ, ಶಿಕ್ಷಣ ಪಡೆದ ಶೇ.30ರಷ್ಟು ಮಹಿಳೆಯರು ಉದ್ಯೋಗ ಸೇರದೆ ಗೃಹಿಣಿಯರಾಗಿ ಮನೆಯಲ್ಲೇ ಇರುತ್ತಾರೆ. ಶಿಕ್ಷಣದ ಜೊತೆಗೆ ಉತ್ತಮ ಪ್ರತಿಭೆಯುಳ್ಳ ನೀವು, ಸಂಸಾರ ನಿರ್ವಹಣೆ ಜೊತೆಗೆ ಬೇರೆ ಉದ್ಯೋಗವನ್ನೂ ಮಾಡಬಹುದು. ಈ ಮೂಲಕ ಸಮಾಜಕ್ಕೆ ತಮ್ಮದೇ ಕೊಡುಗೆ ನೀಡಬಹುದು ಎಂದು ಕಿವಿಮಾತು ಹೇಳಿದರು.

ನಮ್ಮ ಸಂಸ್ಥೆಯಲ್ಲಿರುವ ಒಟ್ಟು ವಿದ್ಯಾರ್ಥಿಗಳಲ್ಲಿ ಶೇ.40 ಹೆಣ್ಣು ಮಕ್ಕಳಿದ್ದಾರೆ. ಇವರೆಲ್ಲಾ ಮೆರಿಟ್ ಆಧಾರದಲ್ಲೇ ಪ್ರವೇಶ ಪಡೆದಿರುವುದು ವಿಶೇಷ. ಮಹಿಳೆಯರಲ್ಲಿ ಅಗಾಧ ಪ್ರತಿಭೆ ಇದೆ ಎನ್ನುವುದಕ್ಕೆ ಇದೊಂದು ಸಾಕ್ಷಿ. ಮಹಿಳೆಯರಿಗೆ ಮೀಸಲಾತಿ ಕೇಳುವುದು ಎಲ್ಲರಿಗೂ ಗೊತ್ತಿದೆ. ಆದರೆ ಹೆಣ್ಣುಮಕ್ಕಳ ಪ್ರತಿಭೆ ಗಮನಿಸಿದರೆ ಮುಂದಿನ 10 ವರ್ಷಗಳಲ್ಲಿ ಹುಡುಗರಿಗೆ ಮೀಸಲಾತಿ ಕೇಳುವ ಸಂದರ್ಭ ಬರಬಹುದು. ವಿದ್ಯಾಭ್ಯಾಸದ ಸಂದರ್ಭದಲ್ಲೇ ಭವಿಷ್ಯದ ಗುರಿ ಸ್ಪಷ್ಟವಾಗಿರಬೇಕು. ಯಾವ ವಿದ್ಯಾರ್ಥಿಯಲ್ಲೂ ಕೀಳರಿಮೆ ಇರಬಾರದು. ಕಠಿಣ ಪರಿಶ್ರಮದಿಂದ ಸಾಧಿಸುವುದರ ಜೊತೆಗೆ ಮೌಲ್ಯಗಳನ್ನು ಕಾಪಾಡಿಕೊಂಡು ಸಾಮಾಜಿಕ ಜವಾಬ್ದಾರಿಯನ್ನೂ ನಿರ್ವಹಿಸಬೇಕೆಂದು ತಿಳಿಸಿದ ಅವರು, ಸಂಸ್ಥೆಯ ಘಟಿಕೋತ್ಸವಗಳಲ್ಲಿ ಮೊದಲ ಬಾರಿ ಮಹಿಳಾ ಸಾಧಕಿ ಮುಖ್ಯ ಅತಿಥಿಯಾಗಿ ಆಗಮಿಸಿದ್ದಾರೆ ಎಂದು ಪಂಕಜಂ ಶ್ರೀದೇವಿ ಅವರಿಗೆ ಅಭಿನಂದನೆ ತಿಳಿಸಿದರು.

ಸಂಗೀತ ವಿವಿ ಬೋಧಕೇತರ ನೌಕರರ ಪ್ರತಿಭಟನೆ

ಕೋರ್ಟ್‌ನಲ್ಲಿ ತೀರ್ಪು ಬರುವವರೆಗೂ ಕ್ರಮ ಅಸಾಧ್ಯ

ವಿವಿ ಕುಲಸಚಿವರು ಪ್ರತಿಕಾ ಹೇಳಿಕೆ ಮೂಲಕ ಸ್ಪಷ್ಟನೆ

ಮೈಸೂರು, ಮಾ.31(ಎಂಕೆ)– ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿಯ ತಾತ್ಕಾಲಿಕ ನೌಕರರ ಪ್ರಕರಣ ನ್ಯಾಯಲಯದಲ್ಲಿ ವಿಚಾರಣೆ ನಡೆಯುತ್ತಿದ್ದು, ನ್ಯಾಯಾಲಯದ ತೀರ್ಪು ಬರುವವರೆಗೂ ಯಾವುದೇ ಕ್ರಮಕೈಗೊಳ್ಳಲು ಸಾಧ್ಯವಿಲ್ಲ ಎಂದು ವಿವಿಯ ಕುಲಸಚಿವ ಪ್ರೊ.ಬಿ.ಎಸ್. ದೇವರಾಜು ತಿಳಿಸಿದ್ದಾರೆ.

ನ್ಯಾಯಾಲಯದ ತೀರ್ಪು ಬರುವವರೆಗೂ ಸರ್ಕಾರದ ಆದೇಶಕ್ಕೂ ಕಾಯದೆ ಹಾಗೂ ಪೊಲೀಸ್ ಇಲಾಖೆಯ ಅನುಮತಿ ಪಡೆಯದೆ ಪ್ರತಿಭಟನೆ ನಡೆಸುತ್ತಿರುವುದು ವಿಷಾದನೀಯ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸರ್ಕಾರವು 2021ರ ಅ.1ರಂದು 'ವಿಶ್ವವಿದ್ಯಾನಿಲಯಗಳು ತನ್ನ ಹಂತದಲ್ಲಿಯೇ ಹುದ್ದೆಗಳನ್ನು ಸೃಜಿಸಿ ಭರ್ತಿ ಮಾಡಿಕೊಂಡಲ್ಲಿ ಹಾಗೂ ಸರ್ಕಾರದಿಂದ ಮಂಜೂರಾದ ಹುದ್ದೆಗಳಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ತಾತ್ಕಾಲಿಕ ಅಥವಾ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಲ್ಲಿ ಅಂತಹ ನೇಮಕಾತಿಗೆ ಸರ್ಕಾರದಿಂದ ಯಾವುದೇ ಸಹಾಯಾನುದಾನವನ್ನು ಒದಗಿಸುವುದಿಲ್ಲ ಈ ಸೂಚನೆಗಳನ್ನು ಉಲ್ಲಂಘನೆಯಾದಲ್ಲಿ ಅದರ ಪರಿಣಾಮಗಳಿಗೆ ವಿವಿಯ ಮುಖ್ಯಸ್ಥರನ್ನೇ ನೇರ ಹೊಣೆಗಾರರನ್ನಾಗಿಸಿ, ಯಾವುದೇ ಮುನ್ಸೂಚನೆ ನೀಡದೆ ವಿವಿಯ ಮುಖ್ಯಸ್ಥರ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಸ್ಪಷ್ಟಪಡಿಸಿದೆ.

ತಾತ್ಕಾಲಿಕ ನೌಕರರು ಹೈಕೋರ್ಟ್‌ನಲ್ಲಿ ದಾಖಲಿಸಿರುವ ಪ್ರಕರಣವು ವಿಚಾರಣೆ ಹಂತದಲ್ಲಿದ್ದು, ತೀರ್ಪಿಗಾಗಿ ಕಾಯಬೇಕಾಗಿದೆ. ಇದೆಲ್ಲದರ ಅರಿವಿದ್ದರೂ ವಿವಿ ಎದುರು ದಿನಕ್ಕೊಂದು ಸಂಘಟನೆ ಮುಖಂಡರನ್ನು ಆಹ್ವಾನಿಸಿ, ಅವರಿಂದ ಸರ್ಕಾರದ ಆದೇಶ, ಸುತ್ತೋಲೆಗಳ ಕುರಿತು ತಪ್ಪು ಮಾಹಿತಿ ನೀಡಿ ವಿವಿ ಕುಲಪತಿ ಹಾಗೂ ಕುಲಸಚಿವರೇ ಉದ್ಧಟತನದಿಂದ ವರ್ತಿಸಿ ಅನ್ಯಾಯವೆಸಗಿದ್ದಾರೆಂದು ಬಿಂಬಿಸಲಾಗುತ್ತಿದೆ. ಅಲ್ಲದೆ ಸರ್ಕಾರದ ಮತ್ತು ವಿಶ್ವವಿದ್ಯಾನಿಲಯದ ಘನತೆಗೆ ದಕ್ಕೆ ತರುವುದು ಹಾಗೂ ವಿವಿಯ ವಿದ್ಯಾರ್ಥಿಗಳು ಮತ್ತು ಅವರ ಪೋಷಕರಲ್ಲಿ ವಿವಿಯ ಬಗ್ಗೆ ತಪ್ಪು ಮಾಹಿತಿ ರವಾನಿಸುವುದಾಗಿದೆ. ಆದ್ದರಿಂದ ಹೈಕೋರ್ಟ್ ತೀರ್ಪಿನ ಅನ್ವಯ ಸರ್ಕಾರವು ಆದೇಶ ನೀಡುವವರೆಗೆ ವಿಶ್ವವಿದ್ಯಾಲಯದ ವತಿಯಿಂದ ಯಾವುದೇ ಕ್ರಮ ವಹಿಸಲು ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ.

ರಾಜ ಮಾರ್ಗಕ್ಕೆ ಹೊಂದಿಕೊಂಡಂತೆ ಇದೆ ಒಳಚರಂಡಿ ಕಾರಂಜಿ

ಮೈಸೂರು ಮಹಾನಗರ ಪಾಲಿಕೆಗೆ ಸಾರ್ವಜನಿಕರ ಹಿಡಿಶಾಪ



ಮೈಸೂರು, ಮಾ.31– ಮೈಸೂರು 'ರಾಜಮಾರ್ಗ' ಕೊಳಚೆ ನೀರಿನಿಂದ ಮುಕ್ತವಾಗುವುದು ಯಾವಾಗ? ಎಂದು ಸಾರ್ವಜನಿಕರು ಆಕ್ರೋಶದಿಂದ ನಗರ ಪಾಲಿಕೆಯನ್ನು ಪ್ರಶ್ನಿಸಿದ್ದಾರೆ.

ಯುಜಿಡಿ ಬಂದ್ ಆಗಿ ಗುರುವಾರ ರಘುಲಾಲ್ ಫಾರ್ಮಸಿ ರಸ್ತೆಯಲ್ಲಿ ಒಳಚರಂಡಿ ಕೊಳಚೆ ನೀರಿನ ಕೆರೆಯೇ ನಿರ್ಮಾಣವಾಗಿತ್ತು. ಮ್ಯಾನ್‌ಹೋಲ್‌ನಿಂದ ಉಕ್ಕುತ್ತಿದ್ದ ಕೊಳಚೆ ನೀರು, ಫುಟ್‌ಪಾತ್ ಮೂಲಕ ರಾಜಮಾರ್ಗ ಸಯ್ಯಾಜಿರಾವ್ ರಸ್ತೆಯಲ್ಲಿ ಕೆ.ಆರ್.ವೃತ್ತದವರೆಗೂ ಹರಿದಿತ್ತು. ಔಷಧಿ ಅಂಗಡಿ ಸೇರಿದಂತೆ ಹಲವು ಮಳಿಗೆಗಳ ಮುಂದೆಯೂ ಕೊಳಚೆ ಆವರಿಸಿತ್ತು ಪರಿಣಾಮ ರಘುಲಾಲ್ ಫಾರ್ಮಸಿಗೆ ಔಷಧಿ ಖರೀದಿಸಲು ಬಂದ ಜನರಿಗೆ ತೀವ್ರ ತೊಂದರೆಯಾಯಿತು. ಸಯ್ಯಾಜಿರಾವ್ ರಸ್ತೆ ಫುಟ್‌ಪಾತ್‌ನಲ್ಲೂ ಓಡಾಟಕ್ಕೆ ಕಷ್ಟವಾಯಿತು. ಕೊಳಚೆ ನೀರಿನ ದುರ್ವಾಸನೆ ಸಹಿಸಲಾಗದೆ ಮೂಗು ಮುಚ್ಚಿಕೊಂಡು ಓಡಾಡುತ್ತಿದ್ದ ಜನ ನಗರ ಪಾಲಿಕೆಗೆ ಹಿಡಿಶಾಪ ಹಾಕಿದರು. ಈ ಸ್ಥಳದಲ್ಲಿ ಮ್ಯಾನ್‌ಹೋಲ್ ಸಮಸ್ಯೆ ಹೊಸದಲ್ಲ. ಆಗಾಗ ಯುಜಿಡಿ ನೀರು ಉಕ್ಕಿ ರಸ್ತೆಗೆ ಹರಿಯುತ್ತದೆ. ಸಾರ್ವಜನಿಕರು ದೂರಿದರೆ ಮಾತ್ರ ಕಾಟಾಚಾರಕ್ಕೆ ದುರಸ್ತಿ ಮಾಡಿ ಹೋಗುತ್ತಾರೆ. ಕೆಲ ದಿನಗಳಲ್ಲಿ ಮತ್ತೆ ಇದೇ ಸಮಸ್ಯೆ ತಲೆದೂರುತ್ತದೆ. ಯಾರೋ ಮಾಡುವ ಅವಿವೇಕದ ಕೆಲಸಕ್ಕೆ ಪ್ರಮಾಣಿಕವಾಗಿ ನಿಗಧಿತ ಸಮಯಕ್ಕೆ ತೆರಿಗೆ ಪಾಆವತಿಸುವವರು ಇಲ್ಲಿ ಬಲಿಪಶುವಾಗುತ್ತಿದ್ದಾರೆ. ನಗರ ಪಾಲಿಕೆ ಸಿಬ್ಬಂದಿ ಬಂದದ್ದು, ಕೆಲಗಂಟೆಗಳ ಕಾಲ ನಂತರವೇ ಎಂದು ಸಾರ್ವಜನಿಕರು ದೂರಿದ್ದಾರೆ. ಶಾಶ್ವತ ಪರಿಹಾರ ಕ್ರಮದ ಮೂಲಕ ಕೊಳಚೆ ನೀರಿನಿಂದ ಮುಕ್ತಿ ನೀಡಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಇಮ್ರಾನ್ ಖಾನ್ ವಿರುದ್ಧ ಅವಿಶ್ವಾಸ ನಿರ್ಣಯ: ಭಾನುವಾರ ಭವಿಷ್ಯ ನಿರ್ಧಾರ



ಇಸ್ಲಾಮಬಾದ್, ಮಾ.31– ಕೆಳ ಸದನದಲ್ಲಿ ಬಹುಮತವನ್ನು ಕಳೆದುಕೊಂಡಿರುವ ಪ್ರಧಾನಿ ಇಮ್ರಾನ್ ಖಾನ್ ವಿರುದ್ಧ ಅವಿಶ್ವಾಸ ನಿರ್ಣಯ ಮೇಲಿನ ಮತಕ್ಕೆ ಪ್ರತಿಪಕ್ಷ ಶಾಸಕರು ಒತ್ತಾಯಿಸಿದ ನಂತರ ಪಾಕಿಸ್ತಾನ ರಾಷ್ಟ್ರೀಯ ಅಸೆಂಬ್ಲಿ ಅಧಿವೇಶನವನ್ನು ಇಂದು ಭಾನುವಾರದವರೆಗೂ ಮುಂದೂಡಲಾಯಿತು. ಸಂಸತ್ ಭವನದಲ್ಲಿ ನ್ಯಾಷನಲ್ ಅಸೆಂಬ್ಲಿ ಅಧಿವೇಶನ ಆರಂಭವಾಗುತ್ತಿದ್ದಂತೆಯೇ, ಉಪ ಸಭಾಪತಿ ಕಾಸಿಂ ಸುರಿ ಅಜೆಂಡಾದಲ್ಲಿ ಪಟ್ಟಿ ಮಾಡಲಾದ ಅಂಶಗಳನ್ನು ಚರ್ಚಿಸಲು ಶಾಸಕರನ್ನು ಕೇಳಿದರು. ಆದಾಗ್ಯೂ, ಪ್ರಧಾನಿ ಇಮ್ರಾನ್ ಖಾನ್ ವಿರುದ್ಧದ ಅವಿಶ್ವಾಸ ನಿರ್ಣಯ ಮೇಲೆ ಕೂಡಲೇ ಮತಕ್ಕೆ ಅವಕಾಶ ನೀಡುವಂತೆ ಪ್ರತಿಪಕ್ಷಗಳ ಶಾಸಕರು ಆಗ್ರಹಿಸಿದರು. ತದನಂತರ ಉಪ ಸಭಾಪತಿ ಸುರಿ. ಸದನವನ್ನು ಭಾನುವಾರ ಬೆಳಗ್ಗೆ 11 ಗಂಟೆಯವರೆಗೆ ಮುಂದೂಡಿದರು. ಇಮ್ರಾನ್ ಖಾನ್ ವಿರುದ್ಧ ನ್ಯಾಷನಲ್ ಅಸೆಂಬ್ಲಿಯಲ್ಲಿ ಪ್ರತಿಪಕ್ಷ ಮುಖಂಡ ಸೆಯ್ ಬಾಜ್ ಶರೀಫ್ ಮಾರ್ಚ್ 28 ರಂದು ಅವಿಶ್ವಾಸ ನಿರ್ಣಯ ಮಂಡಿಸಿದರು. ಅದೇ ದಿನ ಅದರ ಮೇಲಿನ ಚರ್ಚೆಗೆ ಅನುಮತಿ ನೀಡಲಾಗಿತ್ತು. ಏಪ್ರಿಲ್ 3 ರಂದು ಅವಿಶ್ವಾಸ ನಿರ್ಣಯ ಮೇಲೆ ಮತದಾನ ನಡೆಯುವ ಸಾಧ್ಯತೆಯಿದೆ.

ಚಾಮುಂಡಿಬೆಟ್ಟಕ್ಕೆ ರೋಪ್ ವೇ ವಿರೋಧಿಸಿ ಏ.3ರಂದು ಮೈಸೂರಲ್ಲಿ ದುಂಡು ಮೇಜಿನ ಸಭೆ

ಮೈಸೂರು, ಮಾ.31(ಎಂಟಿವೈ)– ಚಾಮುಂಡಿಬೆಟ್ಟಕ್ಕೆ ರೋಪ್–ವೇ, ಮೆಟ್ಟಿಲುಗಳಿಗೆ ರೇಲಿಂಗ್ಸ್ ಅಳವಡಿಸುವುದು ಸೇರಿದಂತೆ ಕೇಂದ್ರದ 'ಪ್ರಸಾದ್' ಯೋಜನೆಯಡಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳದಂತೆ ಒತ್ತಡ ಹೇರುವ ಸಲುವಾಗಿ ಏ.3ರಂದು ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ಸಭಾಂಗಣದಲ್ಲಿ ದುಂಡು ಮೇಜಿನ ಸಭೆ ಆಯೋಜಿಸಲಾಗಿದೆ ಎಂದು ಪರಿಸರ ಬಳಗದ ಸಂಸ್ಥಾಪಕ ಸದಸ್ಯ ಪರಶುರಾಮೇಗೌಡ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರದ ಪ್ರಸಾದ ಯೋಜನೆಯಲ್ಲಿ ಚಾಮುಂಡಿ ಬೆಟ್ಟವನ್ನು ಅಭಿವೃದ್ಧಿ ಮಾಡಲು ಉದ್ದೇಶಿಸಲಾಗಿದೆ. ಅದರಲ್ಲಿ ರೋಪ್ ವೇ ಹಾಗೂ ಬೆಟ್ಟದ ಮೆಟ್ಟಿಲುಗಳಿಗೆ ರೇಲಿಂಗ್ಸ್ ಅಳವಡಿಕೆಯೂ ಸೇರಿದೆ. ಈಗಾಗಲೇ ಬೆಟ್ಟದ ಮೇಲೆ ನಡೆಸಿರುವ ಮಿತಿ ಮೀರಿದ ಅಭಿವೃದ್ಧಿ ಕಾರ್ಯದಿಂದಾಗಿ ಹಲವಾರು ಬಾರಿ ಭೂ ಕುಸಿತವಾದ ಸ್ಥಳವನ್ನು ಇಂದಿಗೂ ದುರಸ್ತಿ ಮಾಡಲು ಸಾಧ್ಯವಾಗಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಬೆಟ್ಟದಲ್ಲಿ ಅಭಿವೃದ್ಧಿ ಕಾರ್ಯ ನಡೆಸಲು ಮುಂದಾಗಿರುವುದು ಸರಿಯಲ್ಲ. ಈ ಅಭಿವೃದ್ಧಿ ಕಾರ್ಯಗಳಿಂದ ಬೆಟ್ಟದ ಮೇಲಾಗುವ ಒತ್ತಡದ ಬಗ್ಗೆ ಮನವರಿಕೆ ಮಾಡಿಕೊಡಲು ಈ ಸಭೆ ಕರೆಯಲಾಗಿದೆ ಎಂದರು.

ಪರಿಸರ ಬಳಗ, ಚಾಮುಂಡಿಬೆಟ್ಟ ಉಳಿಸಿ ಹೋರಾಟ ಸಮಿತಿ ಹಾಗೂ ಇನ್ನಿತರ ಪರಿಸರ ಕಾಳಜಿಯುಳ್ಳ ಸಂಸ್ಥೆಗಳೊಂದಿಗೆ ಸೇರಿ ಈಗಾಗಲೇ ಚಾಮುಂಡಿಬೆಟ್ಟ ರಕ್ಷಣೆಗಾಗಿ ಹೋರಾಟ ಆರಂಭಿಸಲಾಗಿದೆ. 50 ಸಾವಿರ ಸಹಿ ಸಂಗ್ರಹ ಮಾಡಲಾಗಿದ್ದು, ಅದನ್ನು ಡಿಜಿಟಲೈಸ್ಡ್ ಮಾಡಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸಲ್ಲಿಸಲಾಗುತ್ತಿದೆ. ಆದ್ದರಿಂದ ಬೆಟ್ಟ ಉಳಿಸುವ ಅಭಿಯಾನದಲ್ಲಿ ಮೈಸೂರಿನ ಜನತೆ ಪಾಲ್ಗೊಳ್ಳಬೇಕು ಎಂದು ಮನವಿ ಮಾಡಿದರು.

ಏ.3ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 2.30ರವರೆಗೆ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ಸಭಾಂಗಣದಲ್ಲಿ ವಿವಿಧ ಕ್ಷೇತ್ರಗಳ ತಜ್ಞರೊಂದಿಗೆ ದುಂಡು ಮೇಜಿನ ಸಭೆ ನಡೆಸಲಾಗುತ್ತಿದೆ. ಈ ಸಭೆಯಲ್ಲಿ ವನ್ಯಜೀವಿ ತಜ್ಞ ಕೃಪಾಕರ, ಪಾರಂಪರಿಕ ತಜ್ಞ ಪ್ರೊ.ಎನ್.ಎಸ್. ರಂಗರಾಜ್, ಭೂಗರ್ಭ ತಜ್ಞ ಪ್ರೊ.ಜನಾರ್ಧನ, ಪರಿಸರ ತಜ್ಞ ಎ.ಶಿವಪ್ರಕಾಶ್ ಅಡವಣ್ಣೆ ಸ್ಟ್ರಕ್ಚರಲ್ ಇಂಜಿನಿಯರ್ ಡಾ.ಮೇ.ಜ.ಸುಧೀರ್ ಒಂಬತ್ಕೆರೆ, ಜಲತಜ್ಞ ಪ್ರೊ.ಯು.ಎನ್.ರವಿಕುಮಾರ್ ಅವರುಗಳು ಪಾಲ್ಗೊಂಡು ವಿಷಯ ಮಂಡಿಸಲಿದ್ದಾರೆ.

ವನ್ಯಜೀವಿ, ಪಾರಂಪರಿಕ, ಭೂಗರ್ಭ, ಪರಿಸರ ತಜ್ಞರು ಸೇರಿದಂತೆ ಹಲವರು ಭಾಗಿ



ಆನ್‌ಲೈನ್ ಮೂಲಕ ಪರಿಸರ ತಜ್ಞ ನಾಗೇಶ್ ಹೆಗಡೆ, ಪರಿಸರ ಹೋರಾಟಗಾರ್ತಿ ರೂಪ ಹಾಸನ, ಪಶ್ಚಿಮ ಘಟ್ಟದ ಪರಿಸರ ಹೋರಾಟಗಾರ ಶಶಿಧರ್ ಶೆಟ್ಟಿ ಬೆಟ್ಟದ ರಕ್ಷಣೆಗೆ ಕೈಗೊಳ್ಳಬೇಕಾದ ಕ್ರಮದೊಂದಿಗೆ, ಅಭಿವೃದ್ಧಿ ಕಾರ್ಯದಿಂದ ಬೆಟ್ಟದ ಪರಿಸ್ಥಿತಿ ಬಗ್ಗೆ ಮನವರಿಕೆ ಮಾಡಿಕೊಡಲಿದ್ದಾರೆ ಎಂದರು.

ಚಾಮುಂಡಿಬೆಟ್ಟಕ್ಕೆ ರೋಪ್ ವೇ ಹಾಗೂ ಬೆಟ್ಟದ ಮೆಟ್ಟಿಲುಗಳಿಗೆ ರೇಲಿಂಗ್ಸ್ ಅಳವಡಿಕೆಯನ್ನು ವಿರೋಧಿಸಿ ಸಂಸದ ವಿ.ಶ್ರೀನಿವಾಸ್ ಪ್ರಸಾದ್, ಸಾಹಿತಿಗಳಾದ ಪ್ರೊ.ಎಸ್.ಎಲ್.ಭೈರಪ್ಪ ದೇವನೂರು ಮಹದೇವ, ರಾಜವಂಶಸ್ಥರಾದ ಪ್ರಮೋದಾ ದೇವಿ ಒಡೆಯರ್ ಸೇರಿದಂತೆ ಪರಿಸರ ತಜ್ಞರು, ವಿವಿಧ ಕ್ಷೇತ್ರಗಳ ಗಣ್ಯರ ಅಭಿಪ್ರಾಯವುಳ್ಳ ಕಿರುಹೊತ್ತಿಗೆಯನ್ನು ಸಿದ್ಧಪಡಿಸಿ ಸಾರ್ವಜನಿಕರಿಗೆ ಹಂಚಲಾಗುತ್ತಿದ್ದು, ಹಲವು ಮಂದಿ ಬೆಟ್ಟ ಉಳಿಸಿ ಹೋರಾಟದಲ್ಲಿ ಸ್ವಯಂ ಪ್ರೇರಣೆಯಿಂದ ಪಾಲ್ಗೊಳ್ಳಲು ಮುಂದೆ ಬರುತ್ತಿದ್ದಾರೆ. ಆಡಳಿತ ಪಕ್ಷದಲ್ಲಿದ್ದರೂ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಅವರು ಪತ್ರ ಬರೆಯುವ ಮೂಲಕ ಪ್ರಬುದ್ಧತೆಯನ್ನು ಮೆರೆದಿದ್ದಾರೆ ಎಂದು ತಿಳಿಸಿದರು.

ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಮಾತನಾಡಿ, ಚಾಮುಂಡಿಬೆಟ್ಟಕ್ಕೆ ರೋಪ್ ವೇ ನಿರ್ಮಾಣ ಮಾಡಿದರೆ ಎಂಜಾಯ್ ಮಾಡಬಹುದು ಎಂಬ ಮನೋಭಾವದಿಂದ ಯುವಜನರಲ್ಲಿ ಕೆಲವರು ರೋಪ್ ವೇ ಪರ ಮಾತನಾಡುತ್ತಿದ್ದರು. ಆದರೆ, ಇದೀಗ ರೋಪ್ ವೇ ನಿರ್ಮಾಣದಿಂದ ಬೆಟ್ಟಕ್ಕೆ ಆಗುವ ಹಾನಿಗೆ ಸಂಬಂಧಿಸಿದಂತೆ ತಜ್ಞರು ನೀಡಿದ ಎಚ್ಚರಿಕೆಯಿಂದ ಈ ಹಿಂದೆ ರೋಪ್ ವೇ ಬೇಕು ಎಂದು ಪ್ರತಿಪಾದಿಸುತ್ತಿದ್ದ ಹಲವರು ಈಗ ಬೆಟ್ಟ ಉಳಿಸಿ ಅಭಿಯಾನಕ್ಕೆ ಕೈಜೋಡಿಸಿದ್ದಾರೆ ಎಂದರು.

ಪರಿಸರ ಬಳಗದ ಸದಸ್ಯೆ, ಕ್ಲೀನ್ ಮೈಸೂರು ಫೌಂಡೇಷನ್ ಪ್ರತಿನಿಧಿ ಲೀಲಾ ಶಿವಕುಮಾರ್ ಮಾತನಾಡಿ, ಚಾಮುಂಡಿ ಬೆಟ್ಟಕ್ಕೆ ರೋಪ್ ವೇ ಅವಶ್ಯಕತೆ ಇಲ್ಲ. ಆದರೂ ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಒತ್ತಡದಿಂದಾಗಿ ರೋಪ್ ವೇ ನಿರ್ಮಾಣಕ್ಕೆ ಪ್ರಸ್ತಾಪ ಸಲ್ಲಿಕೆಯಾಗಿದೆ. ರೋಪ್ ವೇ ನಿರ್ಮಾಣ ಮಾಡುವಷ್ಟು ಎತ್ತರದಲ್ಲಿ ಚಾಮುಂಡಿಬೆಟ್ಟ ಇಲ್ಲ. ಪಿಲ್ಲರ್ ನಿರ್ಮಾಣಕ್ಕೆ ದೊಡ್ಡ ದೊಡ್ಡ ಹಳ್ಳ ತೋಡುವುದರಿಂದ ಬೆಟ್ಟ ಸಡಿಲಗೊಳ್ಳುತ್ತದೆ. ಇದನ್ನು ಹಲವು ತಜ್ಞರು ಪ್ರತಿಪಾದಿಸಿದ್ದಾರೆ. ಇದಕ್ಕಾಗಿ ನಾವು ಮುಂದಿನ ಪೀಳಿಗೆಗೆ ಚಾಮುಂಡಿ ಬೆಟ್ಟವನ್ನು ಉಳಿಸಲು ಬೆಟ್ಟ ಉಳಿಸಿ ಹೋರಾಟ ಆರಂಭಿಸಿದ್ದೇವೆ ಎಂದರು.

ಇದನ್ನು ನಾವು ಹೋರಾಟ ಎನ್ನದೇ ನಮ್ಮ ಕರ್ತವ್ಯ ಎಂದು ಭಾವಿಸುತ್ತೇವೆ ಇಂದು ಕೇವಲ ಅಭಿವೃದ್ಧಿಯ ವಿಚಾರವನ್ನಷ್ಟೇ ಪ್ರಸ್ತಾಪಿಸಲಾಗುತ್ತಿದೆ. ಆದರೆ ಯಾರೊಬ್ಬರೂ ಆಮ್ಲಜನಕದ ಮಹತ್ವದ ಬಗ್ಗೆ ಮಾತನಾಡುತ್ತಿಲ್ಲ. ಕೊರೊನಾ ಸಂದರ್ಭದಲ್ಲಿ ಆಮ್ಲಜನಕ ಸಿಗದೆ ಎಷ್ಟೋ ಮಂದಿ ಮೃತಪಟ್ಟಿದ್ದಾರೆ. ಆಕ್ಸಿಜನ್‌ಗಾಗಿ ಹಾಹಾಕಾರ ಉಂಟಾಗಿತ್ತು. ಆದರೂ ಜನರಿಗೆ ಆಕ್ಸಿಜನ್ ಕೊಡುವ ಪರಿಸರ ಸಂರಕ್ಷಣೆಗೆ ಒಲವು ವ್ಯಕ್ತಪಡಿಸದೇ ನಿರ್ಲಕ್ಷಿಸಿದ್ದಾರೆ. ಇನ್ನಾದರೂ ಬೆಟ್ಟ ಉಳಿಸಿ ಹೋರಾಟಕ್ಕೆ ಜನರು ಸ್ವಯಂ ಪ್ರೇರಣೆಯಿಂದ ಮುಂದೆ ಬರಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಪರಿಸರ ಬಳಗದ ಸದಸ್ಯರಾದ ಪ್ರಭಾ ನಂದಿಶ್, ಭುಗತಗಳ್ಳಿ ಜವರಪ್ಪ, ವೆಂಕಟರಾಜು ಇದ್ದರು.

ಬೆಳ್ಳಿ ಬೆಳಕು

ಸತ್ಯಮೂರ್ತಿ ತೋಳಹುಣಸೆ



ಶ್ಯಾಡೋ ಚಿತ್ರದ ನಾಯಕಿ ಶೋಭಿತಾ ರಾಣಾ



ನಾಳೆ ವಿಶೇಷ ಟೀಸರ್

ಕಿಚ್ಚ ಸುದೀಪ್ ಅಭಿನಯದ ಬಹುನಿರೀಕ್ಷಿತ 'ವಿಕ್ರಾಂತ್ ರೋಣ' ಚಿತ್ರದ ರಿಲೀಸ್ ಡೇಟ್ ಅನೌನ್ಸ್ ಮಾಡುವ ವಿಶೇಷ ಟೀಸರ್ ಏಪ್ರಿಲ್ 2 ರಂದು ರಿಲೀಸ್ ಆಗುತ್ತಿದೆ. ನಿರ್ದೇಶಕ ಅನೂಪ್ ಭಂಡಾರಿ ಮತ್ತು ಕಿಚ್ಚ ಸುದೀಪ್ ಕಾಂಬಿನೇಶನ್‌ನಲ್ಲಿ ಅದ್ದೂರಿ ವೆಚ್ಚದಲ್ಲಿ ತಯಾರಾಗಿರುವ 3ಡಿ ಆಕ್ಷನ್ ಅಡ್ವೆಂಚರ್, ಮಿಸ್ಟ್ರಿ ಥ್ರಿಲ್ಲರ್ ಇದಾಗಿದ್ದು, ವಿಕ್ರಾಂತ್ ರೋಣ ಚಿತ್ರದ ಅಪ್ಡೇಟ್‌ಗಾಗಿ ಕಾಯುತ್ತಿದ್ದ ಅಭಿಮಾನಿಗಳಿಗೆ ಅಂದು ಸಿಹಿಸುದ್ದಿ ದೊರಕಲಿದೆ.

ವಿಕ್ರಾಂತ್ ರೋಣ ಕನ್ನಡ, ಹಿಂದಿ, ತೆಲುಗು ಸೇರಿ 5 ಭಾಷೆಗಳಲ್ಲಿ ಬಿಡುಗಡೆಯಾಗುತ್ತಿದೆ. ಅಲ್ಲದೇ ಇಂಗ್ಲೀಷ್, ಅರೇಬಿಕ್, ಜರ್ಮನ್, ರಷಿಯನ್, ಮ್ಯಾಂಡರಿನ್ ಭಾಷೆಗೂ ಡಬ್ ಆಗುತ್ತಿದೆ. ಈ ಚಿತ್ರದಲ್ಲಿ ಕಿಚ್ಚನ ಸಾಹಸವನ್ನು 3ಡಿಯಲ್ಲಿ ನೋಡಬಹುದಾಗಿದೆ.

ಝೀ ಸ್ಟುಡಿಯೋ ಅರ್ಪಿಸುತ್ತಿರುವ ಈ ಚಿತ್ರವನ್ನು ಶಾಲಿನಿ ಪ್ರೊಡಕ್ಷನ್ಸ್ ಮೂಲಕ ಜಾಕ್ ಮಂಜುನಾಥ್ ಅವರು ನಿರ್ಮಿಸುತ್ತಿದ್ದು, ಅಲಂಕಾರ್ ಪಾಂಡಿಯನ್ ಕೋ ಪ್ರೊಡ್ಯೂಸರ್ ಆಗಿದ್ದಾರೆ. ಜಾಕ್ವೆಲಿನ್ ಫರ್ನಾಂಡಿಸ್, ನಿರೂಪ್ ಭಂಡಾರಿ, ನೀತಾ ಅಶೋಕ್ ಚಿತ್ರದ ಉಳಿದ ತಾರಾಗಣದಲ್ಲಿದ್ದಾರೆ.



ಒಂದೇ ದಿನದಲ್ಲಿ 109 ಮಿಲಿಯನ್
ಕೆಜಿಎಫ್-2 ಟ್ರೈಲರ್ ವೀಕ್ಷಣೆ

ಭಾರತೀಯ ಚಿತ್ರರಂಗವೇ ಎದುರು ನೋಡುತ್ತಿರುವ ಬಹುನಿರೀಕ್ಷಿತ ಕೆಜಿಎಫ್-2 ಚಿತ್ರ ಏ.14ರಂದು ವಿಶ್ವಾದ್ಯಂತ ಬಿಡುಗಡೆಯಾಗುತ್ತಿದೆ. ಅದಕ್ಕೂ ಮುನ್ನ ಚಿತ್ರದ ಬಹುನಿರೀಕ್ಷಿತ ಟ್ರೈಲರ್ ಐದು ಭಾಷೆಗಳಲ್ಲೂ ಬಿಡುಗಡೆಯಾಗಿದ್ದು, ಕೇವಲ 24 ಗಂಟೆಗಳಲ್ಲಿ 109 ಮಿಲಿಯನ್‌ಗೂ ಹೆಚ್ಚು ವೀಕ್ಷಣೆಯಾಗುವ ಮೂಲಕ ಸರ್ವಕಾಲಿಕ ದಾಖಲೆ ನಿರ್ಮಿಸಿದೆ. ಬಾಲಿವುಡ್ ನಟ ಸಂಜಯದತ್, ರವೀನಾಟಂಡನ್, ಟಾಲಿವುಡ್‌ನ ರಾವ್‌ರಮೇಶ್‌ರಂಥ ಕಲಾವಿದರು ನಟಿಸಿರುವ ಈ ಚಿತ್ರದ ಕಥೆ ಹೇಗೆ, ಎಲ್ಲಿಂದ ಶುರುವಾಗುತ್ತೆ ಎನ್ನುವ ಪ್ರಶ್ನೆಗಳಿಗೆ ಈ ಟ್ರೈಲರ್‌ನಲ್ಲಿ ಉತ್ತರವಿದೆ.

ಸಚಿವ ಅಶ್ವಥ್ ನಾರಾಯಣ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ವೇದಿಕೆಯಲ್ಲಿ ಶಿವರಾಜ್‌ಕುಮಾರ್ ಟ್ರೈಲರ್ ಬಿಡುಗಡೆಗೊಳಿಸಿದರು. ಕಾರ್ಯಕ್ರಮವನ್ನು ಬಾಲಿವುಡ್‌ನ ಹೆಸರಾಂತ ನಿರ್ದೇಶಕ ಕರಣ್‌ಜೋಹರ್ ನಡೆಸಿಕೊಟ್ಟರು. ಅವರಿಗೆ ಸಾಥ್ ನೀಡಿದ್ದು ಕನ್ನಡದ ಕುವರಿ ಅನುಶ್ರೀ ನಿರ್ದೇಶಕ ಪ್ರಶಾಂತ್‌ನೀಲ್, ನಿರ್ಮಾಪಕ ವಿಜಯ್‌ಕಿರಗಂದೂರು, ನಾಯಕ ಯಶ್, ನಾಯಕಿ ಶ್ರೀನಿಧಿ ಶೆಟ್ಟಿ ರಾಧಿಕಾ ಪಂಡಿತ್, ಪೃಥ್ವಿರಾಜ್ ಮುಂತಾದವರು ಕಾರ್ಯಕ್ರಮದಲ್ಲಿ ಹಾಜರಿದ್ದರು. ಸಚಿವ ಅಶ್ವಥರಾಯಣ್ ಮಾತನಾಡುತ್ತ, ಚಿತ್ರದ ಟ್ರೈಲರ್ ತುಂಬಾ ಚೆನ್ನಾಗಿ ಮೂಡಿಬಂದಿದೆ. ಎಂಟರ್‌ಟೈನ್‌ಮೆಂಟ್ ಇಂಡಸ್ಟ್ರಿ ಈಗ ಬಹುವೇಗವಾಗಿ ಬೆಳೆಯುತ್ತಿದೆ. ಚಾಪ್ಟರ್ 1 ಮಾಡಿದ ಎಲ್ಲಾ ದಾಖಲೆಗಳು ಭಾಗ 2ರ ನಿರೀಕ್ಷೆಯನ್ನು ಹೆಚ್ಚಿಸಿದೆ. ಪ್ರಶಾಂತ್‌ನೀಲ್ ಒಂದೊಳ್ಳೇ ಸಿನಿಮಾ ಕ್ರಿಯೇಟ್ ಮಾಡಿದ್ದು, ಪ್ರೇಕ್ಷಕರ ನಿರೀಕ್ಷೆಯನ್ನು ಮುಟ್ಟುತ್ತಾರೆ, ನಾನಿಲ್ಲಿ ಮಿನಿಸ್ಟರ್ ಆಗಿ ಬಂದಿಲ್ಲ ಒಬ್ಬ ಸಿನಿಮಾ ಪ್ರೇಮಿಯಾಗಿ ಬಂದಿದ್ದೇನೆ ಎಂದು ಹೇಳಿದರು. ಕೊನೆಯಲ್ಲಿ ಮಾತನಾಡಿದ ನಿರ್ಮಾಪಕ ವಿಜಯ ಕಿರಗಂದೂರು 8 ವರ್ಷದ ಹಿಂದೆ ತುಂಬಾ ದೊಡ್ಡಕನಸು ಕಟ್ಟಿಕೊಂಡು ಕೆಜಿಎಫ್ ಸಿನಿಮಾ ಪ್ರಾರಂಭಿಸಿದೆವು. ಅದು ಇಲ್ಲೀವರೆಗೂ ತಂದು ನಿಲ್ಲಿಸಿದೆ, ಇಷ್ಟೆಲ್ಲ ಸಾಧನೆಗೆ ಪ್ರಶಾಂತ್‌ನೀಲ್ ಹಾಗೂ ಯಶ್ ಕುಟುಂಬ ನೀಡಿದ ಸಹಕಾರವೂ ಕಾರಣ ಎಂದರು.

ನಾಯಕ ಯಶ್ ಕೇವಲ ಗ್ಯಾಂಗ್‌ಸ್ಟರ್ ಅಷ್ಟೇಅಲ್ಲ, ಉದ್ಯಮಿಯಾಗಿಯೂ ಕಾಣಿಸಿಕೊಳ್ಳಲಿದ್ದಾರೆ. ಹೀಗಾಗಿ ವೈಲೆನ್ಸ್ ಜೊತೆಗೆ ಯಶ್ ಸ್ಟೈಲಿಶ್ ಆಗಿಯೂ ಹೊರಹೊಮ್ಮಿದ್ದಾರೆ. ರಕ್ತದಿಂದ ಬರೆದ ಕಥೆಯಿದು, ಶಾಹಿಯಿಂದ ಮುಂದುವರಿಸೋಕೆ ಆಗಲ್ಲ. ಮುಂದುವರಿಸ ಬೇಕೆಂದರೆ ಮತ್ತೆ ರಕ್ತವನ್ನೇ ಕೇಳುತ್ತೆ ಎನ್ನುವ ಪ್ರಕಾಶ್‌ರಾಜ್‌ರ ಮಾತು ಕಥೆಯ ಮುಂದುವರಿದ ಭಾಗವನ್ನು ವಿವರಿಸುತ್ತೆ. ಎಂದಿನಂತೆ ರವಿ ಬಸ್ರೂರ್ ಅವರ ಹಿನ್ನೆಲೆ ಸಂಗೀತ. ಭುವನ್‌ಗೌಡ ಅವರ ಕ್ಯಾಮರಾ ಕೈಚಳಕ ಪ್ರೇಕ್ಷಕರ ಕಣ್ಮನ ತಣಿಸುತ್ತದೆ.



ಯುವಜನತೆ ಜೀವನಗಾಥೆ
ಕೈಲಾಸ ಕಾಸಿದ್ರೆ

ಸಾಮಾಜಿಕ ಸಮಸ್ಯೆಗಳ ವಿರುದ್ಧ ಹೋರಾಟ ನಡೆಸುವ ಯುವಕನೊಬ್ಬನ ಕಥೆ ಹೊಂದಿರುವ ಚಿತ್ರ 'ಕೈಲಾಸ ಕಾಸಿದ್ರೆ' ವಾಸಿಕ್ ಅನ್ನಾದ್ ಅವರ ನಿರ್ಮಾಣದ, ನಾಗ್‌ವೆಂಕಟ್ ಅವರ ನಿರ್ದೇಶನದ ಈ ಚಿತ್ರದಲ್ಲಿ ತಾರಕಾಸುರ ಖ್ಯಾತಿಯ ವೈಭವ್ ನಾಯಕನಾಗಿ ನಟಿಸಿದ್ದಾರೆ. ಬಿಡುಗಡೆಗೆ ಸಿದ್ಧವಾಗಿರುವ ಈ ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಯಾಯಿತು.

ನಿರ್ದೇಶಕ ನಾಗ್‌ವೆಂಕಟ್ ಮಾತನಾಡುತ್ತ ಡ್ರಗ್ ಸೇರಿದಂತೆ ಅನೇಕ ದುಶ್ಚಟಗಳಿಗೆ ಬಲಿಯಾಗಿ ಈಗಿನ ಕಾಲದ ಯುವಜನತೆ ಹೇಗೆ ತಮ್ಮ ಜೀವನವನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ ಎಂಬುದರ ಜೊತೆಗೆ ಒಂದು ಲವ್‌ಸ್ಟೋರಿ ಕೂಡ ಚಿತ್ರದಲ್ಲಿದೆ ಎಂದರು. ನಮ್ಮ ಚಿತ್ರವನ್ನು ಸೆನ್ಸಾರ್ ಮಂಡಳಿ ರಿವೈಸಿಂಗ್ ಕಮಿಟಿಗೆ ಕಳುಹಿಸಿದ್ದು, ಕಾರಣ ಗೊತ್ತಿಲ್ಲ ಎಂದರು.

ನಾಯಕ ವೈಭವ್ ಮಾತನಾಡಿ, 2 ವರ್ಷಗಳ ಹಿಂದೆಯೇ ಚಿತ್ರ ಶುರುವಾದರೂ ನಾಯಕಿ ಹೊರ ನಡೆದ ಮೇಲೆ ಸ್ವಲ್ಪ ಲೇಟಾಯಿತು. ನಂತರ ನಿರ್ಮಾಪಕರು ದುಡ್ಡಿನ ಮುಖ ನೋಡದೆ, ಹೊಸ ನಾಯಕಿಯನ್ನು ಹಾಕಿಕೊಂಡು ಮತ್ತೆ ಚಿತ್ರೀಕರಣ ಆರಂಭಿಸಿದರು. ಚಿತ್ರವೀಗ ಬಿಡುಗಡೆಗೆ ಸಿದ್ಧವಾಗಿದೆ. ತಾರಕಾಸುರ ಬಳಿಕ 2 ವರ್ಷಗಳ ನಂತರ ಮತ್ತೊಂದು ವಿಭಿನ್ನ ಪಾತ್ರವನ್ನು ಮಾಡಿದ್ದೇನೆ ಎಂದರು, ನಾಯಕಿ ಸುಕನ್ಯಾ ಮಾತನಾಡಿ, ಈ ಹಿಂದೆ ಶಿವಾಜಿ ಸುರತ್ಕಲ್ ಚಿತ್ರದಲ್ಲಿ ಸಣ್ಣ ಪಾತ್ರದಲ್ಲಿ ಕಾಣಿಸಿಕೊಂಡಿದ್ದೆ. ನಾಯಕಿಯಾಗಿ ಮೊದಲ ಚಿತ್ರವಿದು ಎಂದರು. ನೀನಾಸಂ ಅಶ್ವಥ್, ಕಾಮಿಡಿ ಕಿಲಾಡಿಗಳು ಸೂರಜ್, ಲೋಕೇಶ್ ತಮ್ಮ ಪಾತ್ರದ ಬಗ್ಗೆ ಹೇಳಿದರು. ನಿರ್ದೇಶಕ ನಾಗ್‌ವೆಂಕಟ್ ಅವರೇ ಚಿತ್ರದ ಕಥೆ, ಚಿತ್ರಕಥೆ ಬರೆದಿದ್ದು, ಆಶಿಕ್ ಅರುಣ್ ಸಂಗೀತ ನಿರ್ದೇಶನ ಮಾಡಿದ್ದಾರೆ. ತ್ಯಾಗರಾಜನ್ ಚಿತ್ರದ ಛಾಯಾಗ್ರಹಣ ನಿರ್ವಹಿಸಿದ್ದಾರೆ.

ತೆರೆ ಮೇಲೆ ಸರೋಜಿನಿ ನಾಯ್ಡು ಬಯೋಪಿಕ್



ಸರೋಜಿನಿ ನಾಯ್ಡು ಪಾತ್ರದ ಸೋನಾಲ್ ಮಾಂಟೆರೊ


ಭಾರತದ ಕೋಗಿಲೆ ಎಂದೇ ಜನಪ್ರಿಯರಾದ ಸರೋಜಿನಿ ನಾಯ್ಡು ಅವರ ಜೀವನಕಥೆ ಬೆಳ್ಳಿತೆರೆಮೇಲೆ ಬರುತ್ತಿದೆ. ವಿನಯ್ ಚಂದ್ರ ನಿರ್ದೇಶನದ ಈ ಚಿತ್ರವು ಕನ್ನಡ ಮತ್ತು ಹಿಂದಿ ಭಾಷೆಗಳಲ್ಲಿ ನಿರ್ಮಾಣವಾಗುತ್ತಿದೆ. ಚರಣ್ ಸುವರ್ಣ, ಹನಿ ಚೌಧರಿ ಮತ್ತು ಸಿ.ಬಿ. ಕುಲಕರ್ಣಿ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಸರೋಜಿನಿ ನಾಯ್ಡು ಅವರ ಚಿಕ್ಕ ವಯಸ್ಸಿನ ಪಾತ್ರದಲ್ಲಿ ಸೋನಾಲ್ ಮಾಂಟೆರೊ ನಟಿಸಿದರೆ, ಹಿರಿವಯಸ್ಸಿನ ಪಾತ್ರವನ್ನು ನಟಿ ಶಾಂತಿಪ್ರಿಯ ಮಾಡುತ್ತಿದ್ದಾರೆ. ಸರೋಜಿನಿ ನಾಯ್ಡು ಅವರ ಜೀವನದಲ್ಲಿ ನಡೆದ ಹಲವು ಪ್ರಮುಖ ವಿಷಯಗಳನ್ನು ಈ ಚಿತ್ರದಲ್ಲಿ ತೆರೆದಿಡಲಾಗುತ್ತಿದೆ. ಸರೋಜಿನಿ ಅವರ ಪತಿ ಗೋವಿಂದರಾಜುಲು ನಾಯ್ಡು ಪಾತ್ರವನ್ನು ಹಿತೇನ್ ಅದ್ವಾನಿ ನಿರ್ವಹಿಸುತ್ತಿದ್ದಾರೆ.

ನನಗೆ ಮೊದಲಿನಿಂದಲೂ ಒಂದು ಬಯೋಪಿಕ್‌ನಲ್ಲಿ ನಟಿಸಬೇಕು ಎಂಬ ಆಸೆ ಇತ್ತು. ಅದು ಇಷ್ಟು ಬೇಗ ಸಿಗುತ್ತದೆ ಎಂಬ ನಂಬಿಕೆ ಇರಲಿಲ್ಲ. ಸರೋಜಿನಿ ಅವರ ಕಾಲೇಜಿನ ದಿನಗಳು ಮತ್ತು ರಾಜಕೀಯಕ್ಕೆ ಎಂಟ್ರಿ ಕೊಡುವುದಕ್ಕಿಂತ ಮುಂಚಿನ ಪಾತ್ರದಲ್ಲಿ ನಾನಿರುತ್ತೇನೆ ಎಂದು ಸೋನಾಲ್ ಮಾಂಟೆರೊ ತಿಳಿಸಿದರು. ಸರೋಜಿನಿ ಅವರ ಬಗ್ಗೆ ಜನರಿಗೆ ಗೊತ್ತಿಲ್ಲದ ಕಥೆಯನ್ನು ಹೇಳಹೊರಟಿದ್ದೇವೆ. ಆಕೆ ಹೇಗೆ ಸ್ವಾತಂತ್ರ್ಯ ಹೋರಾಟಗಾರ್ತಿ ಯಾದರು, ನ್ಯಾಷನಲ್ ಕಾಂಗ್ರೆಸ್‌ನ ಮೊದಲ ಅಧ್ಯಕ್ಷೆ ಹೇಗಾದರು ಇದೆಲ್ಲವೂ ಚಿತ್ರದಲ್ಲಿರುತ್ತದೆ.

ನಿರ್ದೇಶನದ ಜತೆಗೆ ಸಂಗೀತ ನಿರ್ದೇಶನವನ್ನೂ ಮಾಡುತ್ತಿದ್ದೇನೆ. ನಿಜಕ್ಕೂ ಇದೊಂದು ಸವಾಲಿನ ಕೆಲಸ ಜರೀನಾ ವಹಾಬ್ ಅವರು ಸರೋಜಿನಿ ತಾಯಿಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. 1878ರಿಂದ 1949ರ ಕಾಲಘಟ್ಟದಲ್ಲಿ ನಡೆಯುವ ಈ ಚಿತ್ರಕ್ಕೆ ಜೂನ್ ಮೊದಲ ವಾರದಿಂದ ಬೆಂಗಳೂರು, ಮುಂಬೈ, ಉತ್ತರ ಪ್ರದೇಶದಲ್ಲಿ ಚಿತ್ರೀಕರಣ ನಡೆಯಲಿದೆ. ಕನ್ನಡ ಮತ್ತು ಹಿಂದಿಯಲ್ಲಿ ಏಕಕಾಲಕ್ಕೆ ನಿರ್ಮಾಣವಾಗಿ, ತೆಲುಗು ಮತ್ತು ತಮಿಳಿಗೆ ಡಬ್ಬಿಂಗ್ ಆಗಲಿದೆ ಎಂದು ನಿರ್ದೇಶಕ ವಿನಯ್ ಚಂದ್ರ ಹೇಳಿದರು.

ಸಿನಿಪದಬಂಧ-001

ಆಜ಼ಾದ್ ಜಿ.ಆಚಾರ್ಯ 6361429085



ಹೆಸರು ....

ವಿಳಾಸ ....

ದೂರವಾಣಿ ಸಂಖ್ಯೆ ....

ಎಡದಿಂದ ಬಲಕ್ಕೆ

1. ಈ ಸಿನಿಮಾ ಪೂರ್ಣಚಂದ್ರ ತೇಜಸ್ವಿ ಅವರ ಕೃತಿ 10
7. ದರ್ಶನ್-ನಮಿತಾ ಜೋಡಿಯ ಚಿತ್ರ 2
8. ಶಿವಣ್ಣ ಚಿತ್ರದಲ್ಲಿ ಅರುಂಧತಿ ನಾಗ್ ತಾಯಿ 2
9. ಚಿರಂಜೀವಿ ಶರ್ಜಾ-ಹರಿಪ್ರಿಯ ಜೊತೆಯಾಗಿ ಮಾಡಿದ ವಧೆ 3
11. ಜಗ ಮೆಚ್ಚಿದ-- 2
12. ನಾಗರಹಾವು ಚಿತ್ರದ ನಾಯಕನ ಹೆಸರು 4
14. ರಮೇಶ್ ಭಟ್ ನಿರ್ಮಾಣ ನಿರ್ದೇಶನದಲ್ಲಿ ಪರಮೇಶಿ ಪ್ರೇಮ--- 3
15. ಪುನೀತ್ ರಾಜ್‌ಕುಮಾರ್ ಇತ್ತೀಚಿನ ಚಿತ್ರ 4
16. ಕನ್ನಡ ಚಿತ್ರಕ್ಕೆ ಇಂಗ್ಲೀಷ್ ಹೆಸರು 2
18. ಸಂತ ಶಿಶುನಾಳ ಷರೀಫ್ ಚಿತ್ರದಿಂದ ಚಿತ್ರರಂಗ ಪ್ರವೇಶಿಸಿದ ನಟಿಯ ಪೂರ್ವಾರ್ಧ 3
20. ಏನಾಗಲಿ ಮುಂದೆ-- ನೀ 2
21. ಪುನೀತ್ ಭಾವನಾ ಚಿತ್ರ ತಿರುಗಿದೆ 2
24. ಶಂಕರ್‌ನಾಗ್-ಮಾಸ್ಟರ್ ಮಂಜುನಾಥ್ ಜೋಡಿ ಹೀಗಿದ್ದಾರೆ ನೋಡಿ 10

ಮೇಲಿನಿಂದ ಕೆಳಕ್ಕೆ

1. ವಿಷ್ಣುವರ್ಧನ್-ಶ್ರೀನಾಥ್ ಜೊತೆಯ ಚಿತ್ರ 5
2. ಬೌಲಿಂಗ್ ಶೈಲಿಯ ಯಶ್ ಚಿತ್ರ 2
3. 9 ಗ್ರಹಗಳು ಸೇರಿದ ಚಿತ್ರ ಕೊನೆಯಲ್ಲಿ ದೀರ್ಘವಾಗಿದೆ 4
4. ದರ್ಶನ್ ಚಿತ್ರ ದೀರ್ಘಗೊಂದು ತಿರುಗಿದೆ 2
5. ಆನೆಯೊಂದಿಗೆ ಇಂದ್ರ ಕೂಡಿದಾಗ ಬಂದ ಅಂಬರೀಶ್ ಸಿನಿಮಾ 3
6. ವಿಷ್ಣು-ಮಾಧವಿ ಜೋಡಿಯ ಎಂ.ಪಿ.ಶಂಕರ್ ಚಿತ್ರ 4
9. ಸಹವಾಸ ಮಾಡಿದ ಗೆಂಡೆತಿಮ್ಮ 2
10. ಇದಕ್ಕೆ ಅನಂತನಾಗ್ ಕೊಟ್ಟಿದ್ದು 12 ಸೂತ್ರ ಆದರೂ ತಿರುಗಿದೆ 5
11. ನವಿಲಿನೊಂದಿಗೆ ಬಂದ ಡಾ. ರಾಜ್ ಚಿತ್ರ 3
13. ಭಾಗ್ಯದ ಲಕ್ಷ್ಮಿ ಬಾರಮ್ಮ ಚಿತ್ರದ ನಾಯಕಿ 3
15. ರವಿಚಂದ್ರ-ಪೂನಂ ಧಿಲ್ಲೋನ್ ಸಮರ ಚಿತ್ರ 4
16. -- ಸೇನ್, ಈಕೆ ಯುಗಪುರುಷದ ನಾಯಕಿ 2
17. ಗಣೇಶ್-ಆಶಿಕಾ ರಂಗನಾಥ್ ನಸುನಕ್ಕಿದ ಚಿತ್ರ 5
19. 1955ರ ಕನ್ನಡ ಚಿತ್ರದಲ್ಲಿ ಕಾಳಿದಾಸನನ್ನು ಕರೆದದ್ದು 4
21. - ಚಾಲಾಕಿತನದ ಶ್ರೀನಗರ ಕಿಟ್ಟಿ ಚಿತ್ರ 3
22. -ಜಾಕನ್, ಈಕೆ ದಿ ವಿಲನ್ ಚಿತ್ರದ ನಾಯಕಿ 2
23. ಸುದೀಪ್-ಸೋನಿ ಅಗರ್‌ವಾಲ್ ಜೋಡಿಯ ಚಿತ್ರ 2

ಸಿನಿ ಪದಬಂಧ 446ರ ಸರಿ ಉತ್ತರ

ಕ	ಲಾ	ವಿ	ದ				ನ	ವ	ಗ್ರ	ಹ
ತಾ					ಮ					ತ
ರಿ		ಕ		ಹೃ	ದ	ಯ	ವಂ	ತ		ಮಾ
ವೀ		ವ	ಜ್ರ		ರ್			ವ		ರಿ
ರ		ನ		ಕ		ಬ		ರಿ		ಹೆ
ಸು	ಖ	ಸಂ	ಸಾ	ರ		ಹ	ದ್ದಿ	ನ	ಕ	ಣ್ಣು
ರ		ಕ		ಗ		ಳ		ತೊ		ಕಿ
ಸುಂ		ಲ			ತ		ಕಿ	ಟ್ಟಿ		ಲಾ
ದ		ನ	ಮ್ಮೂ	ರ	ರಾ	ಜ		ಲೂ		ಡಿ
ರಾಂ					ಸು					ಗಂ
ಗಿ	ರಿ	ಕ	ನ್ಯೆ				ತಾ	ಯಿ	ನಾ	ಡು

ವಿಜೇತರು: ಕೆ.ಹೆಚ್.ಭಾಸ್ಕರ್
46, ಎಲ್‌ಐಜಿ, 11ನೇ ಕ್ರಾಸ್, ಗಂಗೋತ್ರಿ ಲೇಔಟ್
ಹುಡ್ಕೋ, ಬೋಗಾದಿ, ಮೈಸೂರು

'ಅಂತು ಇಂತು'
ಬರುತ್ತಿದೆ ಅನಿವಾಸಿ ಕನ್ನಡಿಗರ ಕಥೆಯಾಗಿ...

ಮತ್ತೊಬ್ಬ ಮಹಿಳಾ ನಿರ್ದೇಶಕಿಯಾಗಿ ಕೆನಡಾದ ಬೃಂದಾ ಮುರಳೀಧರ್ ಅವರು ಕನ್ನಡ ಚಿತ್ರೋದ್ಯಮಕ್ಕೆ ಎಂಟ್ರಿ ಕೊಟ್ಟಿದ್ದು, "ಅಂತು ಇಂತು" ಚಿತ್ರಕ್ಕೆ ಆಕ್ಷನ್‌ಕಟ್ ಹೇಳುತ್ತಿದ್ದಾರೆ. ನಟಿ ಜಯಶ್ರೀರಾಜ್, ಬೃಂದಾ ಅವರ ಜೊತೆ ನಿರ್ಮಾಣದಲ್ಲಿ ಸಾಥ್ ನೀಡಲಿದ್ದಾರೆ. ನಟ ದಿಗಂತ್ ಚಿತ್ರದ ನಾಯಕನಾಗಿದ್ದು, ಮಾಧ್ಯಮದ ಮುಂದೆ ಹಾಜರಾದ ಚಿತ್ರತಂಡ ಕೆಲ ಮಾಹಿತಿ ಹಂಚಿಕೊಂಡಿತು.

ನಿರ್ದೇಶಕಿ ಬೃಂದಾ ಮುರಳೀಧರ್ ಮಾತನಾಡಿ, ನಾನು ಮೂಲತಃ ಮೈಸೂರಿನವಳಾಗಿದ್ದು, 25 ವರ್ಷಗಳಿಂದ ಕೆನಡಾದಲ್ಲಿ ನೆಲೆಸಿದ್ದೇನೆ. ಈ ಹಿಂದೆ ನಾಟ್‌ನಾಟ್ ಎಂಬ ಇಂಗ್ಲಿಷ್ ಚಿತ್ರ ನಿರ್ದೇಶಿಸಿದ್ದೆ. ನಮ್ಮ ದೇಶದಿಂದ ವಿದೇಶಕ್ಕೆ ಹೋಗಿ ನೆಲೆಸಿರುವವರ ಕಥೆಯನ್ನು ಈ ಚಿತ್ರದಲ್ಲಿ ಹೇಳಹೊರಟಿದ್ದೇವೆ. ನಾವು ಎಲ್ಲೇ ಇದ್ದರೂ ಹುಟ್ಟಿದೂರಿನ ಮಮತೆ ನಮ್ಮನ್ನು ಸದಾ ಸೆಳೆಯುತ್ತಿರುತ್ತದೆ. ಈ ರೀತಿಯ ಭಾವನಾತ್ಮಕ ಕಥೆ ಚಿತ್ರದಲ್ಲಿದ್ದು, ಸದ್ಯದಲ್ಲೇ ಚಿತ್ರೀಕರಣ ಆರಂಭವಾಗಲಿದೆ. ಚಿತ್ರದಲ್ಲಿ ಗಿರಿಜಾ ಲೋಕೇಶ್, ರವಿಶಂಕರ್‌ಗೌಡ ಪ್ರಮುಖ ಪಾತ್ರದಲ್ಲಿದ್ದಾರೆ. ಕೆನಡಾದ ಸ್ಥಳೀಯ ತಂತ್ರಜ್ಞರು ಇದರಲ್ಲಿ ಕಾರ್ಯನಿರ್ವಹಿಸಲಿದ್ದಾರೆ. ಜಯಶ್ರೀರಾಜ್ ಅವರು ನನ್ನೊಂದಿಗೆ ನಿರ್ಮಾಣದಲ್ಲಿ ಕೈಜೋಡಿಸಿದ್ದಾರೆ ಎಂದರು.

ನಾಯಕ ದಿಗಂತ್ ಮಾತನಾಡುತ್ತ, ನಾನು ಭಾರತದಿಂದ ಕೆನಡಾಕ್ಕೆ ಹೋಗಿರುವ ಹುಡುಗನಾಗಿ ಅಭಿನಯಿಸುತ್ತಿದ್ದೇನೆ. ಕಥೆಯೇ ತುಂಬಾ ಚೆನ್ನಾಗಿದ್ದು, ವೀಕ್ಷಕರ ಮನಸಿಗೆ ನಾಟುವಂತಿದೆ ಎಂದರು. ಉಳಿದಂತೆ ಗಿರಿಜಾಲೋಕೇಶ್, ರವಿಶಂಕರ್‌ಗೌಡ ತಮ್ಮ ಪಾತ್ರಗಳ ಕುರಿತು ಮಾತನಾಡಿದರು.

ಮುಣೋತ್‌ರಿಂದ ನಾಡಗೀತೆಗೆ ಹೊಸ ರೂಪ

ರಾಷ್ಟ್ರಕವಿ ಕುವೆಂಪು ರಚನೆಯ ನಾಡಗೀತೆ ಜಯಭಾರತ ಜನನಿಯ ತನುಜಾತೆ, ಇದನ್ನು ಹಲವಾರು ಗಾಯಕರು ತಮ್ಮದೇ ಶೈಲಿಯಲ್ಲಿ ಹಾಡಿದ್ದಾರೆ. ಕನ್ನಡ ನಾಡು, ನುಡಿಯ ಬಗ್ಗೆ ಅಪಾರ ಗೌರವ, ಅಭಿಮಾನ ಇಟ್ಟುಕೊಂಡಿರುವ ನಟ, ನಿರ್ಮಾಪಕ, ಮಹೇಂದ್ರ ಮುಣೋತ್ ಅವರು ಈ ಗೀತೆಗೆ ಹೊಸರಾಗದ ಜೊತೆಗೆ ಹೊಸದಾದ ದೃಶ್ಯರೂಪ ನೀಡಿದ್ದಾರೆ. ಆ ಹಾಡಿನ ಪ್ರದರ್ಶನ ಹಾಗೂ ಪತ್ರಿಕಾಗೋಷ್ಠಿ ರೇಣುಕಾಂಬ ಸ್ಟುಡಿಯೋದಲ್ಲಿ ನಡೆಯಿತು. ಬಿ.ಪಿ.ಹರಿಹರನ್ ಅವರ ನಿರ್ದೇಶನದ ಈ ಹಾಡಿಗೆ ವಿಜಯಕೃಷ್ಣ ಸಂಗೀತ ಸಂಯೋಜಿಸಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಮಹೇಂದ್ರ ಮುಣೋತ್, ಇತ್ತೀಚೆಗೆ ನಮ್ಮ ನಾಡಗೀತೆಯನ್ನು ಮೊಟಕುಗೊಳಿಸಿರುವುದು ಕೇಳಿ ಮನಸ್ಸಿಗೆ ತುಂಬಾ ನೋವಾಯಿತು. ಕುವೆಂಪು ಅವರಂಥ ಮಹಾನ್ ಕವಿಯ ಸಾಹಿತ್ಯವನ್ನು ಕಡಿತ ಮಾಡಿರುವುದು ಸರಿಯಲ್ಲ. ಹಾಗಾಗಿ ಈ ಗೀತೆಗೆ ಹೊಸರಾಗ ಜೋಡಿಸಿ ಚಿತ್ರೀಕರಣ ಮಾಡಿದ್ದೇವೆ. ನಾನು ರಾಜಸ್ಥಾನದಲ್ಲಿ ಜನಿಸಿದವನಾದರೂ ಕನ್ನಡವೇ ನನ್ನ ಉಸಿರು, ಈ ನೆಲ ನನಗೆ ಎಲ್ಲವನ್ನೂ ಕೊಟ್ಟಿದೆ. ಈ ಹಾಡನ್ನು ಎಲ್ಲರೂ ವೀಕ್ಷಿಸಿ ಕನ್ನಡವನ್ನು ಬೆಳೆಸಿ ಎಂದು ಕೇಳಿಕೊಂಡರು.

ನಂತರ ಸಂಗೀತ ನಿರ್ದೇಶಕ ವಿಜಯಕೃಷ್ಣ ಮಾತನಾಡಿ,



ಇದನ್ನು ಮೊದಲು ಎಸ್.ಪಿ.ಬಿ.ಅವರಕೈಲಿ ಹಾಡಿಸಬೇಕು ಎಂಬ ಪ್ಲಾನಿತ್ತು. ಹಾಡುಕೇಳಿ ಅವರು ಒಪ್ಪಿದ್ದರು ಕೂಡ, ಆದರದು ಸಾಧ್ಯವಾಗಲಿಲ್ಲ, ಈ ಹೊಸಟ್ಯೂನ್ ಎಲ್ಲರಿಗೂ ಇಷ್ಟವಾಗುತ್ತೆ ಎಂಬ ನಂಬಿಕೆಯಿದೆ ಎಂದರು. ನಿರ್ದೇಶಕ ಹರಿಹರನ್ ಮಾತನಾಡಿ ಈ ಗೀತೆಗೆ ಚಿಕ್ಕಮಗಳೂರು ಹಾಗೂ ಬೆಂಗಳೂರು ಸುತ್ತಮುತ್ತಲ ಪ್ರದೇಶಗಳಲ್ಲಿ ಚಿತ್ರೀಕರಿಸಿದ್ದೇವೆ. ವಿಶೇಷವಾಗಿ ಈ ನಾಡಗೀತೆಯನ್ನು ಎರಡು ಶೈಲಿಯಲ್ಲಿ ಚಿತ್ರೀಕರಣ ಮಾಡಿದ್ದೇವೆ ಎಂದರು. ಒಟ್ಟಿನಲ್ಲಿ ಸಂಗೀತಪ್ರೇಮಿಗಳು ಕುವೆಂಪು ರಚಿಸಿರುವ ನಾಡಗೀತೆಯನ್ನು ಮತ್ತೊಂದು ಶೈಲಿಯಲ್ಲಿ ವೀಕ್ಷಿಸಬಹುದಾಗಿದೆ.

ಮೈಸೂರು ಮಿತ್ರ

ಬೆಟ್ಟದಪುರ ಸುತ್ತಮುತ್ತ ಭಾರೀ ಮಳೆ–ಗಾಳಿ

ಗಾಳಿಗೆ ಹಾರಿದ ಮನೆಗಳ ಹೆಂಚುಗಳು, ಶೀಟುಗಳು; ಹಲವು ಕಡೆ ವಿದ್ಯುತ್ ಕಂಬಗಳು, ಪರಿವರ್ತಕಗಳು, ಮರಗಳು ನೆಲಸಮ

● ಜನಜೀವನ ಅಸ್ತವ್ಯಸ್ತ ● ಬಾಳೆ, ದವಸ ಧಾನ್ಯಗಳು ನಾಶ ● ಕಂದಾಯ ಅಧಿಕಾರಿಗಳಿಂದ ಮಹಜರು





ಬೆಟ್ಟದಪುರ, ಮಾ. 31 (ಶಿವಬೇಶ್)– ಬೆಟ್ಟದಪುರ ಸುತ್ತ-ಮುತ್ತ ಬುಧವಾರ ರಾತ್ರಿ ಸುರಿದ ಭಾರಿ ಮಳೆ ಮತ್ತು ಗಾಳಿಯಿಂದ ಜನಜೀವನ ಅಸ್ತವ್ಯಸ್ತಗೊಂಡಿದ್ದು, ಅಪಾರ ಪ್ರಮಾಣದ ಆಸ್ತಿ-ಪಾಸ್ತಿ ನಷ್ಟವಾಗಿದೆ.

ಬುಧವಾರ ರಾತ್ರಿ ಜೋರು ಗಾಳಿಯೊಂದಿಗೆ ಶುರುವಾದ ಮಳೆಯಿಂದ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ವ್ಯಾಪ್ತಿಯ ದೊಡ್ಡೇಗೌಡನಕೊಪ್ಪಲು ಗ್ರಾಮದಲ್ಲಿ ಸುಮಾರು ಹತ್ತಕ್ಕೂ ಹೆಚ್ಚು ಮನೆಗಳ ಹೆಂಚು ಮತ್ತು ಶೀಟ್‌ಗಳು ಹಾರಿ ಹೋಗಿ ಮನೆಯಲ್ಲಿದ್ದವರು ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಇಡೀ ರಾತ್ರಿ ಕಳೆಯಬೇಕಾಯಿತು. ಕೆಲವು ಮನೆಗಳ ಶೀಟು ಮತ್ತು ಹೆಂಚುಗಳು ಭಾರೀ ಗಾಳಿಗೆ ಸಂಪೂರ್ಣವಾಗಿ ಹಾರಿ ಹೋಗಿದ್ದು, ಮಲಗಲು ಜಾಗವಿಲ್ಲದೆ ಪರದಾಡಿದರಲ್ಲದೆ ಮನೆಯಲ್ಲಿದ್ದ ಆಹಾರ ಧಾನ್ಯಗಳು ನೀರಿನಲ್ಲಿ ನೆನೆದು ಹಾಳಾಗಿವೆ.

ದೊಡ್ಡೇಗೌಡನಕೊಪ್ಪಲು ಗ್ರಾಮದ ಪ್ರೇಮಮ್ಮ ಎಂಬುವರ ಮನೆ ಸಂಪೂರ್ಣ ನಾಶವಾಗಿದ್ದು, ಪರಿಹಾರಕ್ಕಾಗಿ ಮನವಿ ಮಾಡಿದ್ದಾರೆ. ಬೆಟ್ಟದತುಂಗದ ಸಣ್ಣಪ್ಪ ಎಂಬುವರ ಮನೆಯ ಮೇಲ್ಛಾವಣಿ ಹಾರಿ ಹೋಗಿದ್ದು, ಇದರಿಂದ ಅವರು ಬೀದಿಯಲ್ಲಿ ವಾಸ ಮಾಡುವಂತಾಗಿದೆ. ಅಲ್ಲದೆ ಬೆಟ್ಟದಪುರ ಗ್ರಾಮದ ಶಂಕರಪ್ಪನವರ ತೋಟದಲ್ಲಿ ಬಾಳೆ ಗಿಡಗಳು ಸಂಪೂರ್ಣ ನೆಲಕಚ್ಚಿದ್ದು, ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗಿದೆ.

ಬೆಟ್ಟದಪುರದ ವಿದ್ಯುತ್ ಉಪ ಕೇಂದ್ರ ವ್ಯಾಪ್ತಿಯ ದೊಡ್ಡೇಗೌಡಕೊಪ್ಪಲು, ಅಂಬಲಾರೆ, ಹರದೂರು ಸೇರಿದಂತೆ ವಿವಿಧೆಡೆ 330ಕ್ಕೂ ಹೆಚ್ಚು ವಿದ್ಯುತ್ ಕಂಬಗಳು, ಹತ್ತಕ್ಕೂ ಹೆಚ್ಚು ವಿದ್ಯುತ್ ಪರಿವರ್ತಕಗಳು ನೆಲಕ್ಕುರುಳಿವೆ. ಇದರಿಂದ ಬೆಟ್ಟದಪುರ ಸುತ್ತ-ಮುತ್ತಲಿನ ಗ್ರಾಮಗಳು ಕಗ್ಗತ್ತಲಿನಲ್ಲಿ ಮುಳುಗಿವೆ. ಅಲ್ಲದೆ ಬೆಟ್ಟದಪುರ-ಕೆ.ಆರ್.ನಗರ ಮುಖ್ಯ ರಸ್ತೆಯ ನಾಗನಹಳ್ಳಿ ಗ್ರಾಮದ ಬಳಿ ದೊಡ್ಡ ಆಲದಮರವೊಂದು ರಸ್ತೆಗೆ ಬಿದ್ದಿದ್ದು, ಅದೃಷ್ಟವಶಾತ್ ಯಾವುದೇ ಅನಾಹುತ ಸಂಭವಿಸಿಲ್ಲ. ಇದೇ ರೀತಿ ಹಲವಾರು ಕಡೆ ಮರಗಳು ನೆಲಕ್ಕುರುಳಿವೆ. ಭಾರಿ ಮಳೆ ಗಾಳಿಗೆ ಜನರ ಜೀವನ ಸಂಪೂರ್ಣವಾಗಿ ಅಸ್ತವ್ಯಸ್ತವಾಗಿದೆ.

ವಿಷಯ ತಿಳಿದ ಕೂಡಲೇ ಸ್ಥಳಕ್ಕೆ ಮೈಮುಲ್ ಅಧ್ಯಕ್ಷ ಪಿ.ಎಂ. ಪ್ರಸನ್ನ ಅವರು ಭೇಟಿ ನೀಡಿ ನೊಂದವರಿಗೆ ಸಾಂತ್ವನ ಹೇಳಿದರು. ಕಂದಾಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಮಹಜರು ನಡೆಸಿದ್ದಾರೆ. ಇದೇ ಮೊದಲ ಬಾರಿಗೆ ಇಂತಹ ಮಳೆ ಸುರಿದಿದ್ದು, ಇದರಿಂದ ಹಲವಾರು ಜನರ ಜೀವನ ಕಷ್ಟಕ್ಕೆ ಸಿಲುಕಿದೆ. ಗ್ರಾಮಕ್ಕೆ ಗ್ರಾಪಂ ಮಾಜಿ ಉಪಾಧ್ಯಕ್ಷ ಮಧು, ಗ್ರಾಪಂ ಮಾಜಿ ಸದಸ್ಯ ರಮೇಶ್, ಬೆಟ್ಟದತುಂಗ ಗ್ರಾಪಂ ಅಧ್ಯಕ್ಷ ದೇವರಾಜ್, ಆದಿ ಲೋಕೇಶ್, ಮಂಜುಳಾ, ರವಿ, ಪಿಡಿಓ ಮಹದೇವ್, ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿ ಚೈತ್ರಾ ಇತರ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ.

ಕರೋಹಟ್ಟಿ ಗ್ರಾಪಂಗೆ ಕೆ.ಬಿ.ಜಗದೀಶ್ ಉಪಾಧ್ಯಕ್ಷ



ತಿ.ನರಸೀಪುರ, ಮಾ.31(ಎಸ್‌ಕೆ)– ತಾಲೂಕಿನ ಕರೋಹಟ್ಟಿ ಗ್ರಾ.ಪಂ. ಉಪಾಧ್ಯಕ್ಷರಾಗಿ ಕೇತಹಳ್ಳಿ ಗ್ರಾಮದ ಕೆ.ಬಿ.ಜಗದೀಶ್ ಬುಧವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕರೋಹಟ್ಟಿ ಗ್ರಾ.ಪಂ.ಸಭಾಂಗಣದಲ್ಲಿ ಉಪಾಧ್ಯಕ್ಷರ ಆಯ್ಕೆ ಸಂಬಂಧ ಕರೆಯಲಾಗಿದ್ದ ಚುನಾವಣಾ ವಿಶೇಷ ಸಭೆಯಲ್ಲಿ ಕೆ.ಬಿ.ಜಗದೀಶ್ ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ ಕಾವೇರಿ ನೀರಾವರಿ ನಿಗಮದ ಸುಹಾಸ್ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ಆಂತರಿಕ ಒಪ್ಪಂದದಂತೆ ಒಂದು ವರ್ಷಗಳ ಅವಧಿಯ ಅಧಿಕಾರ ಪೂರೈಸಿದ ಪ್ರಭು ಉಪಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿ, ತೆರವಾಗಿದ್ದ ಸ್ಥಾನಕ್ಕೆ ಚುನಾವಣೆ ನಡೆಸಲಾಯಿತು. ಗ್ರಾಪಂನ ಒಟ್ಟು 19 ಸದಸ್ಯರ ಪೈಕಿ ಎಸ್.ಎಲ್.ಜಯಶ್ರೀ, ಪುಟ್ಟಸ್ವಾಮಿ, ಕೆ.ಎನ್. ನಾಗರಾಜು, ಮಂಜುಳ, ನಂದಿನಿ, ರೇವಣ್ಣ, ಸುರೇಶ್, ಪುಟ್ಟಬಸಮ್ಮ, ಸುಶೀಲಮ್ಮ, ನಾಗರಾಜು, ಮಂಜು ಚುನಾಣೆ ಸಭೆಗೆ ಹಾಜರಾಗಿ ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು.

ಸದಸ್ಯರಾದ ಸವಿತಾ, ದಿವ್ಯ, ಪ್ರಕಾಶ್, ಸಿದ್ದಮ್ಮ ಹಾಗೂ ಗೋವಿಂದರಾಜು ಸಭೆಗೆ ಗೈರಾಗಿದ್ದರು. ಉಪಾಧ್ಯಕ್ಷರ ಆಯ್ಕೆ ಘೋಷಣೆಯಾಗುತ್ತಿದ್ದಂತೆ ಪಂಚಾಯ್ತಿ ಮುಂಭಾಗ ಜಮಾಯಿಸಿದ್ದ ಕೆ.ಬಿ.ಜಗದೀಶ್ ಬೆಂಬಲಿಗರು ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಮಾಜಿ ಅಧ್ಯಕ್ಷ ರೇವಣ್ಣ, ಬಿಜೆಪಿ ರಾಜ್ಯ ಕಾರ್ಯಕಾರಣಿ ಸದಸ್ಯ ಕರೋಹಟ್ಟಿ ಮಹದೇವಯ್ಯ, ಪ್ರಧಾನ ಕಾರ್ಯದರ್ಶಿ ಬಸವರಾಜು, ತೊಂಟೇಶ್, ಸಿದ್ದರಾಜು, ಕೆ.ಬಿ. ಶಿವಣ್ಣ, ಕೃಷ್ಣ ನಾಯ್ಕ, ಸುಂದರ ನಾಯ್ಕ, ಮಹದೇವನಾಯ್ಕ, ಗುರುಲಿಂಗಶೆಟ್ಟಿ, ವಕೀಲ ಪರಮೇಶ್, ಗ್ರಾಪಂ. ಕಾರ್ಯದರ್ಶಿ ಎಂ.ಮಹದೇವ, ಪಿಡಿಓ ಕೆ.ಎಸ್.ಲಿಂಗರಾಜು, ಬಿಲ್ ಕಲೆಕ್ಟರ್ ಎಸ್.ರಾಜು, ಶೈಲ ಮತ್ತಿತರರಿದ್ದರು.

ಬೈಕ್‌ಗೆ ಅಪರಿಚಿತ ವಾಹನ ಡಿಕ್ಕಿ: ಸವಾರ ಸಾವು

ನಂಜನಗೂಡು, ಮಾ.31– ಬೈಕ್‌ಗೆ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಮೈಸೂರು–ಊಟಿ ರಾಷ್ಟ್ರೀಯ ಹೆದ್ದಾರಿಯ ತಾಲೂಕಿನ ಮುದ್ದಹಳ್ಳಿ ಗೇಟ್ ಬಳಿ ನಡೆದಿದೆ. ಗುಂಡ್ಲುಪೇಟೆ ತಾಲೂಕಿನ ರಂಗೂಪುರ ನಿವಾಸಿ ಅನಿಲ್ ಕುಮಾರ್(29) ಸಾವನ್ನಪ್ಪಿದವರು. ಈತ ಕಾರ್ಯನಿಮಿತ್ತ ಗುರುವಾರ ಮುಂಜಾನೆ ತನ್ನ ಬೈಕ್‌ನಲ್ಲಿ ಬೇಗೂರಿನಿಂದ ಮೈಸೂರಿಗೆ ತೆರಳುತ್ತಿದ್ದರು. ಈ ವೇಳೆ ತಾಲೂಕಿನ ಮುದ್ದಹಳ್ಳಿ ಗೇಟ್ ಬಳಿ ಬಂದ ಅಪರಿಚಿತ ವಾಹನ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ತೀವ್ರ ಗಾಯಗೊಂಡ ಅನಿಲ್ ಕುಮಾರ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ದೂರು ದಾಖಲಿಸಿಕೊಂಡಿರುವ ಎಸ್‌ಐ ಲೋಹಿತ್ ಸ್ಥಳಕ್ಕೆ ಭೇಟಿ ನೀಡಿ ಮಹಜರು ನಡೆಸಿ ತನಿಖೆ ಮುಂದುವರೆಸಿದ್ದಾರೆ.

ಬೈಲಕುಪ್ಪೆಯಲ್ಲಿ ಭಾರೀ ಮಳೆ: ಅಪಾರ ನಷ್ಟ

ಬೈಲಕುಪ್ಪೆ, ಮಾ. 31(ರಾಜೇಶ್)–ಬುಧವಾರ ರಾತ್ರಿ ಸುರಿದ ಭಾರೀ ಮಳೆ ಮತ್ತು ಗಾಳಿಗೆ ಮನೆ ಜಖಂಗೊಂಡಿದ್ದು, ಆಹಾರ ಧಾನ್ಯ ನೀರು ಪಾಲಾಗಿ, ಮರಗಳು ನೆಲಸಮವಾಗಿ



ಲಕ್ಷಾಂತರ ರೂ ನಷ್ಟವಾಗಿದೆ. ಪಿರಿಯಾಪಟ್ಟಣ ತಾಲೂಕಿನ, ಚಿಟ್ಟನಹಳ್ಳಿ ಗ್ರಾಮದ ಸರ್ವೆ ನಂಬರ್ 46ರ ಜಮೀನಿನ ಎಚ್.ಡಿ. ರಮೇಶ್ ಅವರ ಮನೆ ಒಳಗೆ ಇಡಲಾಗಿದ್ದ ಭತ್ತ ಆಹಾರ ಪದಾರ್ಥ ಸೇರಿದಂತೆ ಇನ್ನಿತರ ವಸ್ತುಗಳು ಮಳೆ ನೀರಿನಲ್ಲಿ ಕೊಚ್ಚಿ ಹೋಗಿದೆ. ಬೆಳೆದು ನಿಂತ ಸಿಲ್ವರ್ ಮರಗಳು ನೆಲಕ್ಕುರುಳಿವೆ. ಮನೆಯ ಮೇಲ್ಛಾವಣಿ ಸಂಪೂರ್ಣ ನಾಶವಾಗಿದೆ. ತಾಲೂಕು ತಹಸೀಲ್ದಾರ್ ಕೆ.ಚಂದ್ರಮೌಳಿ ಅವರ ಸೂಚನೆ ಮೇರೆಗೆ, ಕಂದಾಯ ಇಲಾಖೆಯ ಇನ್ಸ್‌ಪೆಕ್ಟರ್ ಪಾಂಡುರಂಗ ಮತ್ತು ಗ್ರಾಮ ಲೆಕ್ಕಾಧಿಕಾರಿ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಉಚಿತ ತಪಾಸಣಾ ಶಿಬಿರ

ಮೈಸೂರು, ಮಾ.31– ಶ್ರೀ ಸಿದ್ದಗಂಗಾ ಶ್ರೀಗಳ 115ನೇ ಜನ್ಮ ದಿನೋತ್ಸವ ಅಂಗವಾಗಿ ಮೈಸೂರಿನ ವಾಸನ್ ಐ ಕೇರ್ ಆಸ್ಪತ್ರೆ ಆಶ್ರಯದಲ್ಲಿ ಏ.1 ರಂದು ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 2 ರವರೆಗೆ ಹೂಟಗಳ್ಳಿಯಲ್ಲಿರುವ ಪಂಚಾಯತ್ ಗ್ರಾಮಾಭಿವೃದ್ಧಿ ಮತ್ತು ರೈತರ ಸೇವಾ ಸಮಿತಿಯಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದೆ.

ಸಾಲಬಾಧೆ: ವಿಷ ಸೇವಿಸಿ ರೈತ ಆತ್ಮಹತ್ಯೆ

ಹುಣಸೂರು, ಮಾ.31(ಕೆಕೆ)– ಸಾಲಬಾಧೆ ತಾಳಲಾರದೇ ರೈತರೊಬ್ಬರು ವಿಷದ ಮಾತ್ರೆ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಬಿಳಿಕೆರೆಯಲ್ಲಿ ನಡೆದಿದೆ.



ಗ್ರಾಮದ ನಿವಾಸಿ ಶೇಖರೇಗೌಡ (35) ಆತ್ಮಹತ್ಯೆ ಮಾಡಿಕೊಂಡವರು. ಈತ ಕೃಷಿ ಚಟುವಟಿಕೆಗಾಗಿ ಹುಣಸೂರು ಐಒಬಿ ಬ್ಯಾಂಕ್‌ನಿಂದ ಟ್ರಾಕ್ಟರ್ ಖರೀದಿಸಲು 10 ಲಕ್ಷ ರೂ., ಚಿನ್ನಾಭರಣ ಸಾಲ 3 ಲಕ್ಷ ರೂ., ಗಾವಡಗೆರೆ ವಿಎಸ್‌ಎಸ್‌ಎನ್ ಬ್ಯಾಂಕ್‌ನಿಂದ 3.5 ರೂ. ಸಾಲ ಮಾಡಿದ್ದರು. ಅಲ್ಲದೇ ಕಳೆದ 3 ವರ್ಷಗಳಿಂದ ಸರಿಯಾಗಿ ಮಳೆಯಾಗದ ಪರಿಣಾಮ ಶುಂಠಿ ಮತ್ತು ತಂಬಾಕು ಬೆಳೆ ಕೈ ಸೇರಿರಲಿಲ್ಲ. ಮಾಡಿದ ಸಾಲ ತೀರಿಸಲು ಸಾಧ್ಯವಾಗದೇ ಮನನೊಂದಿದ್ದ ಅವರು ಬುಧವಾರ ಮಧ್ಯಾಹ್ನ ತಮ್ಮ ಜಮೀನಿನಲ್ಲಿ ಕೃಷಿಗೆ ಬಳಸುವ ವಿಷದ ಮಾತ್ರೆಗಳನ್ನು ನುಂಗಿ ಆತ್ಮಹತ್ಯೆಗೆ ಯತ್ನಿಸಿದ್ದರು. ಈ ವೇಳೆ ಇವರನ್ನು ತಕ್ಷಣ ಕೆ.ಆರ್.ನಗರ ಆಸ್ಪತ್ರೆಗೆ ಕರೆದೊಯ್ದು ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಕೆಆರ್. ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಅವರು ಸಾವನ್ನಪ್ಪಿದ್ದಾರೆ. ಈ ಸಂಬಂಧ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಗಿನವಾಳು ಗ್ರಾಪಂ ಅಧ್ಯಕ್ಷರಾಗಿ ರಂಗರಾಮು ಆಯ್ಕೆ



ಮಲ್ಕುಂಡಿ, ಮಾ.31 (ಚನ್ನಪ್ಪ)– ನಂಜನಗೂಡು ತಾಲೂಕಿನ ಹಗಿನವಾಳು ಗ್ರಾಪಂ ಅಧ್ಯಕ್ಷರಾಗಿ ಬಿಜೆಪಿ ಬೆಂಬಲಿತ ಅಭ್ಯರ್ಥಿ ರಂಗರಾಮು ಆಯ್ಕೆಯಾಗಿದ್ದಾರೆ.

ಆಂತರಿಕ ಒಪ್ಪಂದದಂತೆ ಒಂದೂವರೆ ವರ್ಷ ಅಧಿಕಾರ ಪೂರೈಸಿದ ಈ ಹಿಂದಿನ ಅಧ್ಯಕ್ಷ ಹೆಚ್.ಎಂ. ಕುಮಾರ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಅವರಿಂದ ತೆರವಾದ ಸ್ಥಾನಕ್ಕೆ ಇಲ್ಲಿನ ಗ್ರಾಪಂ ಸಭಾಂಗಣದಲ್ಲಿ ನಡೆದ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ರಂಗರಾಮು, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಚನ್ನಬಸಪ್ಪ ನಾಮಪತ್ರ ಸಲ್ಲಿಸಿದರು. ನಂತರ ನಡೆದ ಚುನಾವಣೆಯಲ್ಲಿ ಒಟ್ಟು 19 ಮಂದಿ ಮತ ಚಲಾಯಿಸಿದ್ದರು. ಈ ಪೈಕಿ 15 ಮತ ಪಡೆದು ರಂಗರಾಮು ಜಯ ಗಳಿಸಿದರೇ, 4 ಮತ ಪಡೆದ ಚನ್ನಬಸಪ್ಪ ಪರಾಭವಗೊಂಡರು. ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ ನೀರಾವರಿ ಇಲಾಖೆಯ ಕುಮಾರಸ್ವಾಮಿ ನೂತನ ಅಧ್ಯಕ್ಷರ ಆಯ್ಕೆಯನ್ನು ಘೋಷಿಸಿದರು.

ನೂತನ ಅಧ್ಯಕ್ಷ ರಂಗರಾಮು ಮಾತನಾಡಿ, ಎಲ್ಲಾ ಸದಸ್ಯರ ಸಹಕಾರದಿಂದ ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡುತ್ತೇನೆ. ಶಾಸಕ ಬಿ.ಹರ್ಷವರ್ಧನ್ ಅವರ ಅಭಿವೃದ್ಧಿ ಕಾರ್ಯ ಮೆಚ್ಚಿ ನನ್ನನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಾರೆ. ಪಂಚಾಯಿತಿಯನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದರು. ಈ ವೇಳೆ ನೂತನ ಅಧ್ಯಕ್ಷರನ್ನು ಗ್ರಾಪಂ ಸದಸ್ಯರು ಹಾಗೂ ಗ್ರಾಮದ ಮುಖಂಡರು ಸನ್ಮಾನಿಸಿದರು.

ಈ ವೇಳೆ ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ರಾಜ್ಯ ಎಸ್ಟಿ ಮೋರ್ಚಾ ಉಪಾಧ್ಯಕ್ಷ ಚಿಕ್ಕರಂಗನಾಯಕ, ಗ್ರಾಪಂ ಮಾಜಿ ಅಧ್ಯಕ್ಷ ಹೆಚ್.ಎಂ.ಕುಮಾರ್, ಬಿಜೆಪಿ ತಾಲೂಕು ಪ್ರಧಾನ ಕಾರ್ಯದರ್ಶಿ ಪುಟ್ಟಸ್ವಾಮಿ, ಗ್ರಾಪಂ ಉಪಾಧ್ಯಕ್ಷೆ ಸಾಕಮ್ಮ, ಮುಖಂಡರಾದ ಶ್ಯಾಮ್ ಪಾಟೀಲ್, ಮಹೇಶ್ ಬಾಬು, ನಂದೀಶ್, ಗ್ರಾಪಂ ಸದಸ್ಯರಾದ ಮಹದೇವಸ್ವಾಮಿ, ಮಂಜುಳ, ಶಶಿಕಲಾ, ರವಿ ಸೇರಿದಂತೆ ಹಾಜರಿದ್ದರು.

ಪಕ್ಷ ಸಂಘಟನೆ ಯುವ ಪಡೆ ಜವಾಬ್ದಾರಿ: ಸುನೀಲ್‌ಬೋಸ್



ತಿ.ನರಸೀಪುರ, ಮಾ.31(ಎಸ್‌ಕೆ)– ಮುಂಬರುವ ವಿಧಾನಸಭಾ ಚುನಾವಣೆಗೆ ಕ್ಷೇತ್ರದಲ್ಲಿ ಕಾಂಗ್ರೆಸ್ ಸಂಘಟಿಸುವ ಮಹತ್ತರ ಜವಾಬ್ದಾರಿ ಯುವ ಪಡೆ ಮೇಲಿದೆ ಎಂದು ವಸತಿ ಯೋಜನೆ ಜಾಗೃತಿ ಸಮಿತಿ ಮಾಜಿ ಅಧ್ಯಕ್ಷ ಸುನೀಲ್ ಬೋಸ್ ಹೇಳಿದರು.

ತಾಲೂಕಿನ ಹೆಮ್ಮಿಗೆ ಗ್ರಾಮದಲ್ಲಿ ನಡೆಯುತ್ತಿರುವ ಗ್ರಾಮದೇವತೆ ಮಾರಮ್ಮದೇವಿ ಹಬ್ಬದಲ್ಲಿ ಭಾಗವಹಿಸಿ ಹಾಲು ಉತ್ಪಾದಕರ ಸಹಕಾರ ಸಂಘದ ಕಾರ್ಯದರ್ಶಿ ಸೋಮಣ್ಣ ಮತ್ತು ಗ್ರಾಮಸ್ಥರಿಂದ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು. ಹೆಮ್ಮಿಗೆ ಗ್ರಾಮ ಕಾಂಗ್ರೆಸ್ ಭದ್ರಕೋಟೆಯಂತಿತ್ತು. ಆದರೆ ಕಳೆದ ಬಾರಿ ನಡೆದ ಚುನಾವಣೆಯಲ್ಲಿ ಗೊಂದಲಕ್ಕೊಳಗಾದ ಗ್ರಾಮಸ್ಥರು ಕಾಂಗ್ರೆಸ್ ಕೈ ಹಿಡಿಯಲಿಲ್ಲ. ಆದರೀಗ ಗ್ರಾಮಸ್ಥರು ತಾವು ಮಾಡಿದ ಸಣ್ಣ ವ್ಯತ್ಯಾಸದಿಂದ ಇಂದು ಅಭಿವೃದ್ಧಿಯಿಂದ ವಂಚಿತರಾಗಿ ಪರಿತಪಿಸುತ್ತಿರುವುದು ಅವರದ್ದೇ ಗಮನಕ್ಕೆ ಬಂದಿದೆ. ಗ್ರಾಮದಲ್ಲಿ ಹಿಂದುಳಿದ ವರ್ಗದ ಜನಾಂಗದವರೇ ಹೆಚ್ಚು ವಾಸಿಸುತ್ತಿದ್ದು, ಅವರ ಆರ್ಥಿಕ ಅಭಿವೃದ್ಧಿಗೆ ಪಕ್ಷ ಸಿದ್ಧವಿದೆ. ಕಳೆದ ಬಾರಿ ಮಾಡಿದ ತಪ್ಪುಗಳು ಮರುಕಳಿಸದಂತೆ ಪಕ್ಷದ ಸಂಘಟನೆ ಮಾಡುವ ಮಹತ್ತರ ಜವಾಬ್ದಾರಿಯನ್ನು ಯುವಕರು ವಹಿಸಿಕೊಳ್ಳಬೇಕು. ವಿಧಾನಸಭೆ ಚುನಾವಣೆಗೆ ಕೇವಲ ಒಂದು ವರ್ಷವಷ್ಟೇ ಉಳಿದಿದ್ದು, ಈಗಿನಿಂದಲೇ ಸಂಘಟನೆ ಮೂಲಕ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವು ಸುಲಭವಾಗಿ ಜಯ ಗಳಿಸಲು ಪೂರಕ ವಾತಾವರಣ ನಿರ್ಮಿಸುವಂತೆ ಯುವಕರಿಗೆ ಕರೆ ನೀಡಿದರು.

ಹಾಲಿನ ಡೈರಿ ಕಾರ್ಯದರ್ಶಿ ಸೋಮಣ್ಣ ಮಾತನಾಡಿ, ಗ್ರಾಮದಲ್ಲಿ ನಡೆಯುವ ಚಿನ್ನಮ್ಮನ ಹಬ್ಬವನ್ನು ಕಟ್ಟೇಪುರ, ಹೆಮ್ಮಿಗೆ, ಜಾಲಹಳ್ಳಿ, ಹಳೆ ಹೆಮ್ಮಿಗೆ ಗ್ರಾಮಸ್ಥರು ಒಟ್ಟಾಗಿ ಸೇರಿ ಆಚರಿಸುತ್ತಿದ್ದು, ಈಗ ಕಾರಣಾಂತರದಿಂದ ಹಬ್ಬ ಜರುಗಿ 40 ವರ್ಷಗಳೇ ಕಳೆದು ಹೋಗಿದೆ. ಮುಂದಿನ ವರ್ಷ ಅದ್ದೂರಿಯಾಗಿ ನಡೆಸಿಕೊಡಲು ಸಹಕಾರ ನೀಡುವಂತೆ ಮನವಿ ಮಾಡಿದರು. ಗ್ರಾಪಂ ಮಾಜಿ ಅಧ್ಯಕ್ಷ ಶೇಷಾದ್ರಿ ಯುವ ಮುಖಂಡರಾದ ರವಿಚಂದ್ರ, ಚಿನ್ನಸ್ವಾಮಿ, ಹೆಚ್.ಸಿ.ಹೆಮ್ಮಯ್ಯ, ಚಿಕ್ಕ ವೆಂಕಟಯ್ಯ, ಮಹದೇವ, ಕರಿಯಪ್ಪ, ರಾಮಚಂದ್ರಣ್ಣ ಮತ್ತಿತರರಿದ್ದರು.

ಕೆ.ಜಿ.ಕೊಪ್ಪಲು ಶ್ರೀ ಏಳು ಮಲೆ ಮಹದೇಶ್ವರ ಸ್ವಾಮಿಯ ಹುಲಿವಾಹನ ಮೆರವಣಿಗೆ

ಮೈಸೂರು, ಮಾ.31(ಎಂಕೆ)– ನಗರದ ಕೆ.ಜಿ.



ಕೊಪ್ಪಲಿನಲ್ಲಿರುವ ಶ್ರೀ ಏಳು ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಾಳೆ(ಏ.1) ಸಂಜೆ 6 ಗಂಟೆಗೆ 'ಶ್ರೀ ಏಳು ಮಲೆ ಮಹದೇಶ್ವರ ಸ್ವಾಮಿಯ ಹುಲಿವಾಹನ' ಮೆರವಣಿಗೆ, ನಂತರ ಅನ್ನ ಸಂತರ್ಪಣೆ ಇರಲಿದೆ. ಹರಿಕಥೆ ಹಾಗೂ ಮೈಸೂರು ಮಿಮಿಕ್ರಿ ಕುಮಾರ್ ಮತ್ತು ತಂಡದವರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

ಹುಣಸೂರು ನಗರಸಭೆ ನೂತನ ಅಧ್ಯಕ್ಷೆ ಸಮೀನಾ ಪರ್ವೀನ್



ಹುಣಸೂರು, ಮಾ.31(ಕೆಕೆ)– ಇಲ್ಲಿನ ನಗರಸಭೆ ನೂತನ ಅಧ್ಯಕ್ಷೆಯಾಗಿ 9ನೇ ವಾರ್ಡ್ ಸದಸ್ಯೆ ಸಮೀನಾ ಪರ್ವೀನ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷೆ ಸೌರಭ ಅವರಿಂದ ತೆರವಾದ ಸ್ಥಾನಕ್ಕೆ ಗುರುವಾರ ನಗರಸಭೆ ಸಭಾಂಗಣದಲ್ಲಿ ಚುನಾವಣೆ ನಡೆಯಿತು. ಈ ವೇಳೆ ಅಧ್ಯಕ್ಷ ಸ್ಥಾನಕ್ಕೆ ಸಮೀನಾ ಪರ್ವೀನ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ ಉಪವಿಭಾಗಾಧಿಕಾರಿ ವರ್ಣಿತ್ ನೇಗಿ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ಚುನಾವಣಾ ಪ್ರಕ್ರಿಯೆಯಲ್ಲಿ ಉಪಾಧ್ಯಕ್ಷ ದೇವನಾಯ್ಕ, ಅನುಷಾ, ಭವ್ಯ, ಸ್ವಾಮಿಗೌಡ, ಸೌರಭ, ಮನು.ಎಸ್, ಹೆಚ್.ಎನ್.ರಮೇಶ, ಜಬಿಉಲ್ಲಾಖಾನ್, ರಂಜಿತಾ.ಪಿ, ಗೀತಾ, ಮಂಜು, ಶ್ವೇತಾ ಹಾಗೂ ಪ್ರಿಯಾಂಕ ಥಾಮಸ್ ಸೇರಿದಂತೆ 14 ಸದಸ್ಯರು, ಎಸ್‌ಡಿಪಿಐನ ಸಮೀನಾ ಭಾನು, ಸಯ್ಯಾದ್ ಯೂನಸ್ ಹಾಗೂ ಪಕ್ಷೇತರ ಸದಸ್ಯರಾದ ರಿಜ್ವಾನ್, ಹೆಚ್.ಪಿ.ಸತೀಶ್, ಮಾಲೀಕ್ ಪಾಷ, ಆಶಾ ಸೇರಿದಂತೆ ಒಟ್ಟು 20 ಸದಸ್ಯರು ಮತ್ತು ಶಾಸಕರು ಉಪಸ್ಥಿತರಿದ್ದರು.

ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ನಗರಸಭೆಯಲ್ಲಿ ಅಧ್ಯಕ್ಷರಾಗಿ ಮಹಿಳೆಯರು ಉತ್ತಮ ಆಡಳಿತ ನೀಡುತ್ತಿದ್ದಾರೆ ಎಂದು ನಗರದ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇದರ ಹಿಂದೆ ಈ ಹಿಂದಿನ ಮಹಿಳಾ ಅಧ್ಯಕ್ಷರ ಕಾರ್ಯಕ್ಷಮತೆಯೂ ಇದೆ ಎಂದರು.

ನೂತನ ಅಧ್ಯಕ್ಷೆ ಸಮೀನಾ ಪರ್ವೀನ್ ಮಾತನಾಡಿ, ನನ್ನ ಅಧಿಕಾರವಧಿಯಲ್ಲಿ ನಗರಸಭಾ ವ್ಯಾಪ್ತಿಯ ಎಲ್ಲಾ ವಾರ್ಡ್‌ಗಳಲ್ಲೂ ಅವಶ್ಯವಿರುವ ಕಡೆ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ತೆರೆಯಲು ಕ್ರಮ ವಹಿಸುತ್ತೇನೆ. ಅಲ್ಲದೆ ನಗರದ ಸ್ವಚ್ಛತೆ, ಬೀದಿ ದೀಪ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಹೆಚ್ಚು ಗಮನ ಹರಿಸುತ್ತೇನೆ ಎಂದರು.

ಕಳೆದ 2 ಬಾರಿಯಿಂದ ಅಲ್ಪಸಂಖ್ಯಾತರಿಗೆ ಅವಕಾಶ ಕಲ್ಪಿಸುವುದಾಗಿ ಹೇಳುತ್ತಿದ್ದ ಶಾಸಕರು ನಿನ್ನೆ ರಾತ್ರಿವರೆಗೂ ಕ್ರೈಸ್ತ ಸಮುದಾಯದ 29ನೇ ವಾರ್ಡ್‌ನ ಪ್ರಿಯಾಂಕ ಥಾಮಸ್ ಅವರಿಗೆ ಅವಕಾಶ ನೀಡುವುದಾಗಿ ಹೇಳಿದ್ದರು. ಇಂದು ಬೆಳ್ಳಂಬೆಳಗ್ಗೆ ನಿರ್ಧಾರ ಬದಲಾಯಿಸಿರುವ ಶಾಸಕರ ನಿರ್ಧಾರ ಸರಿ ಇಲ್ಲ ಎಂದು ನರಸಿಂಹಸ್ವಾಮಿ ಬಡಾವಣೆಯ ತಿಮ್ಮಾರೆಡ್ಡಿ ಕೂಗಾಡಿ ಗಲಾಟೆ ಮಾಡಿದಾಗ ಕೆಲ ಸಮಯ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಈ ವೇಳೆ ಪೊಲೀಸರು ಮಧ್ಯ ಪ್ರವೇಶಿಸಿ ವಾತಾವರಣ ತಿಳಿಗೊಳಿಸಿದರು.

ಅಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆಗೆ ಮೀಸಲಾಗಿದ್ದು, ಕಾಂಗ್ರೆಸ್ ವರಿಷ್ಠರ ಆಣತಿಯಂತೆ 6 ತಿಂಗಳಿಗೆ ಒಬ್ಬರಂತೆ ಐವರಿಗೆ ಅಧಿಕಾರ ನಿಗದಿಸಲಾಗಿತ್ತು. ಅದರಂತೆ ಮೊದಲ ಅವಧಿಯಲ್ಲಿ ಅನುಷಾ 10 ತಿಂಗಳು ಅಧಿಕಾರ ಪೂರೈಸಿದರು. ನಂತರ ಸೌರಭ 5 ತಿಂಗಳು ತಮ್ಮ ಅವಧಿ ಪೂರೈಸಿದರು. ನಗರಸಭೆ ಎರಡನೇ ಅವಧಿಯ 30 ತಿಂಗಳಲ್ಲಿ ಈಗಾಗಲೇ 15 ತಿಂಗಳು ಮುಗಿದಿದ್ದು, ಉಳಿದ 15 ತಿಂಗಳಿಗೆ ಸಮೀನಾ ಪರ್ವೀನ್ ಅವರನ್ನು ಆಯ್ಕೆ ಮಾಡಲಾಗಿದೆ. ಅಲ್ಲದೇ ಪಕ್ಷದ ಒಳ ಒಪ್ಪಂದದಂತೆ 4ನೇ ವಾರ್ಡ್‌ನ ಭವ್ಯ, 24ನೇ ವಾರ್ಡ್‌ನ ಗೀತಾ, 25ನೇ ವಾರ್ಡ್‌ನ ಮಂಜು ಅವರಿಗೂ ಅಧ್ಯಕ್ಷ ಸ್ಥಾನ ನೀಡಬೇಕಿರುವುದರಿಂದ ಉಳಿದ 15 ತಿಂಗಳ ಅಧಿಕಾರದಲ್ಲಿ ಎಲ್ಲರಿಗೂ ತಲಾ 3 ತಿಂಗಳು ಅಧಿಕಾರ ನೀಡಬೇಕಿದೆ. ಆದರೆ ಯಾರ್‍ಯಾರಿಗೆ ಎಷ್ಟು ತಿಂಗಳು ಅಧಿಕಾರ ಸಿಗುತ್ತದೆ ಎಂಬುದು ಕಾದು ನೋಡಬೇಕಿದೆ.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ಜೇಮ್ಸ್ (ಕ): ಬೆ.9.55ಕ್ಕೆ, ಮ.12.55ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಮ.3.50ಕ್ಕೆ.

ಸ್ಕ್ರೀನ್ 2 ಜೇಮ್ಸ್ (ಕ): ಬೆ.8ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7.10ಕ್ಕೆ, ಒರುತಿ (ಮ): ಬೆ.10.50ಕ್ಕೆ, ಆಂಬುಲೆನ್ಸ್ (ಇಂ): ರಾ.10ಕ್ಕೆ.

ಸ್ಕ್ರೀನ್ 3 ಎದರ್ಕುಂ ತುನಿಂದವನ್ (ತ): ಬೆ.10.05ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಮ.1ಕ್ಕೆ, ಬಚ್ಚನ್ ಪಾಂಡೆ (ಹಿಂ): ಸಂ.4.10ಕ್ಕೆ, ರಾ.7.05ಕ್ಕೆ, ರಾ.9.55ಕ್ಕೆ.

ಸ್ಕ್ರೀನ್ 4 ದಿ ಕಾಶ್ಮೀರ್ ಫೈಲ್ಸ್ (ಹಿಂ): ಬೆ.10ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ರಾಧೆಶ್ಯಾಮ್ (ತೆ): ಮ.1.15ಕ್ಕೆ, ಜೇಮ್ಸ್ (ಕ): ಮ.3.55ಕ್ಕೆ.

ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1 ಜೇಮ್ಸ್ (ಕ): ಬೆ.8.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.35ಕ್ಕೆ, ರಾ.9.50ಕ್ಕೆ.

ಸ್ಕ್ರೀನ್ 2 ದಿ ಕಾಶ್ಮೀರ್ ಫೈಲ್ಸ್ (ಹಿಂ): ಬೆ.10.30ಕ್ಕೆ, ಮ.2.05ಕ್ಕೆ, ಸಂ.5.40ಕ್ಕೆ, ರಾ.9.15ಕ್ಕೆ.

ಸ್ಕ್ರೀನ್ 3 ಬಚ್ಚನ್ ಪಾಂಡೆ (ಹಿಂ): ಬೆ.9.20ಕ್ಕೆ, ಮ.3.45ಕ್ಕೆ, ಸಂ.6.50ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಮ.12.20ಕ್ಕೆ, ರಾ.9.55ಕ್ಕೆ.

ಸ್ಕ್ರೀನ್ 4 ಜೇಮ್ಸ್ (ಕ): ಬೆ.11.15ಕ್ಕೆ, ಮ.2.30ಕ್ಕೆ, ಸಂ.5.45ಕ್ಕೆ, ಬಚ್ಚನ್ ಪಾಂಡೆ (ಹಿಂ): ರಾ.9ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1 ಏಕ್ ಲವ್‌ಯಾ (ಕ): ಬೆ.10.45ಕ್ಕೆ, ಮ.1.45ಕ್ಕೆ, ಸಂ.6.35ಕ್ಕೆ, ಓಲ್ಡ್‌ಮಾಂಕ್ (ಕ): ರಾ.9.30ಕ್ಕೆ.

ಸ್ಕ್ರೀನ್ 2 ಎದರ್ಕುಂ ತುನಿಂದವನ್ (ತ): ಬೆ.10.45ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ.

ಸ್ಕ್ರೀನ್ 3 ರಾಧೆಶ್ಯಾಮ್ (ತೆ): ಬೆ.10.30ಕ್ಕೆ, ಮ.1.15ಕ್ಕೆ, ಸಂ.4ಕ್ಕೆ, ಸಂ.6.45ಕ್ಕೆ, ರಾ.9.30ಕ್ಕೆ.

ಸ್ಕ್ರೀನ್ 4 ಆ ತೊಂಭತ್ತು ದಿನಗಳು (ಕ): ಬೆ.11ಕ್ಕೆ, ಡಿಯರ್ ಸತ್ಯ (ಕ): ಮ.1.30ಕ್ಕೆ, ಎದರ್ಕುಂ ತುನಿಂದವನ್ (ತ): ಸಂ.4.15ಕ್ಕೆ, ಹರೀಶ ವಯಸ್ಸು 36 (ಕ): ರಾ.7.15ಕ್ಕೆ, ಪದ (ಮ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಲವ್ ಮಾಕ್ಟೇಲ್ 2 (ಕ): ಸಂ.6ಕ್ಕೆ, ಡಿಯರ್ ಸತ್ಯ (ಕ): ಮ.12.35ಕ್ಕೆ, ರಾಧೆಶ್ಯಾಮ್ (ತೆ): ಬೆ.10.05ಕ್ಕೆ, ಬೆ.11.30ಕ್ಕೆ, ಮ.12.10ಕ್ಕೆ, ಮ.1ಕ್ಕೆ, ಮ.2.25ಕ್ಕೆ, ಮ.3.05ಕ್ಕೆ, ಮ.3.55ಕ್ಕೆ, ಸಂ.5.20ಕ್ಕೆ, ಸಂ.6.50ಕ್ಕೆ, ರಾ.8.15ಕ್ಕೆ, ರಾ.9.45ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಮ.2.50ಕ್ಕೆ, ರಾ.9.45ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ಬೆ.11.30ಕ್ಕೆ, ಸಂ.6.25ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಮ.3.15ಕ್ಕೆ, ರಾ.9.45ಕ್ಕೆ, ಭೀಷ್ಮಪರ್ವಂ (ಮ): ರಾ.9ಕ್ಕೆ, ಪದ (ಮ): ಸಂ.6.40ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.20ಕ್ಕೆ, ಮ.12.30ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೆಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	**(ದೂ: 2521923)**
ಆರ್‌ಆರ್‌ಆರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಆರ್‌ಆರ್‌ಆರ್ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	**(ದೂ: 2520009)**
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಆರ್‌ಆರ್‌ಆರ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಹೋಂ ಮಿನಿಸ್ಟರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಜೇಮ್ಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಅಟ್ಯಾಕ್ (ಹಿ)	4 ಪ್ರದರ್ಶನಗಳು
ಸಂಗಂ	
ಜೇಮ್ಸ್ (ಕ)	4 ಪ್ರದರ್ಶನಗಳು
ಲಿಡೋ	
ಹೋಂ ಮಿನಿಸ್ಟರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಆರ್‌ಆರ್‌ಆರ್ (ಕ)	4 ಪ್ರದರ್ಶನಗಳು

ಚೆನ್ನೈಗೆ 2ನೇ ಸೋಲು, ಗೆಲುವಿನ ಖಾತೆ ತೆರೆದ ಲಖನೌ

ಮುಂಬೈ, ಮಾ.31– ಕ್ವಿಂಟನ್ ಡಿ ಕಾಕ್, ಎವಿನ್ ಲೂಯಿಸ್ ಬಿರುಸಿನ ಬ್ಯಾಟಿಂಗ್ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಲಖನೌ ಸೂಪರ್ ಜೈಂಟ್ಸ್ 6 ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸಿತು. ಈ ಮೂಲಕ ಲಖನೌ ಟೂರ್ನಿಯಲ್ಲಿ ಮೊದಲ ಗೆಲುವು ದಾಖಲಿಸಿತು. ಅತ್ತ ಚೆನ್ನೈ ಐಪಿಎಲ್ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಸೀಸನ್ ಆರಂಭದ ಮೊದಲೆರಡು ಪಂದ್ಯ ಗಳಲ್ಲಿ ಸೋಲು ಅನುಭವಿಸಿದೆ.



ಮುಂಬೈನ ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ ಆರಂಭದಲ್ಲಿಯೇ ಋತುರಾಜ್ ಗಾಯಕ್ವಾಡ್ 1ರನ್ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ವಿಕೆಟ್‌ನ ಇನ್ನೊಂದು ತುದಿಯಿಂದ ರಾಬಿನ್ ಉತ್ತಪ್ಪ ಆಕ್ರಮಣಕಾರಿ ಆಟವಾಡುವ ಮೂಲಕ ಗಮನ ಸೆಳೆದರು.

ಲಖನೌ ಬೌಲರ್‌ಗಳನ್ನು ದಂಡಿಸಿದ ಉತ್ತಪ್ಪ 27 ಎಸೆತಗಳಲ್ಲಿ 8 ಬೌಂಡರಿ ಹಾಗೂ ಒಂದು ಸಿಕ್ಸರ್‌ನಿಂದ 50ರನ್ ಗಳಿಸಿದರು. ಅರ್ಧಶತಕ ಸಾಧನೆ ಮಾಡಿದರು. ಅವರಿಗೆ ಮೊಯಿನ್ ಅಲಿ 35ರನ್ ಗಳಿಸಿ ಉತ್ತಮ ಸಾಥ್ ನೀಡಿದರು. ಅಲ್ಲದೆ ಎರಡನೇ ವಿಕೆಟ್‌ಗೆ 56 ರನ್‌ಗಳ ಜೊತೆಯಾಟದಲ್ಲಿ ಭಾಗಿಯಾದರು. ಕೊನೆಯ ಓವರ್‌ಗಳಲ್ಲಿ ಬಿರುಸಿನ ಬ್ಯಾಟಿಂಗ್ ಮಾಡಿದ ಶಿವಂ ದುಬೆ 5 ಬೌಂಡರಿ, 2 ಸಿಕ್ಸರ್‌ನಿಂದ 49 ರನ್ ಗಳಿಸಿ ತಂಡದ ಮೊತ್ತವನ್ನು 200ರ ಗಡಿ ದಾಟಿಸಿದರು. ಅಂತಿಮವಾಗಿ ಚೆನ್ನೈ ಸೂಪರ್ ಕಿಂಗ್ಸ್ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 210ರನ್‌ಗಳ ಬೃಹತ್ ಮೊತ್ತ ದಾಖಲಿಸಿತು.

ತಂಡದ ಪರವಾಗಿ ಅಂಬಟಿ ರಾಯುಡು 27, ರವೀಂದ್ರ ಜಡೇಜಾ 17, ಮಹೇಂದ್ರ ಸಿಂಗ್ ಧೋನಿ 16ರನ್ ಗಳಿಸಿದರು. ಬೌಲಿಂಗ್‌ನಲ್ಲಿ ಲಖನೌ ಪರವಾಗಿ ಅವೇಶ್‌ಖಾನ್, ಆಂಡ್ರ ಟೈ, ರವಿ ಬಿಷ್ಣೋಯಿ ತಲಾ 2 ವಿಕೆಟ್ ಪಡೆದರು.

211ರನ್‌ಗಳ ಗುರಿ ಬೆನ್ನತ್ತಿದ್ದ ಲಖನೌಗೆ ನಾಯಕ ಕೆ.ಎಲ್.ರಾಹುಲ್ ಹಾಗೂ ಕ್ವಿಂಟನ್ ಡಿ ಕಾಕ್ ಬಿರುಸಿನ ಆರಂಭವೊದಗಿಸಿದರು. ಈ ಜೋಡಿ ಮೊದಲ ವಿಕೆಟ್‌ಗೆ 99ರನ್‌ಗಳ ಕಾಣಿಕೆ ನೀಡಿತು. ಈ ವೇಳೆ 40ರನ್ ಗಳಿಸಿದ್ದ ರಾಹುಲ್ ವಿಕೆಟ್ ಒಪ್ಪಿಸಿ ಪೆವಿಲಿಯನ್ ಸೇರಿಕೊಂಡರು. ಬಳಿಕ ಬಂದ ಮನೀಷ್ ಪಾಂಡೆ ಕೇವಲ 5ರನ್ ಗಳಿಸಿ ನಿರಾಶೆ ಮೂಡಿಸಿದರು. 45 ಎಸೆತಗಳಲ್ಲಿ 9 ಬೌಂಡರಿಯೊಂದಿಗೆ 61ರನ್ ಗಳಿಸಿ ಉತ್ತಮ ಬ್ಯಾಟಿಂಗ್ ಮಾಡುತ್ತಿದ್ದ ಡಿ ಕಾಕ್ ವಿಕೆಟ್ ಒಪ್ಪಿಸಿದರು. ಬಳಿಕ ಕ್ರೀಸ್‌ಗೆ ಬಂದ ಎವಿನ್ ಲೂಯಿಸ್ 23 ಎಸೆತಗಳಲ್ಲಿ 6 ಬೌಂಡರಿ ಹಾಗೂ 3 ಭರ್ಜರಿ ಸಿಕ್ಸರ್‌ನಿಂದ ಅಜೇಯ 55ರನ್ ಗಳಿಸಿ ತಂಡವನ್ನು ಗೆಲುವಿನ ದಡ ದಾಟಿಸಿದರು. ಅಂತಿಮವಾಗಿ ಲಖನೌ 19.3 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 211ರನ್ ಗಳಿಸಿ ಗೆಲುವಿನ ಸಂಭ್ರಮ ಆಚರಿಸಿತು. ಬೌಲಿಂಗ್‌ನಲ್ಲಿ ಚೆನ್ನೈ ಪರ ಡ್ವೇನ್ ಪ್ರಿಟೋರಿಯಸ್ 2, ತುಷಾರ್ ದೇಶಪಾಂಡೆ, ಡ್ವೇನ್‌ಬ್ರಾವೊ ತಲಾ ಒಂದು ವಿಕೆಟ್ ಪಡೆದರು. ಬಿರುಸಿನ ಬ್ಯಾಟಿಂಗ್ ಮಾಡಿದ ಎವಿನ್ ಲೂಯಿಸ್ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.